ಬೀದರ | ಕಲಬುರಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಸಾರ Postal Reg. No. BDR/054/2026-2027 Email: mallammanudi@gmail.com E-paper: www.mallammanudi.in

# ಮಲ್ಲಮ್ಮ ನುಡಿ

ಸತ್ಯಮೇವ ಜಯತೆ

ಪ್ರಾದೇಶಿಕ ಕನ್ನಡ ದಿನಪತ್ರಿಕೆ

ಸಂಪಾದಕರು: ರಮೇಶರೆಡ್ಡಿ | 9448 604450

Mallammanudi Regional News Paper | Editor: Ramesh Reddy | RNI NO:KARKAN/2011/48371

VOLUME - 13 ಸಂಪುಟ-13 | ISSUE - 54 ಸಂಚಿಕೆ- 54 | PAGE- 8 ಪುಟ-8 | ಗುರುವಾರ 03.04.2025 | RS.2/- ಬೆಲೆ 2/-

## ವಕ್ಫ್ ಮಸೂದೆಗೆ ಉಮೀದ್ ವಿಧೇಯಕವೆಂದು ಮರುನಾಮಕರಣ: ಕಿರಣ್ ರಿಜಿಜು

ಮಲ್ಲಮ ನುಡಿ ವಾರ್ತೆ

ನವದೆಹಲಿ:ಏ.2: ಪ್ರತಿಪಕ್ಷಗಳ ತೀವ್ರ ಗದ್ದಲ ಹಾಗೂ ವಿರೋಧದ ನಡುವೆಯೂ ಬುಧವಾರ ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಲೋಕಸಭೆಯಲ್ಲಿ ವಕ್ಫ್ ತಿದ್ದುಪಡಿ ಮಸೂದೆ 2024 ಅನ್ನು ಮಂಡಿಸಿದ್ದಾರೆ.



ಲೋಕಸಭೆಯಲ್ಲಿ ವಕ್ಫ್(ತಿದ್ದುಪಡಿ) ಮಸೂದೆ ಮಂಡಿಸಿ ಮಾತನಾಡಿದ ಕಿರಣ್ ರಿಜಿಜು ಅವರು, "ವಕ್ಫ್ ಮಸೂದೆಯನ್ನು ಏಕೀಕೃತ ವಕ್ಫ್ ನಿರ್ವಹಣಾ ಸಬಲೀಕರಣ, ದಕ್ಷತೆ ಮತ್ತು ಅಭಿವೃದ್ಧಿÞ(UMEED) ಮಸೂದೆ ಎಂದು ಮರುನಾಮಕರಣ ಮಾಡಲಾಗುವುದು" ಎಂದರು.

ಈ ಮಸೂದೆಯು ವಕ್ಫ್ ಆಸ್ತಿಗಳ ಆಡಳಿತವನ್ನು ಸುಧಾರಿಸಲು, ತಂತ್ರಜ್ಞಾನ ಆಧಾರಿತ ನಿರ್ವಹಣೆಯನ್ನು ಪರಿಚಯಿಸಲು, ಸಂಕೀರ್ಣತೆಗಳನ್ನು ಪರಿಹರಿಸಲು ಮತ್ತು ಪಾರದರ್ಶಕತೆಯನ್ನು ಖಚಿತಪಡಿಸಿಕೊಳ್ಳಲು ಪ್ರಯತ್ನಿಸುತ್ತದೆ.

ಜಂಟಿ ಸಂಸದೀಯ ಸಮಿತಿಯ (ಜೆಪಿಸಿ) ನಡೆಸಿದ ಸಮಾಲೋಚನಾ ಪ್ರಕ್ರಿಯೆಯು ಭಾರತದ ಪ್ರಜಾಪ್ರಭುತ್ವ ಇತಿಹಾಸದಲ್ಲಿಯೇ ಅತಿದೊಡ್ಡ ಪ್ರಕ್ರಿಯೆಯಾಗಿದೆ ಎಂದರು.

"ಭಾರತವು ವಿಶ್ವದಲ್ಲೇ ಅತಿ ಹೆಚ್ಚು ವಕ್ಫ್ ಆಸ್ತಿಗಳನ್ನು ಹೊಂದಿದೆ. ವಕ್ಫ್ ಮಸೂದೆ ಬೆಂಬಲಿಸುವ ಮತ್ತು ವಿರೋಧಿಸುವವರನ್ನು ದೇಶ ಯುಗಯುಗಾಂತರಗಳಿಂದ ನೆನಪಿಸಿಕೊಳ್ಳುತ್ತದೆ. 70 ವರ್ಷಗಳಿಂದ ಮತ ಬ್ಯಾಂಕ್ ರಾಜಕೀಯಕ್ಕಾಗಿ ಮುಸ್ಲಿಮರನ್ನು ದಾರಿ ತಪ್ಪಿಸಲಾಯಿತು; ನೀವು ಅವರನ್ನು ಎಷ್ಟು ದಿನ ದಾರಿ ತಪ್ಪಿಸಲು ಬಯಸುತ್ತೀರಿ. ವಕ್ಫ್ ಆಸ್ತಿಯನ್ನು ಬಡ ಮುಸ್ಲಿಮರಿಗಾಗಿ ಬಳಸಬೇಕು, ಈ ಉದ್ದೇಶವನ್ನು ಸಾಧಿಸಲು ವಕ್ಫ್ ಮಸೂದೆ ಅಗತ್ಯವಿದೆ" ಎಂದರು.

"ಈ ಹಿಂದಿನ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರವು, ವಕ್ಫ್ ಕಾನೂನುಗಳಲ್ಲಿ ಭಾರೀ ತಪ್ಪುಗಳನ್ನು ಮಾಡಿದೆ. ಒಂದು ವೇಳೆ ನಮ್ಮ ಸರ್ಕಾರ ಈ ತಿದ್ದುಪಡಿಗಳನ್ನು ಮಾಡದೇ ಹೋಗಿದ್ದರೆ, ಸಂಸತ್ ಭವನವನ್ನೂ ವಕ್ಫ್ ಆಸ್ತಿ ಎಂದು ಹೇಳಿಕೊಳ್ಳುವ ಸಾಧ್ಯತೆ ಇತ್ತು.." ಎಂದು ಕಿರಣ್ ರಿಜಿಜು ಗಂಭೀರ ಆರೋಪ ಮಾಡಿದ್ದಾರೆ.

"ಕಾಂಗ್ರೆಸ್ ಕೇಂದ್ರದಲ್ಲಿ ಅಧಿಕಾರದಲ್ಲಿದ್ದಾಗ ವಕ್ಫ್ ಕಾನೂನುಗಳಿಗೆ ಅನುಮಾನಾಸ್ಪದ ಬದಲಾವಣೆಗಳನ್ನು ಮಾಡಿದೆ. 123 ಪ್ರಮುಖ ಕಟ್ಟಡಗಳನ್ನು ವಕ್ಫ್‌ಗೆ ನೀಡಲಾಗಿತ್ತು. ಯುಪಿಎ ಸರ್ಕಾರವು ಸಂಸತ್ತನ್ನೂ ವಕ್ಫ್‌ಗೆ ನೀಡಲು ಸಿದ್ಧವಾಗಿತ್ತು. ಆದರೆ 2014ರಲ್ಲಿ ಅಧಿಕಾರಕ್ಕೆ ಬಂದ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ, ಈ ಪ್ರಯತ್ನಗಳನ್ನು ತಡೆಹಿಡಿಯಿತು.." ಎಂದು ಕಿರಣ್ ರಿಜಿಜು ಹೇಳಿದ್ದಾರೆ. 2004 ರ ಹೊತ್ತಿಗೆ ವಕ್ಫ್ ಬಳಿ ಒಟ್ಟು 4.9 ಲಕ್ಷ ರೂ. ಮೌಲ್ಯದ ಆಸ್ತಿ ಇತ್ತು ಮತ್ತು ಆದಾಯ ಕೇವಲ 163 ಕೋಟಿ ರೂ.ಗಳಷ್ಟಿತ್ತು. ಆದರೆ 2013 ರ ತಿದ್ದುಪಡಿಯ ನಂತರ ಆದಾಯವು 166 ಕೋಟಿ ರೂ.ಗೆ ಏರಿಕೆಯಾಯಿತು. ಕೇವಲ 3 ಕೋಟಿ ಮಾತ್ರ ಏರಿಕೆ ಹೇಗಾಯ್ತು ಎಂದು ಪ್ರಶ್ನಿಸಿದರು.

ಇಷ್ಟು ದೊಡ್ಡ ಪ್ರಮಾಣದಲ್ಲಿ ಆಸ್ತಿ ಇರುವ ವಕ್ಫ್‌ನಿಂದ ಅಲ್ಪ ಆದಾಯವನ್ನು ಸ್ವೀಕರಿಸಲು ಸಾಧ್ಯವಿಲ್ಲ. ಆದಾಯ ಕನಿಷ್ಠವಾದರೂ 12 ಸಾವಿರ ಕೋಟಿ ರೂ.ಗಳಾಗಿರಬೇಕು. ವಕ್ಫ್ ಆಸ್ತಿಯ ಲಾಭ ಬಡ ಮುಸ್ಲಿಮರಿಗೆ ಆಗಬೇಕು. ಈ ಉದ್ದೇಶ ಈಡೇರಿಕೆಗೆ ವಕ್ಫ್ ಮಸೂದೆಯ ಅಗತ್ಯವಿದೆ ಎಂದು ಪ್ರತಿಪಾದಿಸಿದರು.

ವಕ್ಫ್ ಆಸ್ತಿಯನ್ನು ಸರಿಯಾಗಿ ಬಳಸಿಕೊಂಡರೆ ವರ್ಷಕ್ಕೆ 12,000 ಕೋಟಿ ರೂ. ಆದಾಯ ಗಳಿಸಬಹುದು ಎಂದು ಸಾಚಾರ್ ಸಮಿತಿ ಹೇಳಿತ್ತು. 2006 ರಲ್ಲಿ ತನ್ನ ವರದಿಯನ್ನು ಸಲ್ಲಿಸಿದ ಸಾಚಾರ್ ಸಮಿತಿಯು, ಈ ಆಸ್ತಿಗಳನ್ನು ಸಮರ್ಥ ಮತ್ತು ಮಾರುಕಟ್ಟೆ ಬಳಕೆಗೆ ಒಳಪಡಿಸಿ ಕನಿಷ್ಟ 10% ರಷ್ಟು ಬಳಕೆ ಮಾಡಿದರೆ ವರ್ಷಕ್ಕೆ ಸುಮಾರು 12,000 ಕೋಟಿ ರೂಪಾಯಿಗಳ ಆದಾಯವನ್ನು ಗಳಿಸಬಹುದು ಎಂದು ಉಲ್ಲೇಖಿಸಿತ್ತು.

### ವಕ್ಫ್ ಆಸ್ತಿ ಎಷ್ಟಿದೆ?

ಸರ್ಕಾರಿ ಮಾಹಿತಿಯ ಪ್ರಕಾರ, ವಕ್ಫ್ ಮಂಡಳಿಗಳು ಪ್ರಸ್ತುತ ಭಾರತದಾದ್ಯಂತ 9.4 ಲಕ್ಷ ಎಕರೆಗಳಷ್ಟು ವಿಸ್ತೀರ್ಣ ಹೊಂದಿರುವ 8.7 ಲಕ್ಷ ಆಸ್ತಿಗಳ ನಿಯಂತ್ರಣ ಹೊಂದಿದೆ. ಈ ಎಲ್ಲಾ ಆಸ್ತಿಗಳ ಮೌಲ್ಯ 1.2 ಲಕ್ಷ ಕೋಟಿ ರೂ. ಸಶಸ್ತ್ರ ಪಡೆಗಳು ಮತ್ತು ಭಾರತೀಯ ರೈಲ್ವೆಯ ನಂತರ, ವಕ್ಫ್ ಮಂಡಳಿಯು ಭಾರತದಲ್ಲಿ ಅತಿಹೆಚ್ಚು ಭೂಮಿಯನ್ನು ಹೊಂದಿದ ಸಂಸ್ಥೆಯಾಗಿದೆ.

ವಕ್ಫ್ ಮಂಡಳಿಯ ಅಡಿಯಲ್ಲಿ 8,72,328 ಸ್ಥಿರ ಮತ್ತು 16,713 ಚರ ಆಸ್ತಿಗಳನ್ನು ನೋಂದಣಿ ಮಾಡಲಾಗಿದೆ. ವಕ್ಫ್ ಮಂಡಳಿಯ ಅಡಿಯಲ್ಲಿ 3,56, 051 ವಕ್ಫ್ ಎಸ್ಟೇಟ್‌ಗಳು ನೋಂದಾಯಿಸಲ್ಪಟ್ಟಿದೆ.



ಹುಮನಾಬಾದ್. ಮಾಜಿ ಸಚಿವ ರಾಜಶೇಖರ ಬಿ.ಪಾಟೀಲ ರವರು ತಮ್ಮ ಹುಟ್ಟು ಹಬ್ಬದ ನಿಮಿತ್ಯ ಕುಟುಂಬ ಸದಸ್ಯರ ಜೊತೆ ಶ್ರೀ ವೀರಭದ್ರೇಶ್ವರ ದೇವಸ್ಥಾನಕ್ಕೆ ತೆರಳಿ ದರುಶನ ಪಡೆದರು. ಶ್ರೀ ಗಂಗಾಧರ ಶ್ರೀ ಗಳು ಆಶೀರ್ವಾದಿಸಿದರು.

## ಕಾಂಗ್ರೆಸ್ ಪಕ್ಷಕ್ಕೆ ಬೈದರೆ, ತಂದೆ-ತಾಯಿಗೆ ಬೈದಂತೆ : ಈಶ್ವರ್ ಖಂಡ್ರೆ

ಬೀದರ. ಏ. 02 : ವಕ್ಫ್ ತಿದ್ದುಪಡಿ ಮಸೂದೆ ವಿಚಾರದ ಕುರಿತು ಪ್ರತಿಕ್ರಿಯೆ ನೀಡಿದ ಶಾಸಕ ಈಶ್ವರ್ ಖಂಡ್ರೆ ಬಿಜೆಪಿಗರ ಮೇಲೆ ವಾಗ್ದಾಳಿ ನಡೆಸಿದ್ದು. ಕಾಂಗ್ರೆಸ್ ಇರೋದಕ್ಕೆ ಇನ್ನು ಈ ದೇಶ ಉಳಿದಿದೆ. ಬಿಜೆಪಿಗರು ಈ ಕಾಂಗ್ರೆಸ್‌ಗೆ ಕೃತಜ್ಞರಾಗಿರಬೇಕು ಎಂದು ಹೇಳಿದರು.



ಮಾತನಾಡಿದ ಸಚಿವ ಈಶ್ವರ್ ಖಂಡ್ರೆ

ಬೀದರ್?ನಲ್ಲಿ ಮಾಧ್ಯಮದೊಂದಿಗೆ 'ದೇಶದಲ್ಲಿ ಹಣದುಬ್ಬರ, ಬೆಲೆ ಏರಿಕೆ, ನಿರುದ್ಯೋಗದಂತಹ ಸಮಸ್ಯೆಗಳಿವೆ. ಆದರೆ ಬಿಜೆಪಿ ಸರ್ಕಾರ ಅದನ್ನೆಲ್ಲಾ ಬಿಟ್ಟು ಒಂದು ಸಮುದಾಯವನ್ನ ಉದ್ದೇಶವಾಗಿಟ್ಟುಕೊಂಡು ಈ ರೀತಿ ಮಾಡ್ತಾ ಇದ್ದಾರೆ. ಜಾತಿ ಜಾತಿ, ಧರ್ಮ ಧರ್ಮದ ನಡುವೆ ಕಲಹ ಸೃಷ್ಟಿಸುವ ಕೆಲಸ ಮಾಡ್ತಾ ಇದ್ದಾರೆ ಎಂದು ಹೇಳಿದರು.

(2ನೇ ಪುಟ ನೋಡಿ)

## ಕ್ಷೇತ್ರದ ಜನರ ವಿಶ್ವಾಸವಿರುವವರೆಗೆ ಜನಸೇವೆಯಲ್ಲಿ:ಪಾಟೀಲ



ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ್:ಏ.2:ಪಕ್ಷದ ಮುಖಂಡರು. ಕಾರ್ಯಕರ್ತರ ಒತ್ತಡದ ಮೇರೆಗೆ ಹುಟ್ಟು ಹಬ್ಬ ಆಚರಣೆ ಮಾಡಿಕೊಳ್ಳಲಾಗುತ್ತಿದೆ,

(2ನೇ ಪುಟ ನೋಡಿ)

## ಬ್ರಿಮ್ಸ್ ನೆಲಮಹಡಿ ಸಮಸ್ಯೆಗೆ ಸಿಗದ ಮುಕ್ತಿ: ಶಾಶ್ವತ ಕ್ರಮಕ್ಕೆ ಮೀನಮೇಷ





ಮಲ್ಲಮ್ಮ ನುಡಿ ವಾರ್ತೆ

ಬೀದರ. ಏ. 02 : ನಗರದ ಬೀದರ್ ವೈದ್ಯಕೀಯ ವಿಜ್ಞಾನ ಸಂಸ್ಥೆಯ (ಬ್ರಿಮ್ಸ್) ನೆಲಮಹಡಿ ಸಮಸ್ಯೆಗೆ ಇನ್ನೂ ಮುಕ್ತಿ ಸಿಕ್ಕಿಲ್ಲ. ಆಸ್ಪತ್ರೆಯ ನೆಲಮಹಡಿಯಲ್ಲಿ ಪುರಾತನ ಬಾವಿಯಿದ್ದು, ಅದರಿಂದ ಸತತವಾಗಿ ನೀರು ಹೊರಬಂದು ಸಂಗ್ರಹವಾಗುತ್ತಿದೆ. ಈ ಸಮಸ್ಯೆಯನ್ನು ಕೊನೆಗಾಣಿಸಿ ಶಾಶ್ವತ ಪರಿಹಾರ ಕಂಡುಕೊಳ್ಳಲು ಬೆಂಗಳೂರು ವೈದ್ಯಕೀಯ ಕಾಲೇಜು ಹಾಗೂ ತಂತ್ರಜ್ಞರ ನೆರವು ಪಡೆಯಲಾಗಿದೆ.

ಶಾಶ್ವತ ಪರಿಹಾರಕ್ಕೆ ವಿಸ್ತೃತವಾದ ಯೋಜನೆ ರೂಪಿಸಿ, ಮಾಹಿತಿ ಸಲ್ಲಿಸಿದೆ. 3 ಕೋಟಿ ವೆಚ್ಚದ ಕಾಮಗಾರಿಗೆ ಶಿಫಾರಸು ಮಾಡಿದೆ. ಆದರೆ, ಅದು ಇನ್ನೂ ಕಾರ್ಯರೂಪಕ್ಕೆ ಬಂದಿಲ್ಲ. ಇನ್ನಷ್ಟೇ ಕಾಮಗಾರಿ ಕೈಗೆತ್ತಿಕೊಳ್ಳಲು, ಟೆಂಡರ್ ಕರೆಯಲು ಆಡಳಿತಾತ್ಮಕ ಅನುಮೋದನೆ ಸಿಗಬೇಕಿದೆ.

ನಿಲ್ಲದ ನೀರಿನ ಸಂಗ್ರಹ: ಬ್ರಿಮ್ಸ್ ನೆಲಮಹಡಿಯಲ್ಲಿ ನೀರು ಸಂಗ್ರಹವಾಗುವುದು ಈಗಲೂ ನಿಂತಿಲ್ಲ. ಬೇಸಿಗೆಯಲ್ಲೂ ಅಪಾರ ಪ್ರಮಾಣದ ನೀರು ನೆಲಮಹಡಿಯಲ್ಲಿ ಸಂಗ್ರಹಗೊಂಡಿದೆ. ಇಡೀ ನೆಲಮಹಡಿಯಲ್ಲಿ ನೀರು ಆವರಿಸಿಕೊಂಡಿದ್ದು, ಯಾರೂ ಓಡಾಡದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಸತತವಾಗಿ ನೀರು ಸಂಗ್ರಹಗೊಳ್ಳುತ್ತಿರುವುದರಿಂದ ನೆಲಮಹಡಿ ದುರ್ಬಲವಾಗುತ್ತಿದೆ. ಈಗಲೂ ಮೋಟಾರ್ ಸಹಾಯದಿಂದ ನೀರು ಹೊರಹಾಕಲಾಗುತ್ತಿದೆ. ಆದರೆ,

(2ನೇ ಪುಟ ನೋಡಿ)

## ಹೊಸ ಪಕ್ಷ ಕಟ್ಟಿದವರು ಯಾರೂ ಯಶಸ್ವಿಯಾಗಿಲ್ಲ:ನಿರಾಣಿ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಏ.2–ಹೊಸ ಪಕ್ಷ ಕಟ್ಟಿದವರು ಯಾರೂ ಯಶಸ್ವಿಯಾಗಿಲ್ಲ. ಇದು ಚಿಕ್ಕ ಮಕ್ಕಳಿಗೂ ಗೊತ್ತು ಎಂದು ಹೇಳುವ ಮೂಲಕ ಮಾಜಿ ಸಚಿವ ಮುರುಗೇಶ ನಿರಾಣಿ, ಬಸನಗೌಡ ಪಾಟೀಲ ಯತ್ನಾಳ ಅವರಿಗೆ ಪರೋಕ್ಷವಾಗಿ ಟಾಂಗ್ ಕೊಟ್ಟಿದ್ದಾರೆ.



ಜಿಲ್ಲೆಯ ಜಮಖಂಡಿ ಪಟ್ಟಣದಲ್ಲಿ ಬುಧವಾರ ಸುದ್ದಿಗಾರರು ಯತ್ನಾಳ ಅವರು ಹೊಸ ಪಕ್ಷ ಕಟ್ಟಲು ಹೊರಟಿದ್ದಾರಲ್ಲ. ನಿಮ್ಮ ಅಭಿಪ್ರಾಯವೇನು ಎಂದು ಕೇಳಿದ ಪ್ರಶ್ನೆಗೆ ಉತ್ತರಿಸಿದ ಮುರುಗೇಶ ನಿರಾಣಿ, ರಾಜ್ಯದಲ್ಲಿ ಹೊಸ ಪಕ್ಷ ಕಟ್ಟಿದವರು ಯಾರೂ ಯಶಸ್ವಿಯಾಗಿಲ್ಲ. ಇದು ಎಲ್ಲರಿಗೂ ಗೊತ್ತಿರುವ ವಿಷಯ ಎಂದರು. ಬಸನಗೌಡ ಪಾಟೀಲ ಅನುಭವಿ ರಾಜಕಾರಣಿ. ಅವರಿಗೂ ಎಲ್ಲವೂ ಗೊತ್ತಿದೆ. ಅವರಿಗೆ ಸಲಹೆ, ಮಾರ್ಗದರ್ಶನ ಮಾಡುವವರು ಯಾರೂ ಇಲ್ಲ. ಅವರು ಸ್ವತಂತ್ರರು. ಉತ್ತರ ಕರ್ನಾಟಕಕ್ಕೆ ಅನ್ಯಾಯವಾಗಿದೆ ಅದಕ್ಕಾಗಿ ನನ್ನ

(2ನೇ ಪುಟ ನೋಡಿ)

## ದೇವರ ದಾಸಿಮಯ್ಯನವರ ವಚನಗಳು ಇಂದಿಗೂ ಪ್ರಸ್ತುತ:ಸಚಿವ ಈಶ್ವರ ಬಿ.ಖಂಡ್ರೆ



ಮಲ್ಲಮ್ಮನುಡಿ ವಾರ್ತೆ ಬೀದರ:ಏ.2: ದೇವರ ದಾಸಿಮಯ್ಯನವರ ವಚನಗಳು 12ನೇ ಶತಮಾನದಲ್ಲಿ ಹೇಳಿದರು ಕೂಡ ಇಂದಿಗೂ ಪ್ರಸ್ತುತವಾಗಿವೆ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಹಾಗೂ ಬೀದರ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಬಿ.ಖಂಡ್ರೆ ಅವರು ಹೇಳಿದರು.

ಅವರು ಇಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಬೀದರ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೀದರ ಇವರ ಸಂಯುಕ್ತಾಶ್ರಯದಲ್ಲಿ ನಗರದ ಪೂಜ್ಯ ಶ್ರೀ ಚನ್ನಬಸವ ಪಟ್ಟದೇವರು ರಂಗಮಂದಿರದಲ್ಲಿ ನಡೆದ ಶ್ರೀ ದೇವರ ದಾಸಿಮಯ್ಯ ಜಯಂತ್ಯುತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಆಧ್ಯವಚನಕಾರ ದೇವರ ದಾಸಿಮಯ್ಯನವರು ಸಮಾಜದ ಸುಧಾರಣೆಗೆ ಅವರ ಕೊಡುಗೆ ಅಪಾರವಾಗಿದೆ. ತಮ್ಮ ವಚನಗಳ ಮೂಲಕ ಸಮಾನತೆ, ಮೌಢ್ಯಗಳ ಖಂಡನೆ ಮಾಡಿದ್ದಾರೆ. ಮಹಿಳೆಯರಿಗೆ ಸ್ವಾತಂತ್ರ್ಯ, ಸಮಾನತೆ ಒದಗಿಸುವುದು ಮತ್ತು ಸಮಾಜವನ್ನು ಒಂದುಗೂಡಿಸುವ ಕೆಲಸಗಳು ದೇವರ ದಾಸಿಮಯ್ಯ ನವರ ವಚನಗಳಲ್ಲಿ ಕಾಣಬಹುದಾಗಿದೆಂದರು.

ನೇಕಾರ ಮತ್ತು ಜಾಡರ ಸಮುದಾಯದವರು ಕಾರ್ಯ ನಿಷ್ಠಾವಂತರಾಗಿದ್ದಾರೆ, ನಾಗರಿಕತೆ ಅತ್ಯುತ್ತಮ ಬೆಳವಣಿಗೆ ಇವರ ಕೊಡುಗೆ ಅಪಾರವಾಗಿದೆ. ನಮ್ಮ ಸರ್ಕಾರ ಕೂಡ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ತಲುಪುವಂತಹ ಯೋಜನೆಗಳನ್ನು ಜಾರಿಗೆ ತಂದಿದೆ. 'ಸರ್ವರಿಗೂ ಸಮಬಾಳು ಸರ್ವರಿಗೂ ಸಮಪಾಲು' ಎಂಬಂತೆ ನಮ್ಮ ಸರ್ಕಾರ ಕಾರ್ಯ ನಿರ್ವಹಿಸುತ್ತಿದೆ. ಎಲ್ಲರ ಅಭಿವೃದ್ಧಿಗಾಗಿ ಪಂಚ ಗ್ಯಾರಂಟಿಗಳನ್ನು ಜಾರಿಗೆ ತಂದಿದ್ದೇವೆ ಹಾಗೂ ನೇಕಾರ ಸಮುದಾಯದ ಎಲ್ಲಾ ಬೇಡಿಕೆಗಳನ್ನು ಪ್ರಾಮಾಣಿಕವಾಗಿ ಈಡೇರಿಸುತ್ತೆವೆ ಮತ್ತು ಸಾಂಸ್ಕೃತಿಕ ಭವನ ನಿರ್ಮಾಣಕ್ಕೆ ನಿವೇಶನ ನೀಡುವುದಾಗಿ ತಿಳಿಸಿದರು.

ಲಿಂಗಾಯತ ಮಹಾಮಠದ ಸ್ವಾಮಿಜಿಗಳಾದ ಪೂಜ್ಯ ಶ್ರೀ ಪ್ರಭುದೇವ ಮಹಾಸ್ವಾಮಿಜಿ ಅವರು ತಮ್ಮ ಅತಿಥಿ ಉಪನ್ಯಾಸದಲ್ಲಿ

(2ನೇ ಪುಟ ನೋಡಿ)

## ತಾಪಮಾನ ಹೆಚ್ಚಳ: ಸರ್ಕಾರಿ ಕಚೇರಿಗಳ ಅವಧಿ ಬದಲು

ಕಲಬುರಗಿ: ಎ.2 ಬೇಸಿಗೆ ಹಿನ್ನೆಲೆಯಲ್ಲಿ ದಿನೇದಿನೆ ತಾಪಮಾನ ಹೆಚ್ಚಳ ಆಗುತ್ತಿರುವ ಕಾರಣಕ್ಕಾಗಿ ಕಲ್ಯಾಣ ಕರ್ನಾಟಕ ಭಾಗದ ಎಲ್ಲ ಏಳು ಜಿಲ್ಲೆಗಳು ವಿಜಯಪುರ, ಬಾಗಲಕೋಟೆ ಜಿಲ್ಲೆಗಳಲ್ಲಿ ಸರ್ಕಾರಿ ಕಚೇರಿಗಳ ಕೆಲಸದ ಅವಧಿಯಲ್ಲಿ ಮಾರ್ಪಾಡು ಮಾಡಿ ಸರ್ಕಾರ ಆದೇಶ ಹೊರಡಿಸಿದೆ. ಕಲ್ಯಾಣ ಕರ್ನಾಟಕ ಭಾಗದ ವಿಭಾಗೀಯ ಕೇಂದ್ರ ಸ್ಥಾನವೂ ಆಗಿರುವ ಕಲಬುರಗಿ, ಯಾದಗಿರಿ, ಬೀದರ್, ರಾಯಚೂರು, ಕೊಪ್ಪಳ, ಬಳ್ಳಾರಿ ಹಾಗೂ ವಿಜಯನಗರ ಹಾಗೂ ಬೆಳಗಾವಿ ವಿಭಾಗದ ವ್ಯಾಪ್ತಿಯಲ್ಲಿ ಬರುವ ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗಳ ಜನರ ಹಿತದೃಷ್ಟಿಯಿಂದ ಈ ಆದೇಶ ಹೊರಡಿಸಲಾಗಿದ್ದು, ಬೇಸಿಗೆ ಅವಧಿ ಮುಕ್ತಾಯದವರೆಗೆ ಬೆಳಗ್ಗೆ 8ರಿಂದ ಮಧ್ಯಾಹ್ನ 1.30 ಸರ್ಕಾರಿ ಕಚೇರಿಗಳು ಕಾರ್ಯನಿರ್ವಹಿಸಲಿವೆ ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಅಧೀನ ಕಾರ್ಯದರ್ಶಿ ವಿಶಾಲಾಕ್ಷಿ ಆರ್. ಆದೇಶದಲ್ಲಿ ತಿಳಿಸಿದ್ದಾರೆ. ಉತ್ತರ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ಬಿಸಿಲಿನ ಝಳ ಹೆಚ್ಚಾಗುತ್ತಿದ್ದು, ಈಗಾಗಲೇ ಕೆಲವು ಜಿಲ್ಲೆಗಳಲ್ಲಿ ತಾಪಮಾನ 40 ಡಿಗ್ರಿ ಸೆಲ್ಸಿಯಸ್ ದಾಟಿರುವ ಹಿನ್ನೆಲೆಯಲ್ಲಿ ದಾಖಲೆಯ ಝಳ ಜನರನ್ನು ಹೈರಾಣಾಗಿಸಿದೆ.

ಹಾಗಾಗಿ, ಪ್ರತಿ ವರ್ಷದಂತೆ ಈ ವರ್ಷವೂ ಸರ್ಕಾರಿ ಕಚೇರಿಗಳ ಸಮಯದಲ್ಲಿ ಬದಲಾವಣೆ ಮಾಡಿ ರಾಜ್ಯ ಸರ್ಕಾರ ಆದೇಶ ಜಾರಿಗೊಳಿಸಿದೆ.

ಏಪ್ರಿಲ್ ಹಾಗೂ ಮೇ ತಿಂಗಳ ಅವಧಿಗೆ ಈ ಆದೇಶ ಅನ್ವಯವಾಗಲಿದೆ ಎಂದು ಆದೇಶ ಸ್ಪಷ್ಟಪಡಿಸಿದೆ.



## ಒಂದನೇ ಪುಟದಿಂದ

# ಇಂದಿಗೂ ಪ್ರಸ್ತುತ:ಸಚಿವ ಈಶ್ವರ ಬಿ.ಖಂಡ್ರೆ

ಮಾತನಾಡಿ, ದೇವರ ದಾಸಿಮಯ್ಯ ನವರು 1130 ರಲ್ಲಿ ಯಾದಗಿರಿ ಜಿಲ್ಲೆಯ ಸುರಪುರ ತಾಲೂಕಿನ ಮುದನೂರು ಎಂಬ ಹಳ್ಳಿಯಲ್ಲಿ ಜನಿಸಿದರು. ಇವರ ಹೆಸರು 6 ವಚನಕಾರರ 12 ವಚನಗಳಲ್ಲಿ ಕಾಣಬಹುದು. ಇವರ 176 ವಚನಗಳು ದೊರತ್ತಿವೆ. ಇವರು ರಾಮನಾಥ ಎಂಬ ಅಂಕಿತನಾಮದಿಂದ ವಚನಗಳನ್ನು ರಚಿಸಿದ್ದಾರೆ. ಸಮಾಜದ ಸುಧಾರಣೆಗೆ ಮತ್ತು ಸಮಾಜದ ಒಳಿತಿಗಾಗಿ ಇವರ ವಚನಗಳು ಮುಖ್ಯವಾಗಿವೆ ಎಂದು ಹೇಳಿದರು.

ಕಾರ್ಯಕ್ರಮಕ್ಕೂ ಮುಂಚಿತವಾಗಿ ಬೆಳಿಗ್ಗೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಅಪರ ಜಿಲ್ಲಾಧಿಕಾರಿ ಶಿವಕುಮಾರ ಶೀಲವಂತ ಅವರು ಶ್ರೀ ದೇವರ ದಾಸಿಮಯ್ಯ ನವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ, ನಂತರ ರಥ ಮೆರವಣಿಗೆಗೆ ಚಾಲನೆ ನೀಡಿದರು.

ಈ ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿ ಶಿವಕುಮಾರ ಶಿಲವಂತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉಪನಿರ್ದೇಶಕರಾದ ಸಿದ್ರಾಮ ಸಿಂಧೆ ಮತ್ತು ಸಮಾಜದ ಮುಖಂಡರಾದ ಸೋಮಶೇಖರ ಅಮಲಾಪೂರೆ, ರಾಮಕೃಷ್ಣ ಸಾಳೆ, ನಾಗಪ್ಪ ಜಮಗಿ, ಮಹಾದೇವ ಚೌಡೆಕರ, ಶರಣಪ್ಪ ಹಾವಗೊಂಡ, ಪ್ರಶಾಂತ್ ಸಿಂದ್ರೆ, ಧನರಾಜ ಹಂಗರಗಿ ಮತ್ತು ಇತರೆ ಮುಖಂಡರು ಉಪಸ್ಥಿತರಿದ್ದರು.

# ಸಿಗದ ಮುಕ್ತಿ: ಶಾಶ್ವತ ಕ್ರಮಕ್ಕೆ ಮೀನಮೇಷ

ಅಷ್ಟೇ ಪ್ರಮಾಣದಲ್ಲಿ ಅಲ್ಲಿರುವ ಹಳೆಯ ಬಾವಿನಿಂದ ನೀರು ಸತತ ಸಂಗ್ರಹವಾಗುತ್ತಲೇ ಇದೆ.

'ಹೋದ ಸೆಪ್ಟೆಂಬರ್‌ನಲ್ಲಿ ಅಪಾರ ನೀರು ಸಂಗ್ರಹಗೊಂಡು, ವಿದ್ಯುತ್ ಪೂರೈಕೆ ಸ್ಥಗಿತಗೊಂಡ ನಂತರ ದೊಡ್ಡ ಸಮಸ್ಯೆ ಸೃಷ್ಟಿಯಾಗಿತ್ತು. ಈಗಲೂ ಆ ಘಟನೆ ನೆನಪಿಸಿಕೊಂಡರೆ ಭಯವಾಗುತ್ತದೆ. ಹಳೆಯ ತಪ್ಪಿನಿಂದ ಪಾಠ ಕಲಿತು ಆದಷ್ಟು ಬೇಗ ಅದನ್ನು ಸರಿಪಡಿಸಿಕೊಳ್ಳಬೇಕಿತ್ತು. ಆದರೆ, ಇದುವರೆಗೆ ಆ ನಿಟ್ಟಿನಲ್ಲಿ ಯಾವುದೇ ಕೆಲಸ ಆಗಿಲ್ಲ. ಬೇಸರದ ಸಂಗತಿ' ಎಂದು ಹೆಸರು ಹೇಳಲಿಚ್ಛಿಸದ ಬ್ರಿಮ್ಸ್ ಹಿರಿಯ ವೈದ್ಯರೊಬ್ಬರು ತಿಳಿಸಿದರು.

2024ರ ಸೆಪ್ಟೆಂಬರ್‌ನಲ್ಲಿ ಸುರಿದ ಭಾರಿ ಮಳೆಯ ನಂತರ ನೆಲಮಹಡಿಯಲ್ಲಿ ಅಪಾರ ಪ್ರಮಾಣದಲ್ಲಿ ನೀರು ಸಂಗ್ರಹವಾಗಿತ್ತು. ಅಲ್ಲಿದ್ದ ವಿದ್ಯುತ್ ಪ್ಯಾನಲ್, ಜನರೇಟರ್‌ನೊಳಗೆ ನೀರು ನುಗ್ಗಿ, ಶಾರ್ಟ್ ಸರ್ಕ್ಯೂಟ್ ಸಂಭವಿಸಿ ವಿದ್ಯುತ್ ಪೂರೈಕೆ ಸ್ಥಗಿತಗೊಂಡಿತ್ತು. ಆಸ್ಪತ್ರೆಯ ಮೂರು ಮತ್ತು ಆರನೇ ಮಹಡಿಯ ನವಜಾತ ಶಿಶು ಘಟಕದಲ್ಲಿ ವಿದ್ಯುತ್ ಪೂರೈಕೆ ಇಲ್ಲದೆ ಆಕ್ಸಿಜನ್ ಪೂರೈಕೆ ಸ್ಥಗಿತಗೊಂಡಿತ್ತು. ವಿಷಯ ಗಮನಕ್ಕೆ ಬರುತ್ತಿದ್ದಂತೆ ನವಜಾತ ಶಿಶುಗಳನ್ನು ಬೇರೆ ಆಸ್ಪತ್ರೆಗಳಿಗೆ ಸ್ಥಳಾಂತರಿಸಿ, ಜೀವ ಉಳಿಸಲಾಗಿತ್ತು. ಆಕ್ಸಿಜನ್ ಇಲ್ಲದೆ ಪರದಾಡುತ್ತಿದ್ದ ರೋಗಿಯೊಬ್ಬರಿಗೆ ಕೈಪಂಪ್ ಸಹಾಯದಿಂದ ಆಕ್ಸಿಜನ್ ಪೂರೈಸಿ ಜೀವ ಉಳಿಸಿದ ಘಟನೆಯೂ ನಡೆದಿತ್ತು. ಅಗ್ನಿಶಾಮಕ ದಳದವರ ನೆರವಿನೊಂದಿಗೆ ನೀರು ತೆರವುಗೊಳಿಸಲಾಗಿತ್ತು. ಬಳಿಕ ಈ ವಿಷಯ ಮಾಧ್ಯಮಗಳಲ್ಲಿ ದೊಡ್ಡ ಸುದ್ದಿಯಾಗಿತ್ತು.

ಸೆಪ್ಟೆಂಬರ್ 3 ಮತ್ತು 4ರ ನಡುವೆ ಘಟನೆ ಜರುಗಿತ್ತು. ಇದಾದ ನಂತರ ಸೆಪ್ಟೆಂಬರ್ 6ರಂದು ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಬಿ. ಖಂಡ್ರೆಯವರು ಸ್ಥಳಕ್ಕೆ ಭೇಟಿ ಕೊಟ್ಟು ಪರಿಶೀಲನೆ ನಡೆಸಿದ್ದರು. 'ತುರ್ತಾಗಿ ಸಮಸ್ಯೆ ಬಗೆಹರಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು. ಇದಕ್ಕಾಗಿ ಅಗತ್ಯಬಿದ್ದರೆ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಅನುದಾನ ಕೂಡ ಬಳಸಿಕೊಳ್ಳಲಾಗುವುದು' ಎಂದು ಹೇಳಿದ್ದರು.

ಶಿಲ್ಪಾ ಶರ್ಮಾ ಜಿಲ್ಲಾಧಿಕಾರಿ ಬೀದರ್?3 ಕೋಟಿ ಮೊತ್ತದ ಯೋಜನಾ ವರದಿ ಈಗಾಗಲೇ ಸಿದ್ಧವಾಗಿದ್ದು ಆಡಳಿತಾತ್ಮಕ ಅನುಮೋದನೆ ಪಡೆದ ನಂತರ ಕೆಲಸ ಶುರುವಾಗಲಿದೆ.–ಶಿವಕುಮಾರ ಶೆಟಕಾರ ನಿರ್ದೇಶಕ ಬ್ರಿಮ್ಸ್‌ಬೆಂಗಳೂರಿನಿಂದ ಬಂದಿದ್ದ ತಂತ್ರಜ್ಞರ ತಂಡವು ನೀರು ಸಂಗ್ರಹವಾಗದಂತೆ ಯೋಜನೆ ರೂಪಿಸಿದ್ದು ಶೀಘ್ರದಲ್ಲಿ ಕೆಲಸ ಆರಂಭವಾಗಲಿದೆ.

# ಯಶಸ್ವಿಯಾಗಿಲ್ಲ:ನಿರಾಣಿ

ಹೋರಾಟ ಎಂದು ಹೇಳಿರುವ ಅವರ ಕಳಕಳಿ ಮೆಚ್ಚುವಂತಹದ್ದು ಎಂದ ಮುರುಗೇಶ ನಿರಾಣಿ, ಆದರೆ ಅವರು ಹೊರಟಿರುವ ಹಾದಿ ಸರಿಯಿಲ್ಲ ಎಂದು ಹೇಳಿದರು.

ಮೌಲ್ಯಾಧಾರಿತ ರಾಜಕಾರಣ ಮಾಡಬೇಕು. ಎಲ್ಲರ ಹೃದಯವನ್ನು ಗೆದ್ದು ಹೋರಾಟದ ಮೂಲಕ ಉತ್ತರ ಕರ್ನಾಟಕದ ನೀರಾವರಿ ಸೇರಿ ಎಲ್ಲ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕು ಎಂದ ಮಾಜಿ ಸಚಿವ ನಿರಾಣಿ, ಹಳ್ಳಿ ಭಾಷೆಯಲ್ಲಿ ಹೇಳುವಂತೆ 'ಕಾಲು ಬಿದ್ದು ಕಾಲುಂಗರ ಉಚ್ಚಿಕೊಳ್ಳಬೇಕು' ಎನ್ನುವ ದೃಷ್ಠಿ ನಮ್ಮದಾಗಬೇಕು ಎಂದರು.

ಕೇಂದ್ರ ಸರಕಾರ ವಕ್ಫ ಮಸೂದೆ ಜಾರಿಗೆ ತರುವುದಕ್ಕೆ ಮುಂದಾಗಿರುವ ಬಗ್ಗೆ ಪ್ರತಿಕ್ರಿಯಿಸಿದ ನಿರಾಣಿ, ಹಿಂದೆಯೇ ಕಾಯ್ದೆಗೆ ಮಾರ್ಪಾಡು ಮಾಡಲಾಗಿದೆ. ಈಗ ಎಲ್ಲರಿಗೂ ಸಮಪಾಲು, ಸಮಬಾಳು ಎನ್ನುವ ನಿಟ್ಟಿನಲ್ಲಿ ಬಿಲ್ ಮಂಡನೆಯಾಗಿದೆ. ಅದು ಯಶಸ್ವಿಯಾಗುತ್ತದೆ. ಇದಕ್ಕೆ ಎಲ್ಲರೂ ಸಹಕರಿಸಬೇಕು ಎಂದು ಹೇಳಿದರು.

### ತಂದೆ-ತಾಯಿಗೆ ಬೈದಂತೆ : ಈಶ್ವರ್ ಖಂಡ್ರೆ

ಮುಂದುವರಿದು ಮಾತನಾಡಿದ ಖಂಡ್ರೆ ' ಕಾಂಗ್ರೆಸ್ ಇರೋದಕ್ಕೆ ದೇಶ ಉಳಿದಿದೆ, ನಾವು ಮಾಡಿದ್ದ ಯೋಜನೆಗಳ ಮೇಲೆ ಬಿಜೆಪಿಯವರು ಎತ್ತಿ ನಡೀತಾ ಇದಾರೆ. ರಸ್ತೆ, ಅಣೆಕಟ್ಟು, ಸ್ಯಾಟಲೈಟ್, ತಂತ್ರಜ್ಞಾನ ಎಲ್ಲವೂ ನಾವು ಮಾಡಿದ್ದೆವು. ಬಿಜೆಪಿಯವರು ಕಾಂಗ್ರೆಸ್‌ನವರಿಗೆ ಕೃತಜ್ಞರಾಗಿರಬೇಕು. ಕಾಂಗ್ರೆಸ್ ಸಾಧನೆ ಮೇಲೆ ನಾವು ಮೆರೆಯುತ್ತಾ ಇದ್ದೀವಿ ಅನ್ನೋದು ಬಿಜೆಪಿ ಮರಿಬಾರದು. ಕಾಂಗ್ರೆಸ್ ಪಕ್ಷಕ್ಕೆ ತೆಗಳಿದರೆ, ಅವರ ತಂದೆ–ತಾಯಿಗೆ ತೆಗಳಿದಕ್ಕೆ ಸಮ ಎಂದು ಈಶ್ವರ್ ಖಂಡ್ರೆ ಬಿಜೆಪಿ ವಿರುದ್ಧ ಕಿಡಿಕಾರಿದರು.

# ಜನಸೇವೆಯಲ್ಲಿ:ಪಾಟೀಲ

ಕ್ಷೇತ್ರದ ಜನರು ನನ್ನ ಕೈ ಬಿಟ್ಟಿಲ್ಲ ಎಂಬುದು ನನಗೆ ತುಂಬಾ ತೃಪ್ತಿತಂದಿದೆ. ಹುಟ್ಟು ಸಾವು ಇದ್ದೆ ಇರುತ್ತದೆ. ನಾವು ಮಾಡಿದ ಸಾಧನೆಯೇ ಜೀವಂತ ಇರುತ್ತದೆ.ಪ್ರೀತಿ ವಿಶ್ವಾಸ ಸದಾ ಇರಲಿ ಎಂದು ಮಾಜಿ ಸಚಿವ ರಾಜಶೇಖರ ಪಾಟೀಲ ತಿಳಿಸಿದರು.


ಅವರು ತಮ್ಮ ಜನ್ಮದಿನದ ಕಾರ್ಯಕ್ರಮದಲ್ಲಿ ಕೇಕ್ ಕತ್ತರಿಸಿ ಮಾತನಾಡಿ, ಕಾರ್ಯಕರ್ತರು ಹೆದರುವ ಅವಶ್ಯಕತೆ ಇಲ್ಲ.ಕಾರ್ಯ ಕರ್ತರು ಸದಾ ನನ್ನ ಬೆನ್ನಿಗೆ ಇರುವುದರಿಂದ .ಶಾಸಕನಿಲ್ಲದೆ ಇದ್ದರು ಕೂಡಾ ಅಭಿವೃದ್ಧಿ ಮಾಡುತ್ತಿದ್ದೆನೆ ಎಂದ ಅವರು ತಾವು ಅಧಿಕಾರದಲ್ಲಿದ್ದಾಗ ಅಮೃತ ಯೋಜನೆಯ ಅನುಮೊದನೆ ಆಗಿದೆ. ಆದರೆ ಕೆಲವರು ಸುಳ್ಳು ಹೇಳುತ್ತಿದ್ದಾರೆ. ಎಸ್.ಎಂ ಕೃಷ್ಣ ಅವರು ಮುಖ್ಯ ಮಂತ್ರಿ ಇದ್ದಾಗ ಕಾರಂಜಾದಿಂದ ನೀರು ತರಲಾಯಿತು ಎಂದ ಪಾಟೀಲರು ರಾಜ್ಯ ಸರ್ಕಾರ ನಿಮ್ಮ ಜೊತೆ ಇದೆ. ನಿಮ್ಮ ಬೆಂಬಲ ಇರುವವರೆಗೆ ನಾನು ಸದಾ ನಿಮ್ಮ ಸೇವೆಯಲ್ಲಿರುತ್ತೇನೆ ಎಂದು ನೆರೆದಿದ್ದ ಸಭಿಕರು ಕಾರ್ಯಕರ್ತರನ್ನುದ್ದೇಶಿಸಿ ನುಡಿದರು.

ತಂದೆಯಾದ ದಿ.ಬಸವರಾಜ ಪಾಟೀಲ ರವರ ಸ್ಥಾನವನ್ನು ನಮ್ಮ ಅಣ್ಣ ಮಾಜಿ ಸಚಿವ ರಾಜಶೇಖರ ಪಾಟೀಲ ರವರು ತುಂಬಿದ್ದಾರೆ ಎಂದು ವಿಧಾನ ಪರಿಷತ್ ಸದಸ್ಯ ಡಾ. ಚಂದ್ರಶೇಖರ ಪಾಟೀಲ ತಿಳಿಸಿದರು.

ಮಾಜಿ ಸಚಿವ ರಾಜಶೇಖರ ಪಾಟೀಲ ರವರ ಹುಟ್ಟು ಹಬ್ಬದ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದರು.

ಅಧಿಕಾರ ಇದ್ದವರ ಜೊತೆ ಸಾಕಷ್ಟು ಜನ ಇರುತ್ತಾರೆ. ಆದರೇ ಅಧಿಕಾರದಲ್ಲಿ ಇರದೇ ಇದ್ದರೂ ಕೂಡ ಇಷ್ಟೊಂದು ಜನ ನಮ್ಮ ಬೆನ್ನಿಗೆ ನಿಂತಿದ್ದಾರೆ ಎಂದರೆ ರಾಜಶೇಖರ ಪಾಟೀಲ ರವರು ಮಾಡಿದ ಅಭಿವೃದ್ಧಿ ಕಾರ್ಯಗಳೇ ಇದಕ್ಕೆ ಕಾರಣ ಎಂದು ತಿಳಿಸಿದರು.

ಜನ್ಮದಿನ ಕಾರ್ಯಕ್ರಮದಲ್ಲಿ ಸಚಿವರುಗಳಾದ ಈಶ್ವರ ಖಂಡ್ರೆ, ರಹಿಂ ಖಾನ, ವಿಧಾನ ಪರಿಷತ್ ಸದಸ್ಯರಾದ ತಿಪ್ಪಣ್ಣ ಕಮಕನೊರ, ಭೀಮರಾವ ಪಾಟೀಲ,ಶ್ರೀಗಳಾದ ಹಾರಕೂಡದ ಚೆನ್ನವೀರ ಶಿವಾಚಾರ್ಯ,ಗಂಗಾಧರ, ಶಿವರಾಜ ದೇಶಮುಖ,ಧನರಾಜ ತಾಳಂಪಳ್ಳಿ,ಶ್ರೀ,ಭಂತೆ,ಅರವಿಂದ ಅರಳಿ, ಮಾಲಾ ಬಿ.ನಾರಾಯಣ, ವಿಜಯಸಿಂಗ್,ಅಭಿಷೇಕ ಪಾಟೀಲ,ಸೇರಿದಂತೆ ವಿವಿದ ಮಠಾಧೀಶರು, ಚುನಾಯಿತ ಪ್ರತಿನಿಧಿಗಳು,ಸಾರ್ವಜನಿಕರು, ಕಾರ್ಯಕರ್ತರು,ಅಭಿಮಾನಿಗಳು ಪಾಲ್ಗೊಂಡಿದ್ದರು.




ಇಂಡಿ:ಉಪವಿಭಾಗದನೂತನಕಂದಾಯಉಪವಿಭಾಗಾಧಿಕಾರಿಯಾಗಿ ಅನುರಾಧ ವಸ್ತ್ರದ್ ರವರ ಆಯ್ಕೆಯಾದ ಹಿನ್ನೆಲೆ ಬುಧವಾರ ಪಟ್ಟಣದ ಆಡಳಿತ ಕಚೇರಿಯಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಜಿಲ್ಲಾಧ್ಯಕ್ಷರಾದ ಧರ್ಮರಾಯ ಸಾಲೋಟಗಿ ಅವರ ನೇತೃತ್ವದಲ್ಲಿ ಡಾ, ಬಿ ಆರ್. ಅಂಬೇಡ್ಕರ್ ರವರ ಪುಸ್ತಕದೊಂದಿಗೆ ಹೂವು ಗುಚ್ಛೆ ನೀಡಿ ಗೌರವದಿಂದ ಅಭಿನಂದಿಸಿ ಮುಂದಿನ ಕರ್ತವ್ಯಕ್ಕೆ ಶುಭ ಹಾರೈಸಿದರು. ಈ ಸಂದರ್ಭದಲ್ಲಿ ಶೇಟ್ಟೆಪ್ಪ ಶಿವುಪೂರ ,ಅಪ್ಪು ಮಾವಿನಹಳ್ಳಿ ,ಪ್ರಕಾಶ ತೆಲಾಗ್, ಅರ್ಜುನ್ ಮಾವಿನಹಳ್ಳಿ, ದಲಿತ ರಕ್ಷಣಾ ವೇದಿಕೆ ತಾಲೂಕು ವಿದ್ಯಾರ್ಥಿ ಘಟಕದ ಅಧ್ಯಕ್ಷ ರಾಜಶೇಖರ ಸಿಂಧೆ ಸೇರಿದಂತೆ ಮತ್ತಿತರ ಉಪಸ್ಥಿತರಿದ್ದರು.

# ದೇವರ ದಾಸಿಮಯ್ಯನವರು ಕಾಯಕ ಮತ್ತು ಸಾಮಾಜಿಕ ಸೇವೆ ಅವಿಸ್ಮರಣೀಯ: ಕಮಕನೂರ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ: ಏ. 02: ದೇವರ ದಾಸಿಮಯ್ಯನವರು ಮಾಡಿದ ಕಾಯಕ ಮತ್ತು ಸಾಮಾಜಿಕ ಸೇವೆ ಅವಿಸ್ಮರಣೀಯವಾದದ್ದು ಇಂತಹ ಶ್ರೇಷ್ಠ ವಚನಕಾರರ ಅನೀಡಿದ ವಚನದ ಸಂದೇಶಗಳನ್ನು ಪ್ರತಿಯೊಬ್ಬರು ಅರಿತುಕೊಳ್ಳಬೇಕೆಂದು ವಿಧಾನ ಪರಿಷತ್ ಸದಸ್ಯರಾದ ತಿಪ್ಪಣಪ್ಪ ಕಮಕನೂರ ಹೇಳಿದರು. ಮಂಗಳವಾರದಂದು ಕಲಬುರಗಿ ಭಗವಾನ ಶ್ರೀ ಜಹ್ವೇಶ್ವರ ಸಭಾಗಹ ಮುಕ್ತಂಪೂರ ಹೋಳಿಕಟ್ಟಾದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮಹಾನಗರ ಪಾಲಿಕೆ ಹಾಗೂ ಜಿಲ್ಲಾ ಪಂಚಾಯತ ಕಲಬುರಗಿ ಇವರುಗಳು ಸಂಯುಕ್ತಾಶ್ರಯದಲ್ಲಿ ಶ್ರೀ ದೇವರ ದಾಸಿಮಯ್ಯ ಭಾವ ಚಿತ್ರಕ್ಕೆ ಮಾಲಾರ್ಪಣೆ ಮಾಡಿ ಮಾತನಾಡಿದರು. ಇಳೆ ನಿಮ್ಮ ದಾನ ಬೆಳೆ ನಿಮ್ಮ ದಾನ ಸುಳಿದು ಬೀಸುವ ಗಾಳಿ ಅದು ನಿಮ್ಮ ದಾನ ನಿಮ್ಮ ದಾನವನುಂಡು ಅನ್ಯರ ಹೊಗಳುವ ಕುನ್ನಿಗಳನೇನೆಂಬೆ ರಾಮನಾಥ ಇಂತಹ ಕಠೋರ ವಚನಗಳ ಮುಖಾಂತರ ಜನರನ್ನು ಜಾಗೃತರನ್ನಾಗಿ ಮಾಡುವುದರ ಮುಖಾಂತರ ಸಮಾಜದಲ್ಲಿ ಸರ್ವರು ಸಾಮಾನರು ಮಹಾನ ವ್ಯಕ್ತಿ ನೇಕಾರ ಸಮಾಜ ಎಲ್ಲರೂ ಒಗ್ಗೂಟಿನಿಂದ ಕಾರ್ಯ ಮಾಡಿದರೆ ಮಾತ್ರ ಇಂಥಹ ಕಾರ್ಯಕ್ರಮ ಯಶಸ್ವಿಗೊಳ್ಳಲು ಸಾಧ್ಯವಿದೆ ಎಂದು ಹೇಳಿದರು. ನೇಕಾರರ ಸಮುದಾಯದ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಬೇಕೆಂದು ಸಮಾಜದ ಮುಖಂಡರ ಬೇಡಿಕೆಯಿದ್ದು ಮುಖ್ಯಮಂತ್ರಿಯೊಂದಿಗೆ ಚರ್ಚಿಸಿ ಅಭಿವೃದ್ಧಿ ನಿಗಮ ಸ್ಥಾಪಿಸಿ ಅದಕ್ಕೆ ಸರ್ಕಾರದಿಂದ ಅನುದಾನ ಬರುವಂತೆ ಮಾಡಲು ಪ್ರಮಾಣಿಕ ಪ್ರಯತ್ನ ಮಾಡುತ್ತೇನೆ ಅದಕ್ಕೆ ಸಮಾಜದ ಎಲ್ಲ ಮುಖಂಡರು ಸಹಕಾರ ನೀಡಬೇಕೆಂದು ತಿಳಿಸಿದರು.

# ಜಲಾಶಯದ ಹಿನ್ನೀರಿನಲ್ಲಿ ಇಬ್ಬರ ಜಲಸಮಾಧಿ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಏ.2:ಗಂಡೋರಿ ನಾಲಾ ಜಲಾಶಯದ ಹಿನ್ನೀರಿನಲ್ಲಿ ಇಬ್ಬರು ಮುಳಗಿದ ಘಟನೆ ತಾಲ್ಲೂಕಿನ ಬೆಳಕೋಟಾ ಗ್ರಾಮದ ಬಳಿ ಸಂಭವಿಸಿದೆ. ನಗರದ ಟಿಪ್ಪು ಚೌಕ್ ನಿವಾಸಿ ಆಸಿಫ್ ಹಮೀದ್(43) ಹಾಗೂ ಮಾಲಗತ್ತಿ ಕ್ರಾಸ್ ನಿವಾಸಿ ನಿಝಾಮ್ ಚೋಟು (30) ನೀರುಪಾಲಾಗಿ ನಾಪತ್ತೆಯಾಗಿದ್ದಾರೆ. ಬೆಳಕೋಟಾ ಜಲಾಶಯವನ್ನು ನೋಡಲು ಆರು ಜನ ಗೆಳೆಯರು ಒಟ್ಟಾಗಿ ಕಲಬುರಗಿಯಿಂದ ಬೆಳಕೋಟಕ್ಕೆ ಆಗಮಿಸಿದಾಗ ದುರಂತ ಸಂಭವಿಸಿದೆ. ಹಬ್ಬದ ಹಿನ್ನಲೆಯಲ್ಲಿ ಮಂಗಳವಾರ ಸಂಜೆ ಆಸಿಫ್ ಹಮೀದ್,ನಿಝಾಮ್ ಚೋಟು, ಸಹಿತ ಆರು ಮಂದಿ ಗೆಳೆಯರು ಗಂಡೋರಿನಾಲ ಜಲಾಶಯಕ್ಕೆ ಬಂದಿದ್ದರು. ಈ ವೇಳೆ ಆರು ಜನ ಜಲಾಶಯಕ್ಕೆ ಇಳಿದಿದ್ದಾರೆ. ಈ ವೇಳೆ ನಾಲ್ವರು ಜಲಾಶಯ ದಂಡೆಯಲ್ಲಿ ಈಜಾಡಿದ್ದರೆ, ಆಸಿಫ್ ಹಮೀದ್, ಹಾಗೂ ನಿಝಾಮ್ ಚೋಟು ನೀರಿನ ಆಳಕ್ಕೆ ಇಳಿದಿದ್ದರೆನ್ನಲಾಗಿದೆ. ಆಳ ನೀರಿನಿಂದ ದಂಡೆಗೆ ಬರಲು ಆಗದೆ ಅವರಿಬ್ಬರು ನೀರಿನಲ್ಲಿ ಮುಳುಗಿ ನಾಪತ್ತೆಯಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಅಗ್ನಿಶಾಮಕದಳ,ಈಜುಗಾರರ ತಂಡ ಪಿಎಸ್ಐ ಆಶಾ ರಾಠೋಡ್ ನೇತೃತ್ವದಲ್ಲಿ ಪೊಲೀಸರು ಸ್ಥಳಕ್ಕೆ ಆಗಮಿಸಿ ಬೆಳಿಗ್ಗೆ ಆರು ಗಂಟೆಯಿಂದಲೇ ಸತತ ಕಾರ್ಯಾಚರಣೆ ನಡೆಸಿದರೂ ಶವ ಪತ್ತೆ ಆಗಿರಲಿಲ್ಲ. ಘಟನೆ ಕುರಿತು ಮಾಹಿತಿ ಪಡೆದ ಅಗ್ನಿಶಾಮಕದಳದವರು ಹಾಗೂ ಎಸ್‌ಡಿಆರ್‌ಎಫ್ ತಂಡದ ಸದಸ್ಯರು ಜಲಾಶಯದಲ್ಲಿ ಶೋಧ ಕಾರ್ಯ ಮುಂದುವರೆಸಿದರು. ಮಧ್ಯಾಹ್ನದ ವೇಳೆಗೆ ಇಬ್ಬರ ಮೃತದೇಹಗಳು ಪತ್ತೆಯಾಗಿದ್ದು, ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ಶವಗಳನ್ನು ರವಾನಿಸಲಾಗಿದೆ.



ಭಾಲ್ಕಿ :ತಾಲೂಕಿನ ಚಾಳಕಾಪುರ ಗ್ರಾಮದಲ್ಲಿ ಶ್ರೀ ಸಿದ್ಧಾರೂಢರ ಜಾತ್ರಾ ಮಹೋತ್ಸವದಲ್ಲಿ ಪರಮಪೂಜ್ಯರಾದಂತಹ ಶ್ರೀ ಶ್ರೀ ಶಿವಕುಮಾರ್ ಮಹಾಸ್ವಾಮಿಗಳಿದ ರಾಜ್ಯಮಟ್ಟ ಪ್ರಶಸ್ತಿ ಪಡೆದಿದ್ದಕ್ಕಾಗಿ ಶ್ರೀಗಳಿಂದ ಆಶೀರ್ವಾದ ಪಡೆದ ದೃಶ್ಯ ಸುಭಾಷ್ ಕೆನಾಡೆ ಕನ್ನಡ ಸೇನೆ ಜಿಲ್ಲಾಧ್ಯಕ್ಷರು

# ಡಾ. ಬಿ.ಟಿ ಲಲಿತಾನಾಯಕ್‌ರಿಗೆ ಶ್ರೀ ಸಂತ ಸೇವಾಲಾಲ್ ಪ್ರಶಸ್ತಿ ಪ್ರದಾನ



ಬೆಂಗಳೂರು, ಏ. 02 :ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ ವತಿಯಿಂದ ಸ್ಥಾಪಿಸಿದ ಪ್ರಥಮ ವರ್ಷದ ?ಶ್ರೀ ಸಂತ ಸೇವಾಲಾಲ್ ಪ್ರಶಸ್ತಿ' ಯನ್ನು ಬಂಜಾರ ಸಮುದಾಯದ ಹಿರಿಯ ಸಾಹಿತಿ, ಹೋರಾಟಗಾರ್ತಿ ಹಾಗೂ ಮಾಜಿ ಸಚಿವೆ ಡಾ. ಬಿ.ಟಿ ಲಲಿತಾನಾಯಕ್ ಅವರಿಗೆ ನಾಡೋಜ ಪ್ರೊ??. ಬರಗೂರು ರಾಮಚಂದ್ರಪ್ಪ ಹಾಗೂ ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ ಅಧ್ಯಕ್ಷರಾದ ಡಾ. ಎ.ಆರ್. ಗೋವಿಂದಸ್ವಾಮಿ ಅವರು ಪ್ರದಾನ ಮಾಡಿದರು.

ಈ ಸಂದರ್ಭದಲ್ಲಿ ಎಂ.ಎಲ್.ಸಿ ಪುಟ್ಟಣ್ಣ, ಕನ್ನಡ ಪುಸ್ತಕ ಪ್ರಾಧಿಕಾರ ಅಧ್ಯಕ್ಷರಾದ ಡಾ. ಮಾನಸ, ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾದ ಕೆ.ಎಲ್. ಮುಕುಂದ್ ರಾಜ್, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಅಧ್ಯಕ್ಷರಾದ ಡಾ. ಚನ್ನಪ್ಪ ಕಟ್ಟೆ, ಬಂಜಾರ ಅಕಾಡೆಮಿ ರಿಜಿಸ್ಟಾರ್ ಡಿ.ಎಂ. ರವಿಕುಮಾರ್ ಹಾಗೂ ಬಂಜಾರ ಸಮುದಾಯದ ಹಿರಿಯರು, ವಿದ್ವಾಂಸರು ಉಪಸ್ಥಿತರಿದ್ದರು.

# ದಾಸಿಮಯ್ಯನವರದ್ದು ನಿರ್ಲಿಪ್ತ ಜೀವನ : ಬಸವಲಿಂಗ ಸ್ವಾಮೀಜಿ

ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ:ಏ.2:ಆದ್ಯ ವಚನಕಾರ ದೇವರ ದಾಸಿಮಯ್ಯನವರದ್ದು ನಿರ್ಲಿಪ್ತ ಜೀವನವಾಗಿತ್ತು ಎಂದು ಹಿರೇಮಠ ಸಂಸ್ಥಾನದ ಶ್ರೀ ಬಸವಲಿಂಗ ಸ್ವಾಮೀಜಿ ಹೇಳಿದರು.



ಪಟ್ಟಣದ ತಹಸಿಲ ಕಚೇರಿಯಲ್ಲಿ ತಾಲೂಕು ಆಡಳಿತದ ವತಿಯಿಂದ ಆಯೋಜಿಸಿದ್ದ ದೇವರ ದಾಸಿಮಯ್ಯನವರ ಜಯಂತಿ ಮಹೋತ್ಸವದ ಸಾನಿಧ್ಯ ವಹಿಸಿ ಅವರು ಮಾತನಾಡಿದರು. ದಾಸಿಮಯ್ಯನವನರ ವಚನಗಳು ಚಿಕ್ಕ, ಚಿಕ್ಕ ಗುಳಿಗೆಗಳಿದ್ದಂತೆ, ಅವರ ಮಾತುಗಳಿಂದ ನಮ್ಮ ಮನಸ್ಸಿನ ರೋಗ ತಕ್ಷಣವೇ ವಾಸಿಯಾಗುವುದು. ಕಾಯಕದ ಮಹತ್ವ ಅವರಿಂದ ತಿಳಿಯಬೇಕು. ಅವರು ಅಪಾರ ಜಂಗಮ ಭಕ್ತರಾಗಿದ್ದರು. ಉದ್ದ ಮತ್ತು ಅಡ್ಡ ಎಳೆಗಳು ಪರಿಪೂರ್ಣವಾಗಿದ್ದಾಗಲೆ ಬಟ್ಟೆ ಪೂರ್ಣವಾಗುವುದು. ಹಾಗೆ ಜೀವನದಲ್ಲಿ ಕಷ್ಟ,ಸುಖಗಳಿದ್ದರೆ ಜೀವನ ಪರಿಪೂರ್ಣವಾಗುದು. ಶುಸುಮ್ನ ಋತು,ವಸಂತ ಋತು ಎರಡೂ ಇದ್ದಾಗಲೇ ಪ್ರಕೃತಿ ಸಮತೋಲನದಲ್ಲಿರುವುದು ಎಂದು ಹೇಳಿದರು.

ತಹಸೀಲ್ದಾರ ಮಲ್ಲಿಕಾರ್ಜುನ ವಡ್ಡನಕೇರೆ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಸಾಹಿತಿ ವೀರಣ್ಣ ಕುಂಬಾರ ವಿಶೇಷ ಉಪನ್ಯಾಸ ಮಂಡಿಸಿದರು. ಸಂತೋಷ ಬಿಜಿಪಾಟೀಲ ಪ್ರಾಸ್ತಾವಿಕವಾಗಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಉಪ ತಹಸೀಲ್ದಾರ ಪಲ್ಲವಿ ಬೆಳಕೀರೆ, ಬಾಬುರಾವ ಖೆಡೆ, ಪುರಸಭೆ ಅಧ್ಯಕ್ಷೆ ಶಶಿಕಲಾ ಅಶೋಕ ಸಿಂಧನಕೆರೆ,ಪುರಸಭೆ ಉಪಾಧ್ಯಕ್ಷ ವಿಜಯಕುಮಾರ ರಾಜಭವನ, ವಚನ ಸಾಹಿತ್ಯ ಪರಿಷತ್ ಅಧ್ಯಕ್ಷ ಗುಂಡಪ್ಪ ಸಂಗಮಕರ, ಕಸಾಪ ಅಧ್ಯಕ್ಷ ನಾಗಭೂಷಣ ಮಾಮಡಿ,ಪತ್ರಕರ್ತರ ಸಂಘದ ಅಧ್ಯಕ್ಷ ಜಯರಾಜ ದಾಬಶೆಟ್ಟಿ, ಪ್ರಮುಖರಾದ ರೇಣವಸಿದ್ದ ಜಾಡರ,ದೀಪಕ ಥಮಕೆ,ಐಜಿಕ್ ಬಂಗಾರೆ ಉಪಸ್ಥಿತರಿದ್ದರು. ಸಂತೋಷ ಸ್ವಾಗತಿಸಿದರು. ದೀಪಕ ನಿರೂಪಿಸಿದರು. ನಾಗಭೂಷಣ ವಂದಿಸಿದರು.

# ದೇವರ ದಾಸಿಮಯ್ಯ ಕನ್ನಡ ಪ್ರಥಮ ವಚನಕಾರ



ಮಲ್ಲಮ್ಮ ನುಡಿ ವಾರ್ತೆ

ಕಮಲನಗರ:ಏ.2:ಪಟ್ಟಣದ ತಹಸೀಲ್ದಾರ ಕಚೇರಿ ಯಲ್ಲಿ ಬುಧವಾರ ಹನ್ನೊಂದನೆಯ ಶತಮಾನದ ಪ್ರಥಮ ವಚನಕಾರ ದೇವರ ದಾಸಿಮಯ್ಯ ಜಯಂತಿ ಕಾರ್ಯಕ್ರಮದಲ್ಲಿ ತಹಸೀಲ್ದಾರ ಅಮಿತಕುಮಾರ ಕುಲಕರ್ಣಿ ಪುಷ್ಪ ನಮನ ಸಲ್ಲಿಸಿದರು.

ನಂತರ ಮಾತನಾಡಿ,ಹನ್ನೊಂದನೆಯ ಶತಮಾನದ ಆದಿಕವಿ, ಪ್ರಥಮ ವಚನಕಾರ, ಬಸವಪೂರ್ವ ಯುಗದ ಶಿವಶರಣ ಹಾಗೂ ಸಾಮಾಜಿಕ ನ್ಯಾಯದ ಆದಿ ಸಿದ್ಧಾಂತಿ', ಹೆಣ್ಣು–ಗಂಡು, ಮೇಲು–ಕೀಳು, ಜಾತಿ–ಪಂಥ ಆಚರಣೆಗಳ 'ಭೇದ'ಗಳನ್ನು ಗುರುತಿಸಿ ಸಾಮಾಜಿಕ ವ್ಯವಸ್ಥೆಯನ್ನು ಸುಧಾರಣೆ ಮಾಡಿದ ಮಹಾ ಪುರುಷ ದಾಸಿಮಯ್ಯ.

ಅನ್ಯಾಯಗಳನ್ನು ಧಿಕ್ಕರಿಸಿ, ಎಳೆಎಳೆಯಾಗಿ ಬಿಡಿಸಿ ತೋರಿಸಿದ ವಚನಕಾರ,'ದೇವರ ದಾಸಿಮಯ್ಯ ಸಮಾಜದ ಅಂಕುಡೊಂಕುಗಳನ್ನು ಎತ್ತಿ ಹಿಡಿದು ಸಮಾಜ ಪರಿವರ್ತನೆಗೆ ವಚನ ಮೂಲಕ ನಾಂದಿ ಹಾಡಿದರು, ಕನ್ನಡ ಸಾಹಿತ್ಯಕ್ಕೆ ಇವರ ಕೊಡಗೆ ಅಪಾರ ವಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಉಪ ತಹಸೀಲ್ದಾರ್ ಗೋಪಾಲಕೃಷ್ಣ, ಶಿರಸ್ತುದಾರ ಅಶ್ವಿನಕುಮಾರ ಪಾಟೀಲ, ಪ್ರಶಾಂತ ಎಫ್ ಡಿ. ಎ. ಮಲ್ಲಪ್ಪ ಎಫ್. ಡಿ. ಎ, ಎಕೆನಾಥ ಸೇರಿದಂತೆ ಕಚೇರಿಯ ಸಿಬ್ಬಂದಿ ವರ್ಗದವರು ಇದ್ದರು.

# ಒಂದು ದೇಶ, ಒಂದು ಪೋಲಿಸ ವ್ಯವಸ್ಥೆ ಜಾರಿಗೆ ವಡ್ಡೆ ಆಗ್ರಹ

ಮಲ್ಲಮ್ಮ ನುಡಿ ವಾರ್ತೆ

ಕಮಲನಗರ:ಏ.2: ಭಾರತ ದೇಶದಲ್ಲಿ ಇಂದಿನ ಪರಿಸ್ಥಿತಿಯಲ್ಲಿ ದೇಶದ ಏಕತೆ, ಅಖಂಡತೆ ಹಾಗೂ ಸುರಕ್ಷತೆಗಾಗಿ ಒಂದು ದೇಶ,ಒಂದು ಪೋಲಿಸ ವ್ಯವಸ್ಥೆ ಜಾರಿ ಮಾಡಬೇಕೆಂದು ಸಮಾಜ ಸೇವಕ ಗುರುನಾಥ ವಡ್ಡೆಯವರು ಪ್ರಧಾನ ಮಂತ್ರಿಗಳಿಗೆ ಬರೆದ ಮನವಿಯಲ್ಲಿ ಅಗ್ರಹಿಸಿದ್ದಾರೆ.




ತಾಲೂಕಿನ ಭವಾನಿ ಬಿಜಲ ಗಾಂವ ಗ್ರಾಮದಲ್ಲಿ ಜನಾಸೇವಾ ಆಶ್ರಮ ಭವಾನಿ ಬಿಜಲಗಾಂವ ಕೇಂದ್ರ ದಲ್ಲಿ ಒಂದು ದೇಶ, ಒಂದು ಪೋಲಿಸ ವ್ಯವಸ್ಥೆಗಾಗಿ ನಡೆದ ಧರಣಿ ಸತ್ಯಾಗ್ರಹದಲ್ಲಿ ಮಾತನಾಡುತ್ತಾ ಸ್ವತಂತ್ರ ಹೋರಾಟದಲ್ಲಿ ಭಾಗವಹಿಸಿದ ಅಂದಿನ ದೇಶ ಭಕ್ತರಲ್ಲಿ ಯಾವುದೇ ಭೇಧಭಾವ ಇರಲಿಲ್ಲಾ ರಾಷ್ಟದ ಏಕತೆ–ಗಾಗಿ ಹಾಗೂ ಅಖಂಡತೆಗಾಗಿ ಸ್ವತಂತ್ರವೀರರೂ ತ್ಯಾಗಬಲಿದಾನ ಮಾಡಿದರು ಆದರೆ ಇಂದು ದೇಶದಲ್ಲಿ ಜಾತಿ, ಧರ್ಮ, ಭಾಷೆ, ಪ್ರಾಂತದ ಹೆಸರಿನಲ್ಲಿ ದೇಶದಲ್ಲಿ ದಂಗೆಗಳು ನಡೆಯುತ್ತಿವೆ ಈ ಪ್ರಕಾರವಾಗಿ ದೇಶವನ್ನು ದುರ್ಬಲಗೊಳಿಸುವ ಪ್ರಯತ್ನ ನಡೆಯುತ್ತಿದೆ.


ದೇಶದಲ್ಲಿ ಪ್ರಜೆಗಳು ನಿರ್ಭಯವಾಗಿ ಬದುಕಲು ಸಾಧ್ಯವಾಗುತ್ತಿಲ್ಲಾ ಇದರಿಂದ ರಾಷ್ಟದ ಏಕತೆಗಾಗಿ, ಅಖಂಡತೆ–ಗಾಗಿ, ಸುರಕ್ಷತೆಗಾಗಿ ರಾಷ್ಟ್ರೀಯ ಪೋಲಿಸ, ಭಾರತೀಯ ಪೋಲಿಸ ವ್ಯವಸ್ಥೆ ಜಾರಿ ಮಾಡುವದು ಅವಶ್ಯಕವಾಗಿದೆ. ದೇಶದ ರಕ್ಷಣೆಗಾಗಿ ಭಾರತೀಯ ಸೇನೆ ಸಶಕ್ತವಾಗಿದೆ ಇದೆ ಪ್ರಕಾರ ದೇಶದ ಅಂತರಿಕ ಸುರಕ್ಷತೆಗಾಗಿ ದೇಶದಿಂದ ಪೋಲಿಸ ವ್ಯವಸ್ಥೆ ಸಶಕ್ತವಾಗಿ ಮಾಡುವದಾಗಿ ಅವಶ್ಯಕವಾಗಿದೆ.

ಒಂದು ದೇಶ ಒಂದು ಪೋಲಿಸ ವ್ಯವಸ್ಥೆ ಮೂಲಕ ದೇಶದ ಎಲ್ಲಾ ಪೋಲಿಸರಿಗೆ ಸಮಾನ ವೇತನ ವ್ಯವಸ್ಥೆ ಮಾಡುವದು ಸಮಾನ ಸೌಲಭ್ಯಗಳು ನೀಡುವದು ಅವಶ್ಯಕವಾಗಿದೆ ಎಂದು ವಡ್ಡೆಯವರು ತಮ್ಮ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಪ್ರಧಾನಮಂತ್ರಿಗಳ ಹೆಸರಿನಲ್ಲಿ ಬರೆದ ಮನವಿಯನ್ನು ಧರಣಿ ಸ್ಥಳಕ್ಕೆ ಬಂದಿದ್ದ ಕಮಲನಗರ ತಹಶೀಲ್ದಾರರಾದ ಅಮೀತಕುಮಾರ ಕುಲಕರ್ಣಿ ಇವರಿಗೆ ಸಲ್ಲಿಸಲಾಯಿತು.

ಈ ಸಂಧರ್ಭದಲ್ಲಿ ಕಮಲನಗರ ಪೋಲಿಸ ಠಾಣೆಯಿಂದ ಪೋಲಿಸ ಸುರಕ್ಷೆ ಒದಗಿಸಲಾಯಿತು. ಧರಣಿ ಸತ್ಯಾಗ್ರಹದಲ್ಲಿ ಹೋರಾಟಗಾರರಾದ ವೈಜಿನಾಥರಾವ ವಡ್ಡೆ, ಶ್ರೀಮತಿ ಪ್ರೇಮಾ ಗಂದಗೆ, ಅಂಕುಶ ಸದಾಪುಲೆ, ಜ್ಞಾನೋಬಾ ಡೋಂಬಾಳೆ, ನೀಲಕಂಠ ಭವರಾ, ವೀರೇಶ ದೇಶಮುಖ, ಶಿವಕುಮಾರ ಪಾಟೀಲ ಹಾಗೂ ಅನೇಕರು ಭಾಗವಹಿಸಿದರು.

## ಸಮಾಜದಲ್ಲಿ ಸೇವೆ ಮಾಡಿರುವ ಐದು ಸಾಧಕರಿಗೆ 2025ನೆಯ ಸಾಲಿನ ಅಭಿನವ ಘನಲಿಂಗ ಶ್ರೀ ಪ್ರಶಸ್ತಿ ಪ್ರದಾನ.



ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ: – ಏ 2 ಇಲ್ಲಿನ ಶ್ರೀಜಗದ್ಗುರುಘನಲಿಂಗರುದ್ರಮುನಿ ಶಿವಾಚಾರ್ಯ ಗವಿಮಠದಿಂದ ಕೊಡಮಾಡುವ 2025 ರ " ಅಭಿನವ ಘನಲಿಂಗ ಶ್ರೀ "ಪ್ರಶಸ್ತಿಗೆ ನಿವೃತ್ತ ಸಿಂಡಿಕೇಟ್ ಬ್ಯಾಂಕ್ ಮ್ಯಾನೇಜರಾದ ಬಸವರಾಜ ರಾಮಲಿಂಗಯ್ಯಾಸ್ವಾಮಿ ಅವರಿಗೆ, ಧರ್ಮಾಭಿಮಾನಿಗಳಾದ ದೇವಿಂದ್ರ ಮಹಾರುದ್ರಪ್ಪಾ ಕೊರಾಳೆ ತಾಂಬೋಳ, ಪುಣ್ಯಕೋಟಿ ಪದವಿ ಪೂರ್ವ ಕಾಲೇಜಿನ ಅಧ್ಯಕ್ಷರಾದ ಪ್ರೊ.ಸೂರ್ಯಕಾಂತ ಶೀಲವಂತ, ರೆಡ್ಡಿ ಸಮಾಜದ ಅಧ್ಯಕ್ಷರಾಗಿರುವ ವಿಜಯಕುಮಾರ ರೆಡ್ಡಿ, ಧರ್ಮದ ಸೇವೆಯನ್ನು ಮಾಡುತ್ತಿರುವ ವಿಜಯಕುಮಾರ ಮಾಣಿಕಪ್ಪಾ ಮುಚಳಂಬೆ ತ್ರಿಪೂರಾಂತ ಒಟ್ಟು ಐವರನ್ನು ಆಯ್ಕೆ ಮಾಡಲಾಗಿದೆ ಎಂದು ನಗರದ ಸಂಸ್ಥಾನ ಗವಿಮಠದ ಪೀಠಾಧಿಪತಿಗಳಾದ ಪೂಜ್ಯಶ್ರೀ ಷ.ಬ್ರ.ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ತಿಳಿಸಿದ್ದಾರೆ. ಸಂಸ್ಥಾನಗವಿಮಠದಲ್ಲಿ ಎಪ್ರಿಲ್ 10ರಂದು ಬೆಳಿಗ್ಗೆ 10:00ಗೆ ಜರಗುವ ಶ್ರೀ ಘನಲಿಂಗರುದ್ರಮುನಿ ಜಾತ್ರಾ ಮಹೋತ್ಸವ ಹಾಗೂ ರಾಜ್ಯಮಟ್ಟದ 13ನೆಯ ಕರ್ನಾಟಕ ಚುಟುಕು ಸಾಹಿತ್ಯ ಸಮ್ಮೇಳನ ಸಮಾರಂಭದಲ್ಲಿ ಅಭಿನವ ಘನಲಿಂಗ ಶ್ರೀ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಸಾನಿಧ್ಯ ಪೂಜ್ಯ ಶ್ರೀ ಷ.ಬ್ರ.ವಿಶ್ವಾರಾಧ್ಯ ಮಳೆಂದ್ರ ಶಿವಾಚಾರ್ಯರು ಹಿರೇಮಠ ಅಫಜಲಪುರ, ನೇತೃತ್ವ ಪೂಜ್ಯ ಶ್ರೀ ಷ.ಬ್ರ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರುಗವಿಮಠ.ಚುಸಾಪ ಸರ್ವಾಧ್ಯಕ್ಷರಾದ ಶ್ರೀ ಷ.ಬ್ರ ಡಾ.ರೇವಣಸಿದ್ದ ಶಿವಾಚಾರ್ಯರು ಹಿರೇಮಠ ಶ್ರೀನಿವಾಸ ಸರಡಗಿ, ಅಧ್ಯಕ್ಷತೆ ಶರಣಪ್ಪಾ ಬಿರಾದಾರ. ಕಾರ್ಯಾಧ್ಯಕ್ಷರು ಗವಿಮಠ ಟ್ರಸ್ಟ ತ್ರಿಪೂರಾಂತ ಬಸ

ವಿಶೇಷವಾಗಿ. ಗವಿಮಠ ಮಹಿಮೆ ಭಕ್ತಿ ಗೀತೆ ಹಾಗೂ ತತ್ವಪದಗಳು ಗ್ರಂಥ ಲೋಕಾರ್ಪಣೆ ಮಾಡಲಾಗುವುದು ಆದ್ದರಿಂದ ಸಕಲ ಸದ್ಭಕ್ತರು ಆಗಮಿಸಿ ಶ್ರೀ ಜಗದ್ಗುರು ಘನಲಿಂಗರುದ್ರಮುನಿ ಶಿವಯೋಗಿಗಳ ದರ್ಶನ ಆಶೀರ್ವಾದ ಪಡೆದು ಮಹಾಪ್ರಸಾದ ಸ್ವೀಕರಿಸಿ ಪುನೀತರಾಗಬೇಕೆಂದು ಶ್ರೀಮಠದ ವತಿಯಿಂದ ಪ್ರಕಟಣೆಯಲ್ಲಿ ಕೋರಲಾಗಿದೆ.

## ನಿವೃತ್ತ ಪಿಡಿಒ ಸುಶೀಲಕುಮಾರ ದಿನೇ ರವರ ವಯೋನಿವೃತಿ ವಿಜೃಂಭಣೆಯಿಂದ ಜರುಗಿತ್ತು




(ಮಲ್ಲಮ್ಮ ನುಡಿ ವಾರ್ತೆ)

ಚಿಟಗುಪ್ಪ: ಸಮಾಜ ಮುಖಿ ನಿಸ್ವಾರ್ಥ ಸೇವೆ ಸಲ್ಲಿಸಿದವರಿಗೆ ಸಮಾಜ ಯಾವತ್ತೂ ಋಣಿಯಾಗಿರುತ್ತದೆ ಎಂಬುದಕ್ಕೆ ನಿವೃತ್ತಿಯಾದ ಸುಶೀಲಕುಮಾರ್ ದಿನೇ ಅವರೇ ಉದಾಹರಣೆ ಎಂದು ದತ್ತು ಕಾಲೆಬಾಗ್ ಹೇಳಿದರು. ಇಟಗಾ ಗ್ರಾಮ ಪಂಚಾಯತ್ ನಿವೃತ್ತ ಅಭಿವೃದ್ಧಿ ಅಧಿಕಾರಿ ಸುಶೀಲಕುಮಾರ್ ದಿನೇ ಅವರ ವಯೋನಿವೃತ್ತಿ ಸಮಾರಂಭವನ್ನು ಕೇಕ್ ಕತ್ತರಿಸುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ಸುದೀರ್ಘ 21 ವರ್ಷಗಳ ಕಾಲ ಗ್ರಾಮ ಪಂಚಾಯತ್ ಕಾರ್ಯದರ್ಶಿಗಳಾಗಿ, ಅಭಿವೃದ್ಧಿ ಅಧಿಕಾರಿಗಳಾಗಿ ಸೇವೆ ಸಲ್ಲಿಸಿ ಸಾವಿರಾರು ಬಡ ಜನರಿಗೆ ಸರ್ಕಾರದ ಯೋಜನೆಗಳನ್ನು ತಲುಪಿಸಿದ್ದಾರೆ. ಅವರ ಅಧಿಕಾರ ಅವಧಿಯಲ್ಲಿ ಬಹಳಷ್ಟು ಅಭಿವೃದ್ಧಿ ಕಾರ್ಯಗಳಾಗಿವೆ ಎಂದು ಹೇಳಿದರು. ಬಾಬುರಾವ ರಾಜೇಶ್ವರ ಮಾತನಾಡಿ, 60ಕ್ಕೆ ವಯೋನಿವೃತ್ತಿ ಹೊಂದಿದರೂ ಸಹ ಸುಶೀಲಕುಮಾರ ದಿನೇ ಅವರ ಮನಸ್ಸು 6 ವರ್ಷದ ಮುಗ್ದ ಮಗುವಿನಂತೆ. ಅವರ ನಿವೃತ್ತಿ ಜೀವನ ಸುಖ ಮಯವಾಗಿರಲಿ ಎಂದು ಶುಭ ಹಾರೈಸಿದರು. ನಿವೃತ್ತ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಸುಶೀಲಕುಮಾರ್ ದಿನೇ ಮಾತನಾಡಿ, ನನ್ನ ಸೇವಾ ವಯೋನಿವೃತ್ತಿ ಅಭಿನಂದನಾ ಸಮಾರಂಭಕ್ಕೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಧನ್ಯವಾದಗಳು ಸಲ್ಲಿಸುತ್ತೇನೆ, ನಿಮ್ಮೆಲ್ಲರ ಪ್ರೀತಿ ವಿಶ್ವಾಸಕ್ಕೆ ಚಿರಋಣಿಯಾಗಿರುತ್ತೇನೆ, ನಿಮ್ಮೆಲ್ಲರ ಸಹಾಯ ಸಹಕಾರದಿಂದ ಒಳ್ಳೆಯ ಕಾರ್ಯಗಳು ಮಾಡಿದ್ದೇನೆ ಎಂದು ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆ ಗ್ರಾಮ ಪಂಚಾಯತ್ ಅಧ್ಯಕ್ಷೆ ತೆಂಗೆಮ್ಮಾ ಶಾಂತವೀರ್ ವಹಿಸಿದ್ದರು. ಈ ಸಂದರ್ಭದಲ್ಲಿ ಗ್ರಾಮ ಪಂಚಾಯತ್ ಸದಸ್ಯರಾದ ಅಣೆಪ್ಪ ಇಸ್ಲಾಂಪುರ್, ಗೋಪಾಲ್ ಮರಪಳ್ಳಿಕ್ಕರ್, ರೇಣುಕಾ ರಾಜೇಶ್ವರ, ಲಲಿತಾ ಕಾಲೆಬಾಗ್, ಗಣಪತಿ, ಶ್ರೀಮಂತ, ಪ್ರಮುಖರಾದ ಧನರಾಜ ಮೈಶುಟಿ, ರಮೇಶ ರಾಂಪುರ, ಅಂಕುಶ ರೆಡ್ಡಿ, ಸಂಜು, ಸಿಬ್ಬಂದಿಗಳಾದ ಗೋಪಾಲ್ ಫುಲೇ, ತುಕಾರಾಮ, ರಾಜೇಶ್ವರಿ ಸೇರಿದಂತೆ ಗ್ರಾಮ ಪಂಚಾಯತ್ ವ್ಯಾಪ್ತಿಯ ಗ್ರಾಮಗಳ ಪ್ರಮುಖರು ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಪಿಕೆಪಿಎಸ್ ಆಡಳಿತ ಮಂಡಳಿಯಿಂದ ಮಾಜಿ ಸಚಿವ ರಾಜಶೇಖರ್ ಪಾಟೀಲ್ ಜನ್ಮದಿನ ಆಚರಣೆ



ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ:- ಕರ್ನಾಟಕ ರಾಜ್ಯದ ಮಾಜಿ ಸಚಿವರು ಹುಮನಾಬಾದ ಮತ ಕ್ಷೇತ್ರದ ಮಾಜಿ ಶಾಸಕರಾದ ರಾಜಶೇಖರ ಬಿ. ಪಾಟೀಲ ಅವರ 59ನೇ ಹುಟ್ಟು ಹಬ್ಬವನ್ನು ಇಲ್ಲಿಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಪಿಕೆಪಿಎಸ್ ಅಧ್ಯಕ್ಷರು ಹಾಗೂ ಆಡಳಿತ ಮಂಡಳಿ ಸದಸ್ಯರಿಂದ ಹಮ್ಮಿಕೊಂಡಿದ್ದ ಜನ್ಮ ದಿನಾಚರಣೆಯನ್ನು ಮಾಜಿ ಸಚಿವ ರಾಜಶೇಖರ ಪಾಟೀಲ್ ಅವರಿಗೆ ಸಂಘದ ಅಧ್ಯಕ್ಷರು ಹಾಗೂ ಸದಸ್ಯರು ಸನ್ಮಾನಿಸಿ, ಕೇಕ್ ಕತ್ತರಿಸುವ ಮೂಲಕ ಅದ್ದೂರಿಯಾಗಿ ಆಚರಿಸಿದರು. ಈ ಸಂದರ್ಭದಲ್ಲಿ ಡಿಸಿಸಿ ಬ್ಯಾಂಕ್ ಜಿಲ್ಲಾ ಉಪಾಧ್ಯಕ್ಷ ಅಭಿಷೇಕ ಪಾಟೀಲ್, ಪಿಕೆಪಿಎಸ್ ಅಧ್ಯಕ್ಷ ಸಿದ್ದರೋಡ ಒಂಟೆನೂರ, ಉಪಾಧ್ಯಕ್ಷ ಅಂಬಾದಾಸ್ ದರವೇಶ, ನಿರ್ದೇಶಕರಾದ ಮಹಾರುದ್ರಯ್ಯಸ್ವಾಮಿ, ಸುನೀಲ ಗಡಮಿ, ರಾಶೀದ್ ಅಲಿ ಪಟೇಲ್, ಮೊಯಿಜೋದ್ದಿನ ಬಾರುದವಾಲೇ, ಮುಖ್ಯ ಕಾರ್ಯನಿರ್ವಾಹಕ ಸಂಗ್ರಾಮ ಬಿ. ಪಡಗಿ, ನಿವೃತ್ತ ಮುಖ್ಯ ಕಾರ್ಯನಿರ್ವಾಹಕ ಶಂಕರ ಚಾಮಾ, ಸಿಬ್ಬಂದಿಗಳಾದ ಕೈಲಾಸಗಿರಿ, ರಮೇಶ ಬಿರಾದಾರ್, ಶ್ರೀಶೈಲ ಸಾದಾ, ರಾಚಪ್ಪ ಮಜಗೆ, ರಾಜಕುಮಾರ ಮುಕಡೆ, ಮದರ್, ಪಿಕೆಪಿಎಸ್ ಮಾಜಿ ಅಧ್ಯಕ್ಷ ವಿಜಯಕುಮಾರ್ ಆರ್. ಮಂಕಾಲ, ಅಶೋಕ ಸ್ವಾಮಿ, ಶ್ರೀಕಾಂತ ಭಟ್, ರವೀಂದ್ರರೆಡ್ಡಿ ರಾಂಪುರ, ಮನೋಜಕುಮಾರ್ ಕೋಟೆಕರ್, ಮಾಣಿಕ ಹಿಪರ್ಗಿ, ವೆಂಕಟ ಪೂಜಾರಿ, ಜಗನಾಥ ಗೋಣಗಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

**ನುಡಿ ಮುತ್ತು**

**ಯಾವುದು ಮಿಥ್ಯೆ ಅದು ನಮಗೆ ಸತ್ಯ ಎನಿಸುತ್ತದೆ.**
**ಯಾವುದು ಸತ್ಯ ಅದು ನಮಗೆ ಮಿಥ್ಯೆ ಎನಿಸುತ್ತದೆ.**
**-ರಾಮದಾಸರು**



ಬಸವಕಲ್ಯಾಣ :- ರಂಜಾನ್ ಹಬ್ಬದ ನಿಮಿತ್ತವಾಗಿ ಪತ್ರಕರ್ತರಾದ ನೈಮೂದಿನ ಚಾಬುಕ ಸವಾರ ಅವರ ನಿವಾಸದಲ್ಲಿ ಮಾಧ್ಯಮ ಮಿತ್ರರಿಗೆ ಹಬ್ಬದ ಶುಭಾಶಯಗಳು ಕೋರಿ ಸಾಮೂಹಿಕ ಭೋಜನ ವ್ಯವಸ್ಥೆ ಮಾಡಿದ್ದರು. ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ತಾಲೂಕಾ ಅಧ್ಯಕ್ಷರಾದ ಮಾರ್ಥಂಡ್ ಜೋಶಿ. ಉಪಾಧ್ಯಕ್ಷರಾದ ಡಿ. ಕೆ. ಪ್ರಹ್ಲಾದಕುಮಾರ. ಪ್ರಧಾನ ಕಾರ್ಯದರ್ಶಿಗಳಾದ ಉದಯಕುಮಾರ್ ಮುಳೆ. ಪ್ರವಿಣ ವಿಸಾಜಿ. ರಾಜೇಂದ್ರ ಗೋಖಲೆ. ವಿರಶೇಟ್ಟಿ ಮಲಶೇಟ್ಟಿ. ಹಾಗೂ ನಾಗಪ್ಪಾ ನಿಣ್ಣೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. (ಮಲ್ಲಮ್ಮ ನುಡಿ ಚಿತ್ರ).

## ಪತ್ರಿಕಾ ರಂಗದಲ್ಲಿ ಖದೀರ್ ಅವರ ಸೇವೆ ಅಪಾರ: ಅಸ್ಲಾಂಮಿಯಾ



(ಮಲ್ಲಮ್ಮ ನುಡಿ ವಾರ್ತೆ)

ಚಿಟಗುಪ್ಪ ಪತ್ರಿಕಾ ರಂಗದಲ್ಲಿ ಅಬ್ದುಲ್ ಖದೀರ್ ಲಶ್ಕೇರಿ ಅವರ ಸೇವೆ ಅಪಾರ ಎಂದು ಸಮಾಜ ಕಾರ್ಯಕರ್ತ ಮಹಮ್ಮದ್ ಅಸ್ಲಾಂಮಿಯಾ ನುಡಿದರು. ಪಟ್ಟಣದಲ್ಲಿ ಗೆಳೆಯರ ಬಳಗದ ವತಿಯಿಂದ ಉರ್ದು ಪತ್ರಿಕೆಯ ತಾಲೂಕ ವರದಿಗಾರ ಅಬ್ದುಲ್ ಖದೀರ್ ಲಶ್ಕೇರಿ ರವರ 32ನೇ ವರ್ಷದ ಹುಟ್ಟು ಹಬ್ಬವನ್ನು ಕೇಕ್ ಕತ್ತರಿಸುವ ಮೂಲಕ ಆಚರಿಸುತ್ತಾ ಮಾತನಾಡಿದ ಅವರು, ಸಮಾಜದಲ್ಲಾಗುವ ಅನ್ಯಾಯವನ್ನು ಅತ್ಯಂತ ಯಶಸ್ವಿಯಾಗಿ ಬಿತ್ತರಿಸುತ್ತಾ ಬಂದಿದಾರೆ ಹೀಗೆ ಇನ್ನು ಸಮಾಜಕ್ಕೆ ಹೆಚ್ಚಿನ ಕೆಲಸ ಕಾರ್ಯವಾಗಲೆಂದು ಲಶ್ಕೇರಿ ಅವರ ಕಾರ್ಯದ ಶ್ಲಾಘನೆಯನ್ನು ಹಾಗೂ ಇವರ ಪ್ರಾಮಾಣಿಕ ಪ್ರಯತ್ನ ಮತ್ತಷ್ಟು ಬೆನೆತ್ತರಕ್ಕೆ ಸಾಗಲಿ ಎಂದು ಶುಭ ಹಾರೈಸಿದರು. ರಾಜಕುಮಾರ ಆರ್. ಹಡಪದ ಸ್ನೇಹಿತನ ಹುಟ್ಟು ಹಬ್ಬದ ಸಂತಸವನ್ನು ಹಂಚಿಕೊಳ್ಳುತ್ತಾ ಅಬ್ದುಲ್ ಖದೀರ್ ಲಶ್ಕೇರಿ ಒಬ್ಬ ಅತ್ಯಂತ ಪರಿಶ್ರಮ ಹಾಗೂ ಸ್ನೇಹ ಜೀವಿ ಅವರ ಕಾರ್ಯ ವೈಖರಿ ಶ್ಲಾಘನೀಯವಾದದ್ದು, ಭಗವಂತ ಇನ್ನೂ ಅವರಿಗೆ ಆಯುಷ್ಯ ಆರೋಗ್ಯ, ಶಕ್ತಿ ನೀಡಿ ಸಾರ್ವಜನಿಕ ಸೇವೆ ಮಾಡಲು ಆಶೀರ್ವದಿಸಬೇಕೆಂದು ನುಡಿದರು. ಸೈಯದ್ ಅಜೀಮ ಮಾತನಾಡಿ, ಯಾವಾಗಲೂ ನಗು ಮುಖದಿಂದಯಿರುವ ಲಶ್ಕೇರಿ ರವರು ಪತ್ರಿಕಾ ರಂಗದಲ್ಲಿ ಸೇವೆ ಮಾಡಲು ದೇವರು ಹೆಚ್ಚಿನ ಶಕ್ತಿ ನೀಡಲಿ ಎಂದು ಮಾತನಾಡುತ್ತಾ ಹುಟ್ಟು ಹಬ್ಬದ ಶುಭಾಶಯಗಳು ಕೋರಿದರು. ಅಬ್ದುಲ್ ಖದೀರ್ ಲಶ್ಕೇರಿ ಮಾತನಾಡಿ, ನಿಮ್ಮೆಲ್ಲರ ಪ್ರೀತಿ, ವಿಶ್ವಾಸ, ಸಹಕಾರಕ್ಕೆ ಚಿರರುಣಿಯಾಗಿರುವೆ ಎಂದು ಹೇಳುತ್ತಾ, ಪತ್ರಿಕಾ ರಂಗದಲ್ಲಿ ಸುಮಾರು 7 ವರ್ಷದಿಂದ ಬಡವರ, ನಿರ್ಗತಿಕರ, ಹಾಗೂ ಸಾರ್ವಜನಿಕರ ಧ್ವನಿಯಾಗಿ ಸೇವೆ ಸಲ್ಲಿಸಲು ಇದು ಒಂದು ಅವಕಾಶ ಸಿಕ್ಕಿದು ನನ್ನ ಭಾಗ್ಯ ಎಂದು ಹೇಳಿದರು. ಈ ಸಂದರ್ಭದಲ್ಲಿ ಶಾಮರಾವ ಭುತ್ತಾಳೆ, ಮುತ್ತಂಗಿ ಗ್ರಾಮ ಪಂಚಾಯತ್ ಮಾಜಿ ಸದಸ್ಯ ಗುಂಡಪ್ಪ ಮದರಗಿ, ಉಪನ್ಯಾಸಕ ಚಂದ್ರಕಾಂತ ನಾರಾಯಣಪುರ್ ಮಾತನಾಡಿದರು. ಸಮದ್ ಲಶ್ಕೇರಿ, ಎಂ.ಪಿ.ಚಿತ್ತಕೋಟಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಮಾಜಿ ಸಚಿವ ರಾಜಶೇಖರ ಪಾಟೀಲರಿಗೆ ಜನ್ಮದಿಂದ ಶುಭ ಕೋರಿದ ಅಶೋಕ ಸ್ವಾಮಿ



ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ:- ಮಾಜಿ ಸಚಿವ ರಾಜಶೇಖರ ಪಾಟೀಲ್ ಅವರ 59ನೇ ಜನ್ಮ ದಿನಾಚರಣೆ ಅಂಗವಾಗಿ ಅವರ ಅಭಿಮಾನಿಗಳು ಕಾರ್ಯಕರ್ತರು ಹಮ್ಮಿಕೊಂಡಿದ್ದ ಜನ್ಮದಿನ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಸಿರುಗುಪ್ಪಕ್ಕೆ ಬರುವಾಗ ಫಾತ್ಮಾಪುರ್ ಕ್ರಾಸ್ ಹತ್ತಿರ ಕಾಂಗ್ರೆಸ್ ಹಿರಿಯ ಮುಖಂಡ ಅಶೋಕ್ ಸ್ವಾಮಿ ಹಾಗೂ ಪುರಸಭೆ ಮಾಜಿ ಉಪಾಧ್ಯಕ್ಷೆ ಸೌಭಾಗ್ಯವತಿ ಸ್ವಾಮಿ ಅವರು ಶಾಲು ಹೊದಿಸಿ ಸನ್ಮಾನಿಸಿ ಹುಟ್ಟು ಹಬ್ಬದ ಶುಭಾಶಯಗಳು ಕೋರಿದರು. ಈ ಸಂದರ್ಭದಲ್ಲಿ ವೆಂಕಟ ಪೂಜಾರಿ, ಜಗನಾಥ ಗೋಣಗಿ, ಮಂಜುನಾಥ್ ಸ್ವಾಮಿ, ಆಕಾಶ ಸ್ವಾಮಿ, ಅಂಬರೀಶ್ ಸ್ವಾಮಿ, ಕರೇಪ್ಪ ಮಟ್ಟಿ, ಲಕ್ಷ್ಮಿ ಧನಗರ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ವಿವಿಧ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ : ಸಿಇಓ ಲವೀಶ್ ಒರಡಿಯಾ

ಯಾದಗಿರಿ : ಏಪ್ರಿಲ್ 02- ಯಾದಗಿರಿ ಜಿಲ್ಲೆಯ ಗುರುಮಠಕಲ್ ತಾಲೂಕಿನ ಚಪೆಟ್ಲಾ ಗ್ರಾಮ ಪಂಚಾಯಿತಿಗೆ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶ್ರೀ ಲವೀಶ್ ಒರಡಿಯಾ ಅವರು ಇಂದು ಭೇಟಿ ನೀಡಿ ಸಾರ್ವಜನಿಕರ ಸಮಸ್ಯೆಗಳ ಬಗ್ಗೆ ಸ್ಪಂದಿಸಿದರು.

ಅಂಗನವಾಡಿ ಕೋಸಿನ ಮನೆಗೆ ಭೇಟಿ ನೀಡಿ ಪರಿಶಿಲಿಸಿದರು. ಚೆಪೆಟ್ಲಾ ಬೆಟ್ಟದಲ್ಲಿ ನಡೆಯುತ್ತಿರುವ (ಟ್ರೆಂಚೆಸ್) ಕಂದಕ ನಿರ್ಮಾಣ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ ಕಾಮಗಾರಿ ವೀಕ್ಷಿಸಿದರು. ಸ್ಥಳದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಕೂಲಿಕಾರ ಸಮಸ್ಯೆ ಆಲಿಸಿದರು. ಚಿನ್ನಕಾರ ಪಂಚಾಯತಿ ವ್ಯಾಪ್ತಿಯಲ್ಲಿರುವ ಧರ್ಮಾಪುರ ತಾಂಡಕ್ಕೆ ಭೇಟಿ ನೀಡಿ, ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಆಲಿಸಿದರು. ಬೋರ್ವೆಲ್ ಸಮಸ್ಯೆ ಪರಿಹರಿಸುವಂತೆ ಪಿಡಿಓ ಅವರಿಗೆ ತಿಳಿಸಿದರು. ನಂತರ ಚಿನ್ನಕಾರ ಗ್ರಾಮ ಪಂಚಾಯಿತಿಗೆ ಭೇಟಿ ನೀಡಿ ಗ್ರಂಥಾಲಯ, ಗ್ರಾಮ ಪಂಚಾಯಿತಿ ಹೊಸ ಕಟ್ಟಡ ನಿರ್ಮಾಣಕ್ಕೆ ಸ್ಥಳ ಪರಿಶೀಲನೆ ನಡೆಸಿದರು. ಈ ಸಂದರ್ಭದಲ್ಲಿ ಜಿ.ಪಂ ಯೋಜನಾ ನಿರ್ದೇಶಕರಾದ ಶ್ರೀ ಸಿ.ಬಿ ದೇವರಮನಿ, ಗುರುಮಠಕಲ್ ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿ ಅಂಬ್ರೇಶ್ ಪಾಟೀಲ್, ತಾ.ಪಂ ಸಹಾಯಕ ಯೋಜನಾ ನಿರ್ದೇಶಕ ರಾಮಚಂದ್ರ ಬಸೂದೆ, ತಾಂತ್ರಿಕ ಸಂಯೋಜಕ ಮುಜಾಮಿಲ್, ಟಿಎಮ್ ಐಸಿ ತಮ್ಮಾರೆಡ್ಡಿ, ಸಂಬಂಧಿಸಿದ ಪಂಚಾಯಿತಿ ಪಿಡಿಓ, ಬಿಎಫ್‌ಟಿಗಳು ಹಾಗೂ ಗ್ರಾ.ಪಂ ಸದಸ್ಯರು ಮತ್ತು ಸಿಬ್ಬಂದಿವರ್ಗ ಉಪಸ್ಥಿತರಿದ್ದರು.

ಕಾನೂನು ಸುವ್ಯವಸ್ಥೆ ಶಿಸ್ತು ಪಾಲನೆ ಅಪರಾಧ

## ನಿಯಂತ್ರಣ ಶಾಂತಿ ಸೌಹಾರ್ದತೆ ಕಾಪಾಡುವುದು ಆದ್ಯ ಕರ್ತವ್ಯ : ನಿವೃತ್ತ ಪಿ.ಎಸ್.ಐ. ಚಂದ್ರಕಾಂತ ಸೋನಾರ



ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ: ಏ. 02- ನಮ್ಮ ಪೊಲೀಸ್ ಇಲಾಖೆಯೂ ಕೇವಲ ಕಾನೂನು ಹಾಗೂ ಸುವ್ಯವಸ್ಥೆ ಕಾಪಾಡುವುದು ಅಷ್ಟೆ ಅಲ್ಲ, ಶಿಸ್ತು ಪಾಲನೆ ಸಮಾಜದಲ್ಲಿ ಅಪರಾಧ ನಿಯಂತ್ರಣ ಶಾಂತಿ ಸೌಹಾರ್ದತೆ ಕಾಪಾಡುವುದು ಸಾರ್ವಜನಿಕರ ಆಸ್ತಿಪಾಸ್ತಿ ರಕ್ಷಣೆ ಮಾಡುವುದು ಆದ್ಯಕರ್ತವ್ಯವಾಗಿದೆ ಎಂದು ಮಹಾಗಾಂವ ಪೊಲೀಸ್ ಠಾಣೆಯ ನಿವೃತ್ತಿ ಪಿ.ಎಸ್.ಐ. ಚಂದ್ರಕಾಂತ ಸೋನಾರ ಅವರು ಹೇಳಿದರು.

ಮಂಗಳವಾರದಂದು ಸಶಸ್ತ್ರ ಪೊಲೀಸ್ ಕವಾಯತ್ತು ಮೈದಾನದಲ್ಲಿ ಪೊಲೀಸ್ ಧ್ವಜ ದಿನಾಚರಣೆ ಅಂಗವಾಗಿ ಆಯೋಜಿಸಿದ ಕಾರ್ಯಕ್ರಮದಲ್ಲಿ ಪರೇಡ್ ವಂದನೆ ಸ್ವೀಕರಿಸಿ ಮುಖ್ಯ ಅತಿಥಿಗಳಾಗಿ ಮಾತನಾಡಿದರು.

ನಾನು ಪೊಲೀಸ್ ಇಲಾಖೆಯ ಸೇವೆಗೆ ಇದೇ ಡಿ.ಎ.ಆರ್. ಕೇಂದ್ರಸ್ಥಾನದಲ್ಲಿ 1992 ಫೆಬ್ರುವರಿ 20ರಂದು ಪೊಲೀಸ್ ಕಾನ್ಸಟೇಬಲ್ ಅಂತಾ ಭರ್ತಿಯಾಗಿ, ನಂತರ ಮುಖ್ಯ ಪೇದೆ, ಎ.ಎಸ್.ಐ. ಮತ್ತು ಪಿ.ಎಸ್.ಐ. ಅಂತ ಪದೋನ್ನತಿ ಹೊಂದಿ 32 ವರ್ಷಗಳ ಸುದಿರ್ಘ ಸೇವೆ ಸಲ್ಲಿಸಿದ್ದೇನೆ ಎಂದರು.

ಪ್ರಾಮಾಣಿಕ ಸೇವೆ, ಶೌರ್ಯ ಮತ್ತು ಅರ್ಪಣಾ ಮನೋಭಾವದ ಸಂಕೇತವಾಗಿರುವ ಪೊಲೀಸರು ತಮ್ಮ ಕುಟುಂಬವನ್ನು ಮರೆತು ತಮ್ಮ ಪ್ರಾಣವನ್ನು ಲೆಕ್ಕಿಸದೇ ರಾತ್ರಿ ಹಗಲು ಸಮಾಜದ ಆಸ್ತಿ, ಪಾಸ್ತಿ, ಪ್ರಾಣ ರಕ್ಷಣೆಯನ್ನು ಮಾಡುವುದು ಎಂದರೆ ಅದು ಸಾಮಾನ್ಯದ ಮಾತಲ್ಲ ಎಂದು ಹೇಳಿದರು.

ಪೋಲೀಸರು ಇಲಾಖೆಯಲ್ಲಿನ ಹೆಚ್ಚಿನ ಒತ್ತಡ ಇರುವುದು ಸಹಜ ಆದರೂ ಕೂಡಾ ತಾವುಗಳು ಸಮಯವನ್ನು ಕಾಯ್ದಿರಿಸಿ ಕುಟುಂಬಕ್ಕೆ ಸಮಯ ನೀಡಬೇಕು ತಮ್ಮ ಮಕ್ಕಳು ಉತ್ತಮ ವ್ಯಾಸಂಗ ಪಡೆದು ಉನ್ನತ ಹುದ್ದೆ ಅಲಂಕರಿಸಲು ಮತ್ತು ಗೌರವಾನ್ವಿತ ಹುದ್ದೆಗಳನ್ನು ಪಡೆಯಲು ಶ್ರಮವಹಿಸಬೇಕು ಹಾಗೂ ಅರೋಗ್ಯ ಕಡೆ ಗಮನ ಹರಿಸಲು ತಿಳಿಸಿದರು.

ಪೊಲೀಸ್ ಅಧೀಕ್ಷ ಅಡ್ಡೂರು ಶ್ರೀನಿವಾಸಲು ಸ್ವಾಗತಿಸಿ ಮಾತನಾಡಿ, ಪೋಲಿಸ್ ಧ್ವಜಗಳನ್ನ ಜಿಲ್ಲೆಯ ಎಲ್ಲ ಪೊಲೀಸ್ ಠಾಣೆಗಳಿಗೆ ಕಳುಹಿಸಲಾಗುತ್ತಿದ್ದು, ಮಾರಾಟ ಮಾಡಿ ಬಂದತಹ ಹಣದಿಂದ 50 ಪ್ರತಿಶತ ರಷ್ಟು ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿಗಾಗಿ ಮತ್ತು 50 ಪ್ರತಿಶತ ಕೇಂದ್ರ ಪೊಲೀಸ್ ಕಲ್ಯಾಣ ನಿಧಿಗೆ ಜಮಾ ಮಾಡಲಾಗುತ್ತಿರುತ್ತದೆ ಇದ-ರಿಂದ ನಿವೃತ್ತ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಅನುಕೂಲವಾಲಿದೆ ಎಂದರು.

ನಗರ ಪೋಲಿಸ್ ಆಯುಕ್ತ ಶರಣಪ್ಪ ಎಸ್.ಡಿ. ಅಧ್ಯಕ್ಷತೆ ವಹಿಸಿ ಮಾತನಾಡಿ, ಇತ್ತೀಚಿನ ದಿನಗಳ ಕರ್ತವ್ಯನಿರ್ವಹಿಸುತ್ತಿರುವ ಪೊಲೀಸ್ ಇಲಾಖೆಯ ಸಿಬ್ಬಂದಿಗಳಿಗೆ ಅನೇಕ ಕಾಯಿಲೆಗಳ ಪರೀಕ್ಷೆ ತಪಾಸಣೆ ಈಗಾಗಲೇ ಕೈಗೊಳ್ಳಲಾಗಿದೆ. ಅವರ ಆರೋಗ್ಯದ ಬಗ್ಗೆ ಕಾಳಜಿ ವಹಿಸಲಾಗುತ್ತದೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಕರ್ನಾಟಕ ಪೊಲೀಸ್ ಧ್ವಜಗಳನ್ನು ಬಿಡುಗಡೆಗೊಳಿಸಿದರು. ಕಲಬುರಗಿ ಜಿಲ್ಲೆಯ ಮತ್ತು ಕಲಬುರಗಿ ನಗರ ನಿವೃತ್ತ ಪೊಲೀಸ್ ಹಾಗೂ ಸೇವೆಯಲ್ಲಿರರುವ ಪೊಲೀಸ್ ಅಧಿಕಾರಿ ಸಿಬ್ಬಂಧಿಗಳಿಗೆ ಪೊಲೀಸ್ ಕಲ್ಯಾಣ ನಿಧಿಯಿಂದ ನೀಡಲಾದ ಆರ್ಥಿಕ ಸಹಾಯದ ಚೆಕ್ ವಿತರಣೆ ಮಾಡಿದರು.

ಉಪ ಪೊಲೀಸ್ ಆಯುಕ್ತ (ಕಾ & ಸು ) ಕನಿಕಾ ಸಿಕ್ರಿವಾಲ್ ವಂದನಾರ್ಪಣೆ ಕೈಗೊಂಡರು. ಕಲಬುರಗಿ ಜಿಲ್ಲೆಯ ಡಿ.ಎ.ಆರ್. ಘಟಕ ಚಂದ್ರಶೇಖರ ಆರ್.ಪಿ.ಐ ಪಂಥಸಂಚಲನ ನಡೆಸಿದರು.

ಇದೇ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಆಯುಕ್ತರಾದ ಶಿಂಧೆ ಅವಿನಾಶ ಸಂಜೀವನ, ಪೋಲಿಸ್ ತರಬೇತಿ ಮಹಾವಿದ್ಯಾಲಯ ಪ್ರಾಂಶುಪಾಲರು ಮತ್ತು ಪೋಲಿಸ್ ಅಧೀಕ್ಷಕರು ಡೆಕ್ಕಾ ಕಿಶೋರ ಬಾಬು, ಹೆಚ್ಚುವರಿ ಪೊಲೀಸ್ ಅಧೀಕ್ಷಕ ಮಹೇಶ ಮೇಘಣ್ಣನವರ, ನಗರದ ಅಫರಾದ ಮತ್ತು ಸಂಚಾರ ವಿಭಾಗದ ಪೊಲೀಸ್ ಉಪ ಆಯುಕ್ತ ಪ್ರವೀನ ನಾಯಕ್, ಇದ್ದರು ಪೊಲೀಸ್ ಇಲಾಖೆ ಅಧಿಕಾರಿಗಳು ಮತ್ತು ಸಾರ್ವಜನಿಕರು ಭಾಗವಹಿಸಿದ್ದರು.

## ಆರೋಗ್ಯಯುತ ಜೀವನಕ್ಕೆ ನಿಯಮಿತ ವಾಕಿಂಗ್ ಅಗತ್ಯ



ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ:ಏ.2:ನಡಿಗೆ ಅಥವಾ ವಾಕಿಂಗ್ ಮಾಡುವುದರಿಂದ ದೇಹದ ಎಲ್ಲಾ ಭಾಗಗಳಿಗೆ ರಕ್ತ ಪರಿಚಲನೆಯಾಗಿ ಎಲ್ಲಾ ಅಂಗಗಳು ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತವೆ. ಇದರಿಂದ ಯಾವುದೇ ಕಾಯಿಲೆ ಬರುವುದಿಲ್ಲ ಹಾಗೂ ಈಗಾಗಲೇ ಯಾವುದಾದರೂ ಕಾಯಿಲೆ ಪೀಡಿತರಿಗೆ ಅದು ವಾಸಿಯಾಗಲು ಅಥವಾ ನಿಯತ್ರಣದಲ್ಲಿರಲು ನಿಯಮಿತವಾಗಿ ವಾಕಿಂಗ್ ಮಾಡುವುದು ಅಗತ್ಯವಾಗಿದೆ ಎಂದು ಆರೋಗ್ಯ ಸಂರಕ್ಷಣಾ ಜಾಗೃತಿದಾರ, ಸಮಾಜ ಸೇವಕ ಚಂದ್ರಕಾಂತ ಬಿರಾದಾರ ಅಭಿಮತಪಟ್ಟರು.

ನಗರದ ಆಳಂದ ರಿಂಗ್ ರಸ್ತೆಯ ಸಮೀಪವಿರುವ ಶುಕ್ಲಾ ಲೇಔಟ್‌ನಲ್ಲಿ 'ಬಸವೇಶ್ವರ ಸಮಾಜ ಸೇವಾ ಬಳಗ' ಮತ್ತು 'ಆಳಂದ ರಸ್ತೆ ವಾಕಿಂಗ್ ಗೆಳೆಯರ ಬಳಗ'ದ ವತಿಯಿಂದ ಬುಧವಾರ ಬೆಳಿಗ್ಗೆ ಜರುಗಿದ 'ರಾಷ್ಟ್ರೀಯ ವಾಕಿಂಗ್ ದಿನಾಚರಣೆ'ಯಲ್ಲಿ ಅವರು ಮಾತನಾಡುತ್ತಿದ್ದರು.

ಮಾಜಿ ಯೋಧ ರೇಣುಕಾಚಾರ್ಯ ಸ್ಥಾವರಮಠ, ಸಮಾಜ ಸೇವಕ ಡಾ.ಸತೀಶ್ ಟಿ.ಸಣಮನಿ ಮಾತನಾಡುತ್ತಾ, ದೈಹಿಕ ಮತ್ತು ಮಾನಸಿಕವಾಗಿ ಆರೋಗ್ಯವಾಗಿರಲು ದಿನನಿತ್ಯ ವಾಕಿಂಗ್ ಮಾಡುವ ಹವ್ಯಾಸ ಬೆಳೆಸಿಕೊಳ್ಳಬೇಕು. ಆರೋಗ್ಯಕ್ಕಿಂತ ದೊಡ್ ಸಂಪತ್ತು ಬೇರೊಂದಿಲ್ಲ. ಅಂತಹ ಸಂಪತ್ತು ಕಳೆದಕೊಂಡು, ಬೇರೆಲ್ಲ ಸಂಪತ್ತು ಗಳಿಸಿದರೆ ಯಾವುದೇ ಪ್ರಯೋಜನೆಯಿಲ್ಲ. ಅದಕ್ಕಾಗಿ ಪ್ರತಿಯೊಬ್ಬರು ತಮ್ಮ ಆರೋಗ್ಯದತ್ತ ಕಾಳಜಿ ವಹಿಸಬೇಕಾಗಿದೆ ಎಂದರು.

ಈ ಸಂದರ್ಭದಲ್ಲಿ ಬಸವೇಶ್ವರ ಸಮಾಜ ಸೇವಾ ಬಳಗದ ಅಧ್ಯಕ್ಷ ಎಚ್.ಬಿ.ಪಾಟೀಲ, ವಾಕಿಂಗ್ ಬಳಗದ ಶಿವಯೋಗೆಪ್ಪಾ ಎಸ್.ಬಿರಾದಾರ, ಕೆ.ಬಸವರಾಜ, ಶಿವಲಿಂಗಪ್ಪ ಮುಲಗೆ, ಭೀಮಾಶಂಕರ ಮುಲಗೆ, ಪ್ರಭುಲಿಂಗ ಮುಲಗೆ, ಆರ್.ಎಸ್.ಪಾಟೀಲ, ಶರಣಬಸಪ್ಪ ಹೌಶೆಟ್ಟಿ, ರಾಜಶೇಖರ ಬಿ.ಮರಡಿ, ಶ್ರೀಶೈಲ್ ಭುಸನೂರ, ಶರಣಬಸಪ್ಪ ಬಡದಾಳ, ದಯಾನಂದ ಕಮಲಾಪುರಕರ್, ಕಾಶಿನಾಥ ಮುಲಗೆ ಸೇರಿದಂತೆ ಇನ್ನಿತರರಿದ್ದರು.

# ಬ್ರಾಹ್ಮಣರು ಬೌದ್ಧಗಯಾ ಬಿಡದಿದ್ದರೆ ಖಡ್ಗ ಹಿಡಿದು ಹೋರಾಟ: ಭಂತೆ ಸಂಘರಕ್ಷಿತ



ಮಲ್ಲಮ್ಮ ನುಡಿ ವಾರ್ತೆ
ಬೀದರ. ಏ. 02 : ತಥಾಗತ ಮಹಾತ್ಮ ಗೌತಮ ಬುದ್ಧರ ಜ್ಞಾನೋದಯ ಸ್ಥಳ, ಬೌದ್ಧರ ಪವಿತ್ರ ತಾಣವಾದ ಬೌದ್ಧಗಯಾವನ್ನು ಬ್ರಾಹ್ಮಣರು ಬೌದ್ಧರಿಗೆ ಬಿಟ್ಟುಕೊಡದಿದ್ದರೆ ಇನ್ಮುಂದೆ ಸಾಮ್ರಾಟ್ ಅಶೋಕರ ಖಡ್ಗ ಹಿಡಿದು ಹೋರಾಟ ಮಾಡಬೇಕಾಗುತ್ತದೆ ಎಂದು ವೈಶಾಲಿನಗರ ಆಣದೂರಿನ ಭಂತೆ ಸಂಘರಕ್ಷಿತ ತಿಳಿಸಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಬುಧವಾರ ಕರೆದ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು ಬೌದ್ಧಗಯಾವನ್ನು ಬ್ರಾಹ್ಮಣರು ಬೌದ್ಧರಿಗೆ ಬಿಟ್ಟುಕೊಡಬೇಕೆಂಬ ಹೋರಾಟ ಸ್ವತಂತ್ರ ಪೂರ್ವದಿಂದಲೂ ಇದೆ. ಆದರೆ ಜಗತ್ತಿನ ಬೌದ್ಧ ಉಪಾಸಕರು ಗಯಾಗೆ ಆಗಮಿಸಿ ಶಾಂತಿಯಿಂದ ಪ್ರಾರ್ಥನೆ ಮಾಡುವ ಸಂದರ್ಭದಲ್ಲಿ ಬ್ರಾಹ್ಮಣರು ಹೋಮ, ಹವನ, ಗಂಟೆ ಜಾಗಟೆ ಬಾರಿಸಿ ಅಶಾಂತಿ ಎಬ್ಬಿಸುತ್ತಿದ್ದಾರೆ ಎಂದು ಆರೋಪಿಸಿದರು. ಅನೇಕ ಬೌದ್ಧ ಸ್ತೂಪಗಳನ್ನು ಕೆಡವಿ ತಮ್ಮ ಸಂಸ್ಕೃತಿ ಬಿತ್ತುತ್ತಿದ್ದಾರೆ.

ಈ ಕಾರಣಕ್ಕಾಗಿ ಏಪ್ರಿಲ್ 5 ರಂದು ಬೆಳಿಗ್ಗೆ 10 ಗಂಟೆಗೆ ಶಹಾಗಂಜ್ ಬುದ್ಧವಿಹಾರದಿಂದ ಅಂಬೇಡ್ಕರ್ ವೃತ್ತ, ಭಗತಸಿಂಗ್ ವೃತ್ತದ ಮಾರ್ಗವಾಗಿ ಜಿಲ್ಲಾಧಿಕಾರಿಗಳ ಕಚೇರಿಗೆ ತೆರಳಿ ರಾಷ್ಟ್ರಪತಿ, ಪ್ರಧಾನಮಂತ್ರಿ ಹಾಗೂ ಬಿಹಾರ ರಾಜ್ಯಪಾಲರು ಮತ್ತು ಮುಖ್ಯಮಂತ್ರಿಗಳಿಗೆ ಬರೆದ ಮನವಿ ಪತ್ರವನ್ನು ಜಿಲ್ಲಾಧಿಕಾರಿ ಮೂಲಕ ಸಲ್ಲಿಸಲಾಗುತ್ತಿದೆ. ಮಾರ್ಗಮಧ್ಯದಲ್ಲಿ 1949ರ ಕಾಯಿದೆ ಪ್ರತಿ ಸುಟ್ಟು ಪ್ರತಿಭಟನೆ ಮಾಡಲಾಗುತ್ತಿದೆ ಎಂದು ಭಂತೆ ಸಂಘರಕ್ಷಿತ ತಿಳಿಸಿದರು.

ಪೂಜ್ಯ ಭಂತೆ ಧಮ್ಮಾನಂದ ಮಹಾತೇರೋ ಮಾತನಾಡಿ ಮೊದಲ ಪ್ರಧಾನಿ ಜವಾಹರಲಾಲ್ ನೆಹರೂ ಅವರು ದಿ ಡಿಸ್ಕವರಿ ಆಫ್ ಇಂಡಿಯಾ ಪುಸ್ತಕ ಬರೆಯುವಾಗ ಬೌದ್ಧಗಯಾಗೆ ಹೋಗಿ ಅಧ್ಯಯನ ಮಾಡುವ ಸಂದರ್ಭದಲ್ಲಿ ಮುಚ್ಚಿಹೋದ ಬೌದ್ಧಗಯಾ ಕಾಣಿಸುತ್ತದೆ. ಅದರ ಉಳಿವೆಗಾಗಿ ಒಂದು ಸಮಿತಿ ರಚಿಸಿ ತಾತ್ಕಾಲಿಕವಾಗಿ ಬ್ರಾಹ್ಮಣರಿಗೆ ನೇಮಕ ಮಾಡುತ್ತಾರೆ. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಬೌದ್ಧಧರ್ಮ ಸ್ವೀಕಾರದ ನಂತರ ಜಗತ್ತಿನ ತುಂಬಾ ಧರ್ಮ ಬೆಳೆದು ವಿಶ್ವದ ಜನರು ಗಯಾ ಕಡೆಗೆ ದರ್ಶನಕ್ಕಾಗಿ ಬರುತ್ತಾರೆ. ಗಯಾ ಅಭಿವೃದ್ಧಿಗೆ ವಿಶ್ವದ ಉಪಾಸಕರ ಹಣ ದಾನ ಹರಿದು ಬಂತು. ಇದನ್ನು ಕಂಡ ಕೆಲವು ಬ್ರಾಹ್ಮಣರು ಹಣಕ್ಕಾಗಿ ಅಲ್ಲಿಯೇ ಉಳಿದು ಇಂದು ಸಂಪೂರ್ಣ ವಶಪಡಿಸಿಕೊಂಡಿದ್ದಾರೆ. ಅಲ್ಲಿಯ ಸರ್ಕಾರ ಮತಕ್ಕಾಗಿ ಕಣ್ಮುಚ್ಚಿಕುಳಿತಿದೆ ಎಂದರಲ್ಲದೆ ಬೌದ್ಧಗಯಾ ಮುಕ್ತಿಗಾಗಿ ಸಾಂಸ್ಕೃತಿಕ ಆಂದೋಲನ ಆರಂಭವಾಗಿದೆ. ಎಲ್ಲರೂ ಕೈಜೋಡಿಸಿ ಎಂದು ತಿಳಿಸಿದರು.

ಆಣದೂರಿನ ಭಂತೆ ಜ್ಞಾನಸಾಗರ ಮಾತನಾಡಿ ಬೌದ್ಧರು ಬ್ರಾಹ್ಮಣರ ವಿರೋಧಿಗಳಲ್ಲ. ಆದರೆ ಬೌದ್ಧರ ಬುದ್ಧಗಯಾದಲ್ಲಿ ನಡೆಸುತ್ತಿರುವ ಬ್ರಾಹ್ಮಣ್ಯತ್ವದ ವಿರೋಧಿಗಳಾಗಿದ್ದಾರೆ. ಹೀಗಾಗಿ ಬೌದ್ಧಗಯಾ ರಕ್ಷಣೆ ನಮ್ಮೆಲ್ಲರ ಹೊಣೆ. ಬೌದ್ಧಗಯಾ ರಕ್ಷಣೆಗಾಗಿ ಅಲ್ಲಿಯ ಸರ್ಕಾರ ಆಡಳಿತದಲ್ಲಿ ಬೌದ್ಧರಿಗೆ ಅವಕಾಶ ನೀಡಬೇಕು. ಅಭಿವೃದ್ಧಿಗೆ ಸಹಕಾರ ನೀಡಬೇಕೆಂದರು.

ಇದೇ ವೇಳೆ ಸುದ್ದಿಗೋಷ್ಠಿಯಲ್ಲಿ ರೇಕುಳಗಿಯ ಭಂತೆ ಧಮ್ಮಪಾಲ, ಅಮಲಾಪುರದ ಭಂತೆ ಧಮ್ಮಕೀರ್ತಿ, ಭಂತೆ ಶಾಂತಿಪಾಲ, ಭಂತೆ ಸಾರಿಪುತ್ರ, ಭಾರತೀಯ ಬೌದ್ಧ ಮಹಾಸಭೆಯ ಅಧ್ಯಕ್ಷ ರಾಜಕುಮಾರ ಗುನ್ನಳ್ಳಿಕರ್, ಡಾ. ಕಾಶಿನಾಥ ಚೆಲುವಾ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು. ಕೊನೆಯಲ್ಲಿ ಪ್ರತಿಭಟನೆಯ ಕರಪತ್ರಗಳನ್ನು ಬಿಡುಗಡೆ ಮಾಡಲಾಯಿತು.

# ಬ್ರೀಮ್ಸ್ ಆಸ್ಪತ್ರೆಯಲ್ಲಿ ವಿಶೇಷ ಆಟಿಸಂ ಚಿಕಿತ್ಸಾ ವಿಭಾಗ ಸ್ಥಾಪಿಸಲು ಸಚಿವ ಈಶ್ವರ . ಬಿ. ಖಂಡ್ರೆ ಸೂಚನೆ




ಮಲ್ಲಮ್ಮ ನುಡಿ ವಾರ್ತೆ
ಬೀದರ.ಏ.02:ವಿಜಯದೇವಿ ಫೌಂಡೇಶನ್ ಅಡಿಯಲ್ಲಿ ನಡೆಯುತ್ತಿರುವ ಉಟಗೆ ನ್ಯೂರೊ ಮತ್ತು ಉಮಂಗ್ ವಿಶೇಷ ಶಾಲೆ ಬೀದರ ಹಾಗೂ ಐ.ಎ.ಪಿ. ಫೌಂಡೇಶನ್‌ನಿಂದ ಇಂದು ವಿಶ್ವ ಆರ್ಟಿಜಮ್ ದಿನಾಚರಣೆ ಆಚರಿಸಲಾಯಿತು.

ವಿಶ್ವ ಆಟಿಸಂ ದಿನಾಚರಣೆ ಅಂಗವಾಗಿ, ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಈಶ್ವರ ಖಂಡ್ರೆ ಅವರು ಬೀದರ್‌ನ ಉಟಗೇ ಆಸ್ಪತ್ರೆಗೆ ಭೇಟಿ ನೀಡಿ, ಆಟಿಸಂ ಪೀಡಿತ ಮಕ್ಕಳೊಂದಿಗೆ ಆತ್ಮೀಯವಾಗಿ ಸಂವಾದ ನಡೆಸಿ, ಅವರ ಪೋಷಕರಿಗೆ ಧೈರ್ಯ ತುಂಬಿದರು.

ಬೀದರ್ ಜಿಲ್ಲೆಯಲ್ಲಿ ಆಟಿಸಂ ಪೀಡಿತ ಮಕ್ಕಳಿಗೆ ಉತ್ತಮ ಆರೋಗ್ಯ ಸೇವೆ ಹಾಗೂ ಸೌಲಭ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ,ಃಖಙಖಙಖ ಆಸ್ಪತ್ರೆಯಲ್ಲಿ ವಿಶೇಷ ಆಟಿಸಂ ಚಿಕಿತ್ಸಾ ವಿಭಾಗ ಸ್ಥಾಪಿಸಲು ಅವರು ಸೂಚಿಸಿದರು. ಬೀದರ್‌ನಲ್ಲಿ ಆಟಿಸಂ ಪೀಡಿತ ಮಕ್ಕಳಿಗೆ ಉತ್ತಮ ಚಿಕಿತ್ಸೆ ಮತ್ತು ಸೇವೆ ಒದಗಿಸುತ್ತಿರುವ ಡಾ. ಪ್ರಶಾಂತ ಉಟಗೇ ಅವರ ಶ್ರಮ ಶ್ಲಾಘನೀಯವಾಗಿದೆ. ಅವರ ಸೇವೆಯನ್ನು ಪ್ರಶಂಸಿಸಿದ ಶ್ರೀ ಈಶ್ವರ ಖಂಡ್ರೆ, ಆಟಿಸಂ ಪೀಡಿತ ಮಕ್ಕಳು ವಿಭಿನ್ನ ಪ್ರತಿಭೆಗಳನ್ನು ಹೊಂದಿದ್ದು, ಅವರ ಸಾಮರ್ಥ್ಯವನ್ನು ಬೆಳೆಸಿ, ಸಮಾಜದಲ್ಲಿ ಮುಂಚೂಣಿಗೆ ತರುವುದಕ್ಕೆ ಎಲ್ಲರೂ ಬೆಂಬಲಿಸಬೇಕು ಎಂದು ಕರೆ ನೀಡಿದರು

ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಲಾಯಿತು ಮತ್ತು ವಿಶೇಷ ಮಕ್ಕಳ ಜೊತೆ ಕೇಕ್ ಕತ್ತರಿಸುವ ಮೂಲಕ ಸಿಹಿಯನ್ನು ಹಂಚಲಾಯಿತು.

ಆರ್ಟಿಜಮ್ ಮಕ್ಕಳ ಸೇವೆಯನ್ನು ಮಾಡುತ್ತಿರುವ ವೈದ್ಯಾಧಿಕಾರಿಗಳನ್ನು ಹಾಗೂ ಸಿಬ್ಬಂದಿ ವರ್ಗದವರು ವಿಶೇಷ ಮಕ್ಕಳ ಸೇವೆ ಮಾಡುತ್ತಿರುವುದು ಶ್ಲಾಘನೀಯವಾಗಿದೆ ಎಂದು ಹೇಳಿ, ತಮ್ಮ ಕೈಲಾದ ಸಹಾಯವನ್ನು ಮಾಡುವಂತೆ ಮನವರಿಕೆ ಮಾಡಿಕೊಟ್ಟರು. ಮಕ್ಕಳ ಸಹಾಯ ಸೌಲಭ್ಯಗಳ ಕುರಿತು ಅಧಿಕಾರಿ ರವರನ್ನು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷ ಸ್ಥಾನವನ್ನು ಮಾನ್ಯ ಶ್ರೀ ಡಾ. ಅಭಿಜಿತ ಸರ್ ರವರು ವಿಜಯದೇವಿ ಫೌಂಡೇಶನ್ ವತಿಯಿಂದ ವಿಶೇಷ ಮಕ್ಕಳಿಗೆ ವಾಲ್ಕರ್, ವ್ಹೀಲ್ ಚೇರ್, ಜಿಮ್ ಬಾಲ್, ವೇಟ್ ಕಪ್ ಹಾಗೂ ಮಾತ್ರೆಗಳನ್ನು ವಿತರಣೆ ಮಾಡಿರುತ್ತಾರೆ.

ಕಾರ್ಯಕ್ರಮದ ಅತಿಥಿಗಳಾಗಿ ಆಗಮಿಸಿದ ಡಾ. ಪ್ರಶಾಂತ ಉಟಗೆ ಮಕ್ಕಳನ್ನು ಕುರಿತು ಪಾಲಕರು ಮಕ್ಕಳಿಗೆ ಶಾಪ ಎಂದು ತಿಳಿಯದೇ, ದೇವರ ಕೊಟ್ಟವರ ಎಂದು ತಿಳಿದುಕೊಳ್ಳಬೇಕೆಂದು ತಿಳಿಸಿದರು ಹಾಗೂ ಮಕ್ಕಳಿಗೆ ಸಂಬಂಧಪಟ್ಟ ವ್ಯವಸ್ಥೆಯನ್ನು ಕಲ್ಪಿಸಿಕೊಡುವಂತೆ ಮಾನ್ಯರಿಗೆ ಕಿವಿಮಾತು ಹೇಳಿದರು.

ಕಾರ್ಯಕ್ರಮದ ಇನ್ನೋರ್ವ ಅತಿಥಿಯಾಗಿ ಆಗಮಿಸಿದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್ ಬೀದರ ಗಿರಿಶ ಬದೋಲೆ, ಜ್ಞಾನೇಶ್ವರ ನಿರ್ಗುಡಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಬೀದರ, ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಅಧಿಕಾರಿಗಳು, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರಾದ ಎಚ್. ಎಸ್. ಸಿಂಧು, ಡಾ. ಗಿರಿಶ, ಡಾ. ರತಿಕಾಂತ ಸ್ವಾಮಿ ಮುಖ್ಯ ವೈದ್ಯಾಧಿಕಾರಿಗಳು ಬೀದರ, ಡಾ. ಸಿ. ಆನಂದರಾವ, ಶ್ರೀ ಸುಭಾಷ ಪಾಟೀಲ ಮಕ್ಕಳ ತಜ್ಞರು, ಐ.ಎ.ಪಿ. ಫೌಂಡೇಶನ್ ಕಾರ್ಯದರ್ಶಿಯಾದ ಡಾ. ಭಗವನಮಳದಾರ, ಶ್ರೀ ನಾಗರಾಜ ಮಠ ಉಪನಿರ್ದೇಶಕರು ಯೋವಜನ ಮತ್ತು ಕ್ರೀಡಾ ಇಲಾಖೆ ಬೀದರ, ಸಿಬ್ಬಂದಿ ವರ್ಗದವರಾದ ಡಾ. ಹೇಮಾ, ಡಾ. ವೆಂಕಟರಮಣ ಡಾ. ಗಣೇಶ ಡೊಂಗರೆ, ಡಾ. ನಾಜೀರ್, ಉಮಾಕಾಂತ, ಶ್ರೀಕಾಂತ ಪಾಟೀಲ, ಸಂಗಮೇಶ, ಆಕಾಂಕ್ಷಾ, ಶಿವಾನಿ ಇನ್ನೀತರರು ಉಪಸ್ಥಿತರಿದ್ದರು ಹಾಗೂ ಸುಮಾರು ಪಾಲಕರು ಉಟಗೆ ಆಸ್ಪತ್ರೆ ಒಳ್ಳೆಯ ಕೆಲಸ ನಿರ್ವಹಿಸುತ್ತಿದೆ ಎಂದು ಶುಭ ಕೋರಿದರು.

ಕಾರ್ಯಕ್ರಮದ ಸ್ವಾಗತವನ್ನು ರತ್ನಾದಿ ಭಂಡಾರಿ ಮಾಡಿದರು, ಕಾರ್ಯಕ್ರಮದ ನಿರೂಪಣೆ ರೇಣುಕಾ ತಾಂದಳೆ ರವರು ನೆರವೇರಿಸಿಕೊಟ್ಟರು.

# ಸುನೀತಾ ವಿ. ಮೋಹಿತೆಗೆ ಪಿ.ಹೆಚ್.ಡಿ.



ಮಲ್ಲಮ್ಮ ನುಡಿ ವಾರ್ತೆ
ಸುನೀತಾ ತಂದೆ ಪ್ರಹ್ಲಾದ್ ರೇಷ್ಮೆ ರವರಿಗೆ, ರಾಜಸ್ಥಾನ ರಾಜ್ಯದ ಅಲ್ವರ ಜಿಲ್ಲೆಯ ಸನ್ ರೈಸ ವಿಶ್ವವಿದ್ಯಾಲಯ ವು 2025ರಲ್ಲಿ ಮಂಡಿಸ ಲಾದ "ಎ ಸ್ಟಡಿ ಮ್ಯಾಗ್ನ ಟೈಸೇಷನ್ ಆ್ಯಂಟಿ ಫೆರೋ ಮ್ಯಾಗನಾಟಿಕ್ ನ್ಯಾನೋ ಪಾರ್ಟಿಕಲ್ ಸಿಸ್ಟಮ್ಸ್ ಆಸ್ ಎ ಫಂಕ್ಷ ನ್ ಆಫ್ ಪಾರ್ಟಿ ಕಲ್ ಮ್ಯಾಗ್ನೆಟಿಕ್ ಮೂವ್ಮೆಂಟ್ ಡಿಸ್ಟ್ರಿಬೂಷನ್" ವಿಷಯದಲ್ಲಿ, 'ಭೌತಶಾಸ್ತ್ರದಲ್ಲಿ 'ಡಾಕ್ಟರ ಆಫ್ ಫಿಲಾಸಫಿ' ನೀಡಲಾಗಿದೆ. ಪ್ರೊ. ಸತ್ಯೇಂದ್ರ ಸಿಂಗ್ ರವರ ಮಾರ್ಗದರ್ಶನದಲ್ಲಿ ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಸುನೀತಾ ರವರಿಗೆ ಪಿಎಚ್ ಡಿ ಪ್ರಶಸ್ತಿ ಪ್ರದಾನ ಮಾಡಲಾಗಿದೆ. ಸುನೀತಾ ಮೋಹಿತೆ ರವರು ಬೀದರಿನ ಸರಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯ ದಲ್ಲಿ ಕಳೆದ 11 ವರ್ಷಗಳಿಂದ ಅತಿಥಿ ಉಪನ್ಯಾಸಕಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ..

ಅವರ ಈ ಸಾಧನೆಗೆ ವಿನಾಯಕ ಮೋಹಿತೆ, ಡಾಕ್ಟರ್ ಪ್ರಸನ್ನ ರೇಷ್ಮೆ, ಶಿಲ್ಪ ರೇಷ್ಮೆ, ಪ್ರಶಾಂತ, ಅನಿತಾ ರಾಜಶೇಖರ, ಪ್ರಕಾಶ, ಬ್ರೀಮ್ಸ್ ಆಸ್ಪತ್ರೆಯ ಎ ಆರ್ ಟಿ ಕೇಂದ್ರದ ಆಪ್ತ ಸಮಾಲೋಚ ಕರಾದ ಸಂತೋಷ ಶಿಂದೆ, ಪಶು ವೈದ್ಯಕೀಯ ವಿಶ್ವವಿದ್ಯಾಲಯದ ನಿವೃತ್ತ ಅಧಿಕಾರಿ ವೀರಭದ್ರಪ್ಪ ಉಪ್ಪಿನ, ಪ್ರಗತಿ ಆರೋಗ್ಯ ಮತ್ತು ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಅರವಿಂದ ಕುಲಕರ್ಣಿ, ಎಸ್ಸಿ ಎಸ್ಟಿ ಜಿಲ್ಲಾ ವ್ಯವಸ್ಥಾಪಕರಾದ ಪ್ರೇಮ ಸಾಗರ್ ದಾಂಡೇಕರ ಹಾಗೂ ಸಿಬ್ಬಂದಿ ವರ್ಗದವರು ಹರ್ಷ ವ್ಯಕ್ತಪಡಿಸಿದ್ದಾರೆ.

# ಅಲಿಯಂಬರ್ ಮಠಕ್ಕೆ ಹಾವಗಿಲಿಂಗೇಶ್ವರ ಶಿವಾಚಾರ್ಯರು ಉತ್ತರಾಧಿಕಾರಿ



ಮಲ್ಲಮ್ಮ ನುಡಿ ವಾರ್ತೆ
ಬೀದರ. ಏ. 02 : ಭಾಲ್ಕಿ ತಾಲ್ಲೂಕಿನ ಹಲಬರ್ಗಾದ ರಾಚೋಟೇಶ್ವರ ಸಂಸ್ಥಾನ ಮಠದ ಪೀಠಾಧಿಪತಿ ಹಾವಗಿಲಿಂಗೇಶ್ವರ ಶಿವಾಚಾರ್ಯರನ್ನು ತಾಲ್ಲೂಕಿನ ಅಲಿಯಂಬರ್ ಗ್ರಾಮದ ಗಂಗಾಧರ ಮಠದ ನೂತನ ಉತ್ತರಾಧಿಕಾರಿಯನ್ನಾಗಿ ನೇಮಕ ಮಾಡಲಾಗಿದೆ.

ಮಠದಲ್ಲಿ ಮಂಗಳವಾರ ಆಯೋಜಿಸಿದ್ದ ವಿಶ್ವನಾಥ ಶಿವಾಚಾರ್ಯರ ಪುಣ್ಯ ಸ್ಮರಣೋತ್ಸವದಲ್ಲಿ ಮಠದ ಪೀಠಾಧಿಪತಿ ಡಾ. ನಾಗಭೂಷಣ ಶಿವಾಚಾರ್ಯರು ನೂತನ ಉತ್ತರಾಧಿಕಾರಿ ಹೆಸರು ಪ್ರಕಟಿಸಿದರು.

ಗಂಗಾಧರ ಮಠ ಹಳೆಯ ಮಠಗಳಲ್ಲಿ ಒಂದಾಗಿದೆ. ಗವೇಶ್ವರ ಶಿವಾಚಾರ್ಯರು ಸ್ಥಾಪಿಸಿದ ಈ ಮಠಕ್ಕೆ ಈವರೆಗೆ 12 ಪೀಠಾಧಿಪತಿಗಳು ಆಗಿ ಹೋಗಿದ್ದಾರೆ.

ಈಗಿನ ಪೀಠಾಧಿಪತಿ ಡಾ. ನಾಗಭೂಷಣ ಶಿವಾಚಾರ್ಯರು 13ನೇ ಪೀಠಾಧಿಪತಿಯಾಗಿದ್ದಾರೆ. ಹಾವಗಿಲಿಂಗೇಶ್ವರ ಶಿವಾಚಾರ್ಯರು 14ನೇ ಪೀಠಾಧಿಪತಿಯಾಗಲಿದ್ದಾರೆ. ಮಠ ನೆರೆಯ ಮಹಾರಾಷ್ಟ್ರದ ತುಳಜಾಪುರ ತಾಲ್ಲೂಕಿನ ಹಂಗರಗಾದಲ್ಲಿ ಶಾಖಾ ಮಠವನ್ನು ಹೊಂದಿದೆ.

ಹಾವಗಿಲಿಂಗೇಶ್ವರ ಶಿವಾಚಾರ್ಯರು ಹಲಬರ್ಗಾ ಮಠ, ಹೈದರಾಬಾದನ ನಾಗಲಿಂಗೇಶ್ವರ ಮಠ, ಶಿವಣಿಯ ಹಾವಗಿ ಸ್ವಾಮಿ ಮಠ, ನಿಜಾಂಪುರದ ಕುಮಾರ ಆಶ್ರಮ ಮಠ, ಔರಾದ್ ತಾಲ್ಲೂಕಿನ ಬೋರಾಳ ಮಠಗಳ ಪೀಠಾಧಿಪತಿಯಾಗಿದ್ದಾರೆ.

ಹಾವಗಿಲಿಂಗೇಶ್ವರ ಶಿವಾಚಾರ್ಯರು ಕ್ರಿಯಾಶೀಲ ಸ್ವಾಮೀಜಿಯಾಗಿದ್ದಾರೆ. ಮಠವನ್ನು ಸಮರ್ಥವಾಗಿ ಮುನ್ನಡೆಸಲಿದ್ದಾರೆ. ಅಭಿವೃದ್ಧಿಯತ್ತ ಒಯ್ಯಲಿದ್ದಾರೆ ಎಂದು ಕಾರ್ಯಕ್ರಮದಲ್ಲಿ ಹುಲಸೂರಿನ ಶಿವಾನಂದ ಸ್ವಾಮೀಜಿ ವಿಶ್ವಾಸ ವ್ಯಕ್ತಪಡಿಸಿದರು.

ಹೆಡಗಾಪುರದ ಶಿವಲಿಂಗ ಶಿವಾಚಾರ್ಯ, ಕೇದಾರಲಿಂಗ ಶಿವಾಚಾರ್ಯ, ಕೌಠಾ(ಬಿ)ದ ಅಮೃತ ಮುತ್ಯಾ ಮತ್ತಿತರರು ಇದ್ದರು.

# ಸೇವೆಯಲ್ಲಿ ಸಂತೃಪ್ತಿ ಕಾಣಬೇಕು :ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಜಿ.ಹಳ್ಳದ್



ಮಲ್ಲಮ್ಮ ನುಡಿ ವಾರ್ತೆ
ಭಾಲ್ಕಿ:ಏ.2: ನಾವು ಮಾಡುವ ಸೇವೆಯಲ್ಲಿ ಸಂತೃಪ್ತಿ ಕಾಣಬೇಕು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಜಿ.ಹಳ್ಳದ್ ಹೇಳಿದರು.

ಪಟ್ಟಣದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯದಲ್ಲಿ ಸತತ 25 ವರ್ಷಗಳ ಕಾಲ ಸೇವೆ ಸಲ್ಲಿಸಿ ಪದೋನ್ನತಿ ಹೊಂದಿ ವರ್ಗಾವಣೆಯಾಗಿ ಹೋಗುತ್ತಿರುವ ಸಿಬ್ಬಂದಿ ಶಾಂತಕುಮಾರ ರವರ ಬೀಳ್ಕೊಡುಗೆ ಸಮಾರಂಭವನ್ನುದ್ದೇಶಿಸಿ ಅವರು ಮಾತನಾಡಿದರು. ಶಾಂತಕುಮಾರ ರವರು ಹೆಸರಿಗೆ ತಕ್ಕಂತೆ ಶಾಂತವಾದ ವ್ಯಕ್ತಿಯಾಗಿದ್ದಾರೆ. ಇವರು ಸತತವಾಗಿ ಸುಮಾರು 25 ವರ್ಷಗಳ ಕಾಲ ಭಾಲ್ಕಿಯ ಶಿಕ್ಷಣಾಧಿಕಾರಿಗಳ ಕಾರ್ಯಾಲಯದಲ್ಲಿ ಸೇವೆ ಸಲ್ಲಿಸಿದ್ದರಿಂದ ಇವರಿಗೆ ಅಪಾರ ಗೆಳೆಯರ ಬಳಗ ಹುಟ್ಟಿಕೊಂಡಿದೆ. ಇಂದು ಏರ್ಪಡಿಸಲಾದ ಬೀಳ್ಕೊಡುಗೆ ಸಮಾರಂಭದಲ್ಲಿ ಸಾವಿರಾರು ಶಿಕ್ಷಕರು ಭಾಗವಹಿಸಿರುವುದೇ ಸಾಕ್ಷಿಯಾಗಿದೆ. ಹೀಗಾಗಿ ನಾವು ಮಾಡುವ ಕೆಲಸದಲ್ಲಿ ಶಾಂತಕುಮಾರ ರವರಂತೆ ಸಂತೃಪ್ತಿ ಜೀವನ ನಡೆಸಬೇಕು ಎಂದು ಹೇಳಿದರು. ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಅಧ್ಯಕ್ಷ ದತ್ತಾತ್ರಿ ಕಾಟಕರ, ಸರ್ಕಾರಿ ನೌಕರರ ಸಂಘದ ಕಾರ್ಯದರ್ಶಿ ರಾಜೆಪ್ಪ ಪಾಟೀಲ, ಪ್ರಾಥಮಿಕ ಶಿಕ್ಷಕರ ಸಂಘದ ಅಧ್ಯಕ್ಷ ಸೂರ್ಯಕಾಂತ ಸುಂಟೆ, ಅನುದಾನಿತ ಪ್ರಾಥಮಿಕ ಶಿಕ್ಷಕರ ಸಂಘದ ಕಾರ್ಯದರ್ಶಿ ಬಸವರಾಜ ತೇಗಂಪೂರೆ ಶಾಂತಕುಮಾರ ರವರ ಬಗ್ಗೆ ಮಾತನಾಡಿದರು. ಕಾರ್ಯಕ್ರಮದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯದ ಪತ್ರಾಂಕಿತ ವ್ಯವಸ್ಥಾಪಕ ಶಿವಕುಮಾರ ಫುಲಾರಿ, ಅನುದಾನಿತ ಪ್ರೌಢಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಕಿರಣಕುಮಾರ ಭಾಟಸಾಂಗವಿ, ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಗೋವಿಂದರಾವ ಬಿರಾದಾರ, ಇಸಿಓ ಸಹದೇವ.ಜಿ, ವೈಜಿನಾಥ ಮಲ್ಲಿಗೆ, ಸಂದೀಪ ಉಮಾಜಿ, ಬಾಲಾಜಿ ಬಿರಾದಾರ, ಸಂತೋಷಕುಮಾರ ವಾಡೆ, ಚನ್ನಪ್ಪ, ಮಲ್ಲಿಕಾರ್ಜುನ ಪಾಟೀಲ, ದಿನೇಶ ಥಮಕೆ, ಶಿವಕುಮಾರ ಘಂಟೆ ಉಪಸ್ಥಿತರಿದ್ದರು. ಕಿರಣಕುಮಾರ ಭಾಟಸಾಂಗವಿ ಸ್ವಾಗತಿಸಿದರು. ಸಂತೋಷಕುಮಾರ ವಾಡೆ ನಿರೂಪಿಸಿದರು. ಸಹದೇವ ಗೌಡಗಾವೆ ವಂದಿಸಿದರು.

# ಡಾ ಸಾರಿಕಾರಿಗೆ ಬೆಳ್ಳಿ ಪದಕ



ಬೀದರ. ಏ. 02 : ಡಾ ಸಾರಿಕಾ ಗಂಡ ಸುನಿಲರಾಜ ರಾಗಾ ಅಸೋಸಿಯೇಟ್ ಪ್ರೊಫೆಸರ್ ವಿ.ಟಿಯು ಸೀಜಿಪಿಸ್ ಮುದೆನಹಳ್ಳಿ ಚಿಕ್ಕಬಳ್ಳಾಪುರ ರವರು ಬೀದರ ನಿವಾಸಿಯಾಗಿದ್ದು ಸ್ಥಳೀಯ ಮಂಗಲಪೇಟನ ನಿವೃತ್ತ ಕರ್ನಾಟಕ ಪ್ರೌಢ ಶಾಲೆಯ ಮುಖ್ಯಗುರುಗಳಾದ ಶ್ರೀ ಜೈ ರಾಜ ರಾಗಾ ರವರ ಸೂಸೆ ಹಾಗೂ ಸ್ಥಳೀಯ ಕರ್ನಾಟಕ ಫಾರ್ಮಸಿಯ ಮಹಾವಿದ್ಯಾಲಯದ ಪ್ರೊ. ಸುನಿಲ ರಾಜ ರಾಗಾ ರವರ ಧರ್ಮಪತ್ನಿಯವರು ದಿನಾಂಕ 29–03–2025 ರಂದು ಇತ್ತೀಚಿಗೆ ಐಎಸ್‌ಎಸ್‌ಎಫ್‌ನ ಹೆಣ್ಣು ಮಕ್ಕಳ (ಅಂತರಾಷ್ಟ್ರೀಯ ಸ್ಪೋರ್ಟ್ಸ್ ಶೂಟಿಂಗ್ ಫೆಡರೇಷನ) ವಿಭಾಗದ ಜರುಗಿದ ಸ್ಪರ್ಧೆಯಲ್ಲಿ ಇಂದೂರಿನ ಎಂಹೆಚ್‌ಓಡಬ್ಲ್ಯೂ ಹತ್ತು ಮೀಟರ್ ಫಿಸ್ತೋಲ್ ಐಎಸ್‌ಎಸ್‌ಎಫ್ ಸೈನ್ಯ ದಳದ ಮಾರ್ಕಮೇನಶಿಪ್ ಯೂನಿಟ್‌ನಾ ಚಾಂಪಿಯನ್ ಶೀಪ್ ಸ್ಪರ್ಧೆಯಲ್ಲಿ ಬೆಳ್ಳಿ ಪದಕ ಪಡೆದು ವಿಜಯ ಶಾಲಿ ಯಾಗಿರುವದರಿಂದ ಬೀದರ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಬೀದರ ಅಧ್ಯಕ್ಷರು, ಉಪಾಧ್ಯಕ್ಷರುಗಳು, ಪದಾಧಿಕಾರಿಗಳು ಹೆಮ್ಮೆ ಪಡುವುದಲ್ಲದೆ, ಹರ್ಷಗೊಂಡು ಹಾರ್ದಿಕ ಅಭಿನಂದನೆಗಳು ಸಲ್ಲಿಸುತಾ, ಮುಂದೆ ಇಂಥಹ ಸ್ಪರ್ಧೆಗಳಲ್ಲಿ ರಾಷ್ಟ ಹಾಗೂ ಜಾಗತಿಕ ಮಟ್ಟದಲ್ಲಿ ಬೆಳೆಯಲಿ ಹಾಗೂ ಬೀದರಗೆ ರಾಜ್ಯಕ್ಕೆ ದೇಶಕ್ಕೆ ಕೀರ್ತಿ ತರಲಿ ಎಂದು ಶುಭ ಹಾರೈಸುತ್ತೇವೆ.

# ಇಂದಿನಿಂದ ಸಿದ್ದಲಿಂಗೇಶ್ವರ ದೇವರ 78ನೇ ಜಾತ್ರಾ ಮಹೋತ್ಸವ

ಮಲ್ಲಮ್ಮ ನುಡಿ ವಾರ್ತೆ
ಭಾಲ್ಕಿ:ಏ.2: ತಾಲ್ಲೂಕಿನ ಸಿದ್ದೇಶ್ವರಗ್ರಾಮದ ಸಿದ್ದಲಿಂಗೇಶ್ವರ ದೇವರ 78ನೇ ಜಾತ್ರಾ ಮಹೋತ್ಸವ ಏ.3 ರಿಂದ ಪ್ರಾರಂಭವಾಗಲಿದೆ. ಏ.3 ರಂದು ಗುರುವಾರ ಬೆಳಿಗ್ಗೆ 8 ರಿಂದ 9 ರ ವರೆಗೆ ಪಥ ಸಂಚಲನ ಹಾಗೂ ಷಟಸ್ಥಲ ಧ್ವಜಾರೋಹಣ ನಡೆಯಲಿದೆ. ವೇದಮೂರ್ತಿ ಕರಬಸಯ್ಯ ಸ್ವಾಮಿ ಗೋರಟಾ ಅವರ ಸಾನ್ನಿಧ್ಯದಲ್ಲಿ ಬಸವಣ್ಣನವರ ಮೂರ್ತಿಯ ಮೆರವಣಿಗೆ ನಡೆಯಲಿದೆ.

ಸಂಜೆ 5 ಗಂಟೆಗೆ ಮಲ್ಲಯ್ಯಗಿರಿ, ದೇಗುಲಮಡಿ ಆಶ್ರಮದ ಪೀಠಾಧಿಪತಿ ಬಸವಲಿಂಗ ಅವಧೂತರ ಪ್ರವಚನ ಕಾರ್ಯಕ್ರಮ ನಡೆಯಲಿದೆ. ಏ.4 ರಂದು ಶುಕ್ರವಾರ ರಾತ್ರಿ 9 ಗಂಟೆಗೆ ಸಿದ್ದಲಿಂಗೇಶ್ವರ ದೇವರ ಪಲ್ಲಕ್ಕಿ ಉತ್ಸವ ವೈಭವದ ಮೆರವಣಿಗೆಯೊಂದಿಗೆ ನಡೆಯಲಿದೆ.

ಮೆರವಣಿಗೆಯಲ್ಲಿ ಬಸವ ಭಾರತಿ ವಿದ್ಯಾಪೀಠದ ಮಕ್ಕಳಿಂದ ಕೋಲಾಟ, ಡೊಳ್ಳು ಕುಣಿತ, ವೀರಗಾಸೆ ನೃತ್ಯ ಮತ್ತು ನಂದಿಕೋಲು ಕುಣಿತ ಪ್ರದರ್ಶನವಾಗಲಿದೆ. ರಾತ್ರಿ 11.30 ಕ್ಕೆ ನನ್ನ ಗಂಡ ನೀ ಹೌದು ಆದರೆ ನಿನ್ನ ಹೆಂಡತಿ ನಾನಲ್ಲ ಎಂಬ ಸಾಮಾಜಿಕ ನಾಟಕ ಪ್ರದರ್ಶನಗೊಳ್ಳಲಿದೆ. ಏ.5 ರಂದು ಶನಿವಾರ ಬೆಳಿಗ್ಗೆ 7 ಗಂಟೆಗೆ ಕುಸ್ತಿ ಪಟುಗಳಿಂದ ಜಂಗಿ ಕುಸ್ತಿಗಳು ನಡೆಯುತ್ತವೆ. ಸಂಜೆ 6.30ಕ್ಕೆ ಸಾಕ್ಷಿರೇವಣಸಿದ್ದಯ್ಯಾ ಸ್ವಾಮಿ ಹಿರೇಮಠ ಹುಮನಾಬಾದ್ ಕಲಾ ತಂಡದವರಿಂದ ಸಂಗೀತ ದರ್ಬಾರ ಹಾಸ್ಯ ಕಾರ್ಯಕ್ರಮ ನಡೆಯುವುದು. ರಾತ್ರಿ 10.30ಕ್ಕೆ ಮಾಂಗಲ್ಯ ಬೇಕು ಎಂಬ ಸಾಮಾಜಿಕ ನಾಟಕ ಪ್ರದರ್ಶನಗೊಳ್ಳಲಿದೆ ಎಂದು ಜಾತ್ರೆ ಸಮಿತಿ ಪ್ರಕಟಣೆ ತಿಳಿಸಿದೆ.

# ಏಪ್ರಿಲ್ 05 ರಂದು ಬಾಬೂಜಿಯವರ 118ನೇ ಜಯಂತಿಯ ನಿಮಿತ್ಯ ಲೇಖನ

## ಹಸಿರು ಕ್ರಾಂತಿಯ ಹರಿಕಾರ ಡಾ. ಬಾಬು ಜಗಜೀವನರಾಮ್ – ಡಾ. ಗಂಗಪ್ಪ ಎಸ್. ಹೊಸಮನಿ

ಹಸಿರು ಕ್ರಾಂತಿಯ ಹರಿಕಾರ ಭಾರತದ ಗೌರವಾನ್ವಿತ ಮಾಜಿ ಉಪಪ್ರಧಾನಮಂತ್ರಿಗಳು ಶೋಷಿತ ಸಮುದಾಯಗಳ ಆಶಾಕಿರಣ ಕಾರ್ಮಿಕರ ಜನನಾಯಕ ಮೂರು ದಶಕಗಳ ಕಾಲ (1946–1979) ಕೇಂದ್ರಸರಕಾರದಲ್ಲಿಮಂತ್ರಿಯಾಗಿದ್ದು ಭಾರತದ ಮತ್ತು ಜಗತ್ತಿನ ಏಕೈಕ ವ್ಯಕ್ತಿ ಎಂದರೆ ಬಾಬು ಜಗಜೀವನರಾಮ್‌ರವರಾಗಿದ್ದಾರೆ. ಇವರು 50 ವರ್ಷಗಳ (1936–1986) ಸುದೀರ್ಘಗಳ ಕಾಲ ಚುನಾವಣೆಗಳಲ್ಲಿ ಸತತವಾಗಿ ಗೆದ್ದ ಭಾರತದ ಮತ್ತು ಜಗತ್ತಿನ ಏಕೈಕ ವ್ಯಕ್ತಿಯು ಸಹ(ಇವರ ಗೆಲವು ವಿಶ್ವದಾಖಲೆಯಾಗಿದೆ) ಆಗಿದ್ದಾರೆ. ಭಾರತದ ಮಹಾನ್ ಚೇತನ, ಜನನಾಯಕ ಮುತ್ಸದ್ಧಿ ಬಾಬುಜಿಯವರ ವ್ಯಕ್ತಿತ್ವ ಮತ್ತು ಸಾಧನೆಯನ್ನು ಇತಿಹಾಸಕಾರರು, ಸಂಶೋಧಕರು ದಲಿತನಾಯಕ ಎಂಬ ಕಾರಣಕ್ಕಾಗಿ ನ್ಯಾಯುತವಾಗಿ ದಾಖಲಿಸದೆ ಇರುವುದು ದುರಾದೃಷ್ಟಕರ ಸಂಗತಿ.

ಭಾರತದ ಒಬ್ಬ ಮೇರು ರಾಜಕೀಯ ಮುತ್ಸದ್ಧಿ ಶೋಷಿತ ಸಮುದಾಯದ ಧೀಮಂತನಾಯಕ ರಾಷ್ಟ್ರ ನಿಷ್ಠ ಧರ್ಮನಿರೀಪಕ್ಷತ ಭಾವನೆವುಳ್ಳ ಜನನಾಯಕ, ಕಾರ್ಮಿಕರ ರಕ್ಷಕ ಶೋಷಿತ ವರ್ಗಗಳ ಶ್ರೇಯೋಭಿವೃದ್ಧಿಗಾಗಿ ಹಗಲಿರುಳು ಶ್ರಮಿಸಿದ ಮಹಾನ ನಾಯಕ ಬಾಬೂಜಿಯವರ ಕೊಡುಗೆಗಳು ಮತ್ತು ವ್ಯಕ್ತಿತ್ವವನ್ನು ತಿಳಿದುಕೊಳ್ಳುವುದು ಮತ್ತು ಸ್ಮರಿಸುವುದು ಪ್ರತಿಯೊಬ್ಬ ಭಾರತೀಯರ ಕರ್ತವ್ಯವಾಗಿದೆ.

ಡಾ. ಬಾಬು ಜಗಜೀವನರಾಮ್‌ರವರು ಬಿಹಾರ ರಾಜ್ಯದ ಶಹಬಾದ (ಇಂದಿನ ಬೋಜ್ಪುರ್) ಜಿಲ್ಲೆಯ ಚಾಂದ್ವಾ ಗ್ರಾಮದಲ್ಲಿ ಶೋಭಿರಾಮ್ ಮತ್ತು ಶ್ರೀಮತಿ ವಾಸಂತಿದೇವಿ ದಂಪತಿಗಳಿಗೆ ಏಳನೇಕೊನೆಯ ಮಗನಾಗಿ ಏಪ್ರಿಲ್ 05, 1908ರಂದು ಜನಿಸಿದರು. ಬಾಬು ಜಗಜೀವನರಾಮ್‌ರವರ ತಂದೆಯವರಾದ ಶೋಭಿರಾಮ್‌ರವರು ಬ್ರಿಟಿಷ ಸರ್ಕಾರದಲ್ಲಿ ಪಂಜಾಬ ಪ್ರಾಂತದಲ್ಲಿ ಸೇನೆಯಲ್ಲಿ ಕಾರ್ಯನಿರ್ವಹಿಸಿ ನಿವೃತ್ತಿಯ ನಂತರ ಉತ್ತಮ ಜೀವನ ನಡೆಸುವುದಕ್ಕಾಗಿ ಚಿಕ್ಕದೊಂದು ಮನೆ ಮತ್ತು ಸ್ವಲ್ಪ ವ್ಯವಸಾಯಕ್ಕೆ ಭೂಮಿಯನ್ನು ಖರೀದಿ ಮಾಡಿ ಜೀವನ ಸಾಗಿಸುತ್ತಿದ್ದರು. ಹಿರಿಯ ಅಣ್ಣನಾದ ಶಾಂತಲಾಲರವರು ಕಲ್ಕತ್ತಾ ನಗರದ ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ ಕಾಂಪೌಂಡರಾಗಿ ಕೆಲಸ ಮಾಡುತ್ತಿದ್ದರು. ಇವರಿಗೆ ಮಕ್ಕಳಿಲ್ಲದ ಕಾರಣ ಬಾಬು ಜಗಜೀವನರಾಮ್‌ರವರನ್ನು ಸ್ವಂತ ಮಗನಂತೆ ನೋಡಿಕೊಳ್ಳುತ್ತಿದ್ದರು.

ಡಾ.ಬಾಬುಜಗಜೀವನರಾಮ್‌ರವರು ಜನವರಿ 1914ರಂದು ತಮ್ಮ 6ನೇ ವರ್ಷದಲ್ಲಿ ಚಾಂದ್ವಾ ಗ್ರಾಮದಲ್ಲಿ ಪ್ರಾಥಮಿಕ ಶಿಕ್ಷಣ–ಕ್ಕಾಗಿ ಪ್ರವೇಶವನ್ನು ಪಡೆದರು. ಈ ಶಾಲೆಯಲ್ಲಿ ಮಾನವೀಯ ಗುಣವುಳ್ಳ ಬ್ರಾಹ್ಮಣ ಶಿಕ್ಷಕರಾಗಿದ್ದ "ಕಪಿಲಮುನಿ ತಿವಾರಿ" ಇವರ ನೆಚ್ಚಿನ ಶಿಕ್ಷಕರಾಗಿದ್ದರು. ಶಾಲೆಗೆ ಸೇರಿದ ಐದು ತಿಂಗಳಲ್ಲಿ ಬಾಬುಜಿಯವರು ತಂದೆಯನ್ನು ಕಳೆದುಕೊಂಡರು. ಜಗಜೀವನರಾವ್‌ರವರು 1916ರಲ್ಲಿ 8ನೇ ವರ್ಷದಲ್ಲಿ ಬಾಲ್ಯವಿವಾಹವಾದರು. ಓದಿನಲ್ಲಿ ಪ್ರತಿಭಾವಂತವಿದ್ಯಾರ್ಥಿಯಾಗಿದ್ದರಿಂದ ಅಭ್ಯಾಸವನ್ನು ಮುಂದುವರಿಸುತ್ತಾರೆ. ಜನವರಿ 1920ರಲ್ಲಿ ಪ್ರಾಥಮಿಕ ಶಿಕ್ಷಣದ ನಂತರ ಮಾಧ್ಯಮಿಕ ಶಾಲೆಗೆ ನಗರದ "ಆರ್ರಾ" ಎಂಬ ಶಾಲೆ ಪ್ರವೇಶವನ್ನು ಪಡೆದರು. ಇವರಿಗೆ ಅಚ್ಚುಮೆಚ್ಚಿನ ವಿಷಯವೆಂದರೆ ಗಣಿತವಾಗಿತ್ತು.

ಮಾಧ್ಯಮಿಕ ಶಿಕ್ಷಣದ ನಂತರ ಜನವರಿ 1922ರಂದು ನಗರದ "ಆರ್ರಾ" ಪಟ್ಟಣದಲ್ಲಿ ಪ್ರೌಢ ಶಿಕ್ಷಣಕ್ಕೆ ಪ್ರವೇಶವನ್ನು ಪಡೆಯುತ್ತಾರೆ. ಈ ಶಾಲೆಯಲ್ಲಿ ಅಸ್ಪೃಶ್ಯತೆ (ಜಾತೀಯತೆ) ಸಮಸ್ಯೆಯನ್ನು ಎದುರಿಸಿದರು. ಬಾಬುಜಗಜೀವನರಾಮ್‌ರವರು ಪ್ರೌಢಶಾಲೆಯಲ್ಲೂ ಪ್ರಥಮ ಸ್ಥಾನದಲ್ಲಿ ಉತ್ತೀರ್ಣರಾಗಿದ್ದು, ಗಣಿತ ವಿಷಯದಲ್ಲಿ ಇಡೀ ಜಿಲ್ಲೆಗೆ ಪ್ರಥಮ ಸ್ಥಾನ ಅಂದರೆ ನೂರಕ್ಕೆ ನೂರು ಅಂಕಗಳನ್ನು ಪಡೆದು–ಕೊಂಡು ಉತ್ತೀರ್ಣರಾಗಿದ್ದರಿಂದ ಮೇಲ್ಜಾತಿಯವರಿಗೆ ತಾತ್ಸರ ಭಾವನೆಗೆ ಒಳಗಾಗಬೇಕಾಯಿತು.

ಬಾಬುಜಗಜೀವನರಾಮ್‌ರವರು ಮೆಟ್ರಿಕ್ಯುಲೇಷನ್ ನಂತರ ಮದನ ಮೋಹನ ಮಾಳವೀಯರ ಆಹ್ವಾನದ ಮೇರೆಗೆ ಮೇ–1927ರಲ್ಲಿ ವಾರಣಾಸಿಯ ಬನಾರಸ್ ಹಿಂದೂ ವಿಶ್ವವಿದ್ಯಾನಿಲಯದಲ್ಲಿ ಪ್ರವೇಶ ಪಡೆಯುತ್ತಾರೆ. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಕ್ಕಾಗಿ ಅಂದಿನ ಪ್ರಖ್ಯಾತ ಉದ್ಯಮಿ 'ಬಿರ್ಲಾ'ರವರು ತಮ್ಮ ಹೆಸರಿನಲ್ಲಿ ನೀಡುವ ಸ್ಕಾಲರ್‌ಶಿಪ್ (ವಿದ್ಯಾರ್ಥಿವೇತನ) ಪಡೆದು ಅಧ್ಯಯನ ಮುಂದುವರೆಸಿದರು. ಆದರೆ ಈ ವಿಶ್ವವಿದ್ಯಾನಿಲಯ ಮತ್ತು ವಸತಿ ನಿಲಯ (ಹಾಸ್ಟಲ್) ದಲ್ಲಿ ಜಾತೀಯ ತಾರತಮ್ಯಗಳನ್ನು ಅನುಭವಿಸಿದ ಅವರು ಅದನ್ನು ಸಹಿಸಿಕೊಳ್ಳಕ್ಕಾಗದೆ ವಸತಿ ನಿಲಯವನ್ನು ಬಿಟ್ಟು ಕಾರ್ಮಿಕರ ಕಾಲೋನಿಯಲ್ಲಿ ಒಂದು ಚಿಕ್ಕ ಕೋಣೆಯನ್ನು ಬಾಡಿಗೆ ತೆ–ಗೆದುಕೊಂಡು ವಿದ್ಯಾಭ್ಯಾಸವನ್ನು ಮುಂದುವರಿಸಿದರು.

ಬಾಬು ಜಗಜೀವನರಾಮ್‌ರವರು 1931ರಲ್ಲಿ ಕಲ್ಕತ್ತಾ ವಿಶ್ವವಿದ್ಯಾಲಯದಿಂದ ಬಿ.ಎಸ್ಸಿ. ಪದವಿಯನ್ನು ಪಡೆದು–ಕೊಂಡರು. ಈ ಸಂದರ್ಭದಲ್ಲಿ ಮೊದಲನೇ ಹೆಂಡತಿ ತೀರಿಕೊಂಡರು. ನಂತರ ಅವರು ಕಾನ್ಪೂರದ ಪ್ರಸಿದ್ಧ ಸಮಾಜ ಸೇವಕರಾಗಿದ್ದ ಡಾ. ಬೀರ್ಬಲ್‌ರವರ ಪುತ್ರಿ ಇಂದ್ರಾಣಿ ದೇವಿಯನ್ನು 02–06–1935ರಂದು ವಿವಾಹವಾದರು. ಡಾ. ಬಾಬು ಜಗಜೀವನರಾವ್‌ರವರಿಗೆ ಸುರೇಶಕುಮಾರ ಮತ್ತು ಮೀರಾಕುಮಾರಿ ಎಂಬ ಇಬ್ಬರು ಜನಿಸಿದರು. ಸುರೇಶಕುಮಾರ ಮೇ 1985ರಲ್ಲಿ ನಿಧನರಾದರು.



ಮೀರಕುಮಾರಿ 2009ರಲ್ಲಿ ಭಾರತದ ಪ್ರಥಮ ಮಹಿಳಾ ಸ್ಪೀಕರ್ ಆಗಿ ಸೇವೆ ಸಲ್ಲಿಸಿರುವುದು ಹೆಮ್ಮೆಯ ಸಂಗತಿ.

ಡಾ.ಬಾಬುಜಗಜೀವನರಾಮ್‌ರವರು ತಮ್ಮ 79ನೇ ವಯಸ್ಸಿನಲ್ಲಿ ಹೃದಯಘಾತದಿಂದ ದೆಹಲಿಯ ತಮ್ಮ ನಿವಾಸದಲ್ಲಿ 06–07–1986ರಂದು ನಿಧನರಾದರು. ದೆಹಲಿಯಲ್ಲಿರುವ ಇವರ ಸಮಾಧಿಯ ಸ್ಥಳವನ್ನು "ಸಮಾತಾ" ಸ್ಥಳವೆಂದು ಕರೆಯಲಾಗುತ್ತದೆ. ಹಾಗೂ ಭಾರತದಲ್ಲಿ ಅವರ ಜನ್ಮ ವಾರ್ಷಿಕೋತ್ಸವ ದಿನದಂದು 2008ರಿಂದ ರಾಷ್ಟ್ರದ್ಯಾಂತ "ಸಮತ ದಿವಸ" ಅಥವಾ ಸಮಾನತೆಯ ದಿನವೆಂದು ಆಚರಿಸಲಾಗುತ್ತದೆ.

ಭಾರತೀಯ ಸಮಾಜದಲ್ಲಿ ಶತ–ಶತಮಾನಗಳಿಂದ ತುಳಿತಕ್ಕೆ ಒಳಗಾದ ಸಮುದಾಯಗಳ ಶ್ರೇಯೋಭಿವೃದ್ಧಿಗಾಗಿ ಶ್ರಮಿಸಿದರು. ವಿದ್ಯಾರ್ಥಿ ದಿಸೆಯಿಂದಲೇ ಹೋರಾಟ, ಪ್ರತಿಭಟನೆ, ಅಸಂಘಟಿತರನ್ನು ಸಂಘಟಿಸುತ್ತಾ ಶಕ್ತಿ ಮತ್ತು ಕೇಂದ್ರಿಯ ಶಾಸನ ಸಭೆಗಳಲ್ಲಿ ಹಲವಾರು ಬೇಡಿಕೆಗಳನ್ನು ಈಡೆರಿಸಲು ಒತ್ತಾಯಿಸುತ್ತಿದ್ದರು. ಸಂವಿಧಾನ ರಚನಾ ಸಭೆಯ ಮೂಲಭೂತ ಹಕ್ಕುಗಳ ಉಪಸಮಿತಿಯ ಸದಸ್ಯರಾಗಿ ಮತ್ತು ಅಲ್ಪಸಂಖ್ಯಾತರ ಉಪಸಮಿತಿಯ ಸದಸ್ಯರಾಗಿ ಎಲ್ಲ ವರ್ಗಗಳ ಸಮುದಾಯಗಳಿಗೆ ಸಾಮಾಜಿಕ ನ್ಯಾಯ ದೊರಕಿಸಿಕೊಡುವುದರಲ್ಲಿ ಪ್ರಮಾಣಿಕವಾಗಿ ಪ್ರಯತ್ನಿಸಿದರು.

ಬಾಬುಜಗಜೀವನರಾಮ್‌ರವರು ಮಾರ್ಚ 1930ರಲ್ಲಿ ಕಲ್ಕತ್ತಾದಲ್ಲಿ ಚರ್ಮಕಾರರ ಹಾಗೂ ಸೆಣಬು ಕಾರ್ಖಾನೆಗಳ ಕಾರ್ಮಿಕರ ಸಮ್ಮೇಳನವನ್ನು ಆಯೋಜಿಸಿದರು. ಬಾಬು ಜಗಜೀವನರಾಮ್‌ರವರು ಪುನಾಒಪ್ಪಂದದ(1932) ಮಾಹಿತಿಯ ಬಗೆಗೆ ಗಾಂಧೀಜಿಯವರೊಡನೆ ಪತ್ರವ್ಯವಹಾರದ ಸಂಬಂಧವನ್ನು ಹೊಂದಿದ್ದರು. ಹಾಗೂ ಬಿಹಾರದ ರಾಜಧಾನಿ ಪಾಟ್ನಾದಲ್ಲಿ ನಡೆದ ಹರಿಜನ ಸೇವಕ ಸಂಘದ ಸಭೆಯಲ್ಲಿ ಭಾಷಣ ಮಾಡಿದರು. 1935ರಲ್ಲಿ ಭಾರತೀಯ ನಿಮ್ನ ವರ್ಗಗಳ ಸಂಘದ ಬಿಹಾರ ಘಟಕದ ಅಧ್ಯಕ್ಷರಾಗಿ ಆಯ್ಕೆಯಾದರು. ಮತ್ತು 1936ರಲ್ಲಿ ಬಾಗಲಪುರ ಮತ್ತು ಮಾಂಗಿಯದಲ್ಲಿ ಸಂತ ರವಿದಾಸ ಸಮ್ಮೇಳಗಳ ಸಂಘಟನೆಯಲ್ಲಿ ಭಾಗವಹಿಸಿದರು. ಡಾ. ಬಾಬು ಜಗಜೀವನರಾಮ್‌ರವರು ಅಕ್ಟೋಬರ 19, 1935ರಲ್ಲಿ ರಾಂಚಿಯಲ್ಲಿ ಹ್ಯಾಮಂಡ ಆಯೋಗದ ಮುಂದೆ ಹಾಜರಾಗಿ ಮೊದಲಬಾರಿಗೆ ದಲಿತರಿಗೆ 'ಮತದಾನದ ಹಕ್ಕು' ನೀಡಬೇಕೆಂದು ಒತ್ತಾಯಿಸಿದರು.

ಮಾರ್ಚ 27, 1937ರಲ್ಲಿ ಬಿಹಾರದ ಪಾಟ್ನಾದಲ್ಲಿ ಬ್ರಿಟಿಷರು ಕ್ರೈಸ್ತ ಮಿಷನರಿ ಏರ್ಪಡಿಸಿದ್ದ ಸಾಮೂಹಿಕಮತಾಂತರಸಭೆಯನ್ನು ವಿರೋಧಿಸಿದರು. ಡಾ. ಬಾಬು ಜಗಜೀವನರಾಮ್‌ರವರಿಗೆ 4–02–1967ರಲ್ಲಿ ಉಜ್ಜಯನಿಯ ವಿಕ್ರಮ ವಿಶ್ವವಿದ್ಯಾನಿಲಯದಿಂದ (ಇಂದಿನ ಮಧ್ಯಪ್ರದೇಶ) ಗೌರವ ಡಾಕ್ಟರೇಟ್ ಪದವಿಯನ್ನು ಹಾಗೂ 1973ರಲ್ಲಿ ಆಂದ್ರ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪದವಿಯನ್ನು ನೀಡಿ ಗೌರವಿಸಿತು.

ಡಾ. ಬಾಬು ಜಗಜೀವನರಾವ್‌ರವರು ವಿದ್ಯಾರ್ಥಿ ದಿಸೆಯಿಂದಲೇ ನಾಯಕತ್ವಗುಣವನ್ನು ಹೊಂದಿದ ಬಾಬೂಜಿಯವರು ಬ್ರಿಟಿಷರ ಆಳ್ವಿಕೆಯ ಕಾಲದಿಂದಲೂ 1936 ರಿಂದ 1986ರ ವರೆಗೆ ಸುಮಾರು ಐದು ದಶಕಗಳ ಕಾಲ ಚುನಾವಣೆಗಳಲ್ಲಿ ಗೆದ್ದು ವಿಶ್ವದಾಖಲೆ ನಿರ್ಮಿಸಿದ್ದ ಇವರು 1936 ರಿಂದ 1946ರ ವರೆಗೆ ಬಿಹಾರ ವಿಧಾನಸಭೆಗೆ ಶಾಸಕರಾಗಿ ಆಯ್ಕೆ, ಸ್ವಾತಂತ್ರ್ಯ ಪೂರ್ವದಲ್ಲಿ 1946 ರಿಂದ 1947ರ ಮಧ್ಯಂತರ ಸರ್ಕಾರದಲ್ಲಿ ಕಾರ್ಮಿಕ ಮಂತ್ರಿಯಾಗಿ, 1947 ರಿಂದ 1952ರ ವರೆಗೆ ಭಾರತ ಸರಕಾರದಲ್ಲಿ ಕಾರ್ಮಿಕ ಮಂತ್ರಿಯಾಗಿ, 1952ರಿಂದ 1956ರ ವರೆಗೆ ಸಾರಿಗೆ ವಿಮಾನಯಾನ ಸಚಿವರಾಗಿ, 1957ರಿಂದ 1962ರ ವರೆಗೆ ರೈಲ್ವೆ ಮಂತ್ರಿಯಾಗಿ, 1962–1963ರವರೆಗೆ ಸಾರಿಗೆ ಸಮಾಚಾರ ಮಂತ್ರಿಯಾಗಿ, 1966–1967ರಲ್ಲಿ ಕಾರ್ಮಿಕ ಮಂತ್ರಿಯಾಗಿ ಕಾರ್ಯನಿರ್ವಹಿಸಿದರು.

1967 ರಿಂದ 1970ರ ವರೆಗೆ ಕೃಷಿ ಆಹಾರ ಮಂತ್ರಿಯಾಗಿದ್ದ ಸಂದರ್ಭದಲ್ಲಿ ಭಾರತ ದೇಶದಲ್ಲಿ ಭೀಕರ ಬರಗಾಲವಿತ್ತು. ಹಾಗೂ ಆಹಾರ ಧಾನ್ಯಗಳ ಕೊರತೆಯಿಂದ ಜನರು ಹಸಿವಿನಿಂದ ಬಳಲುತ್ತಿದ್ದರು ಹಾಗೂ ಸಾವನ್ನಪ್ಪುತ್ತಿದ್ದರು. ಇಂತಹ ಸಂಕಷ್ಟ ಪರಿಸ್ಥಿತಿಯಲ್ಲಿ ಬಾಬು ಜೀವನರಾಮ್‌ರವರ ಪರಿಶ್ರಮ ಮತ್ತು ಬುದ್ಧಿವಂತಿಕೆಯಿಂದ ಭಾರತವು ಆಹಾರದಲ್ಲಿ ಸ್ವಾವಲಂಬನೆ ಸಾಧಿಸಿತು. ಹಾಗಾಗಿ ಡಾ. ಬಾಬು ಜಗಜೀವನರಾಮ್‌ರವರನ್ನು "ಹಸಿರು ಕ್ರಾಂತಿಯ ಹರಿಕಾರ" ಎಂದು ಕರೆಯಲಾಗುತ್ತದೆ.

1970–1974ರಲ್ಲಿ ಬಾಬು ಜಗಜೀವನರಾವ್‌ರವರು ರಕ್ಷಣಾ ಮಂತ್ರಿಯಾಗಿದ್ದಾಗ, ಭಾರತ ಮತ್ತು ಪಾಕಿಸ್ತಾನ ನಡುವೆ ಯುದ್ಧ ಸಂಭವಿಸಿತು. ಈ ಯುದ್ಧದಲ್ಲಿ ಭಾರತ ಜಯ ಗಳಿಸುವುದಕ್ಕೆ ಹಾಗೂ ಬಾಂಗ್ಲಾದೇಶ ವಿಮೋಚನೆಗೊಳ್ಳುವುದಕ್ಕೆ ಬಾಬುಜಿಯವರ ಕೊಡುಗೆ ಅಪಾರವಾಗಿತ್ತು. ಇದೇ ಅವಧಿಯಲ್ಲಿ ರಾಜತಾಂತ್ರಿಕ ನೀತಿಗಾಗಿ 07–07–1973ರಲ್ಲಿ ಬಾಬು ಜಗಜೀವನರಾಮ್‌ರವರು ರಷ್ಯಾದ ನಾಯಕರೊಡನೆ ಮಾತುಕತೆಗಾಗಿ ಮಾಸ್ಕೋ ನಗರಕ್ಕೆ ಪ್ರಯಾಣ ಬೆಳೆಸಿದರು. ರಷ್ಯಾದ ಪ್ರಧಾನಿ 'ಕೋಸಗಿನ್' ಜೊತೆ ಹಲವು ಮಹತ್ವದ ವಿಷಯವನ್ನು ಚರ್ಚಿಸಿ ಮಾಸ್ಕೋದಿಂದ ಲಂಡನ್‌ಗೆ ತೆರಳಿ ಲಂಡನ್ ನಗರದ ಬ್ರಿಟಿಷ್ ನಾಯಕರೊಡನೆ ಶಸ್ತ್ರಾಸ್ತ್ರಗಳ ಬಗ್ಗೆ ಚರ್ಚಿಸಿ ಸ್ವದೇಶಕ್ಕೆ ಮರಳಿದರು.

1975ರ ಅವಧಿಯನ್ನು ಭಾರತದ ದೇಶದ ರಾಜಕೀಯ ಕರಾಳದ ಅವಧಿ ಎಂದು ಬಣ್ಣಿಸಲಾಗುತ್ತದೆ. ಅಂದರೆ ಅಂದಿನ ಪ್ರಧಾನ ಮಂತ್ರಿಯಾಗಿದ್ದ ಶ್ರೀಮತಿ ಇಂದಿರಾಗಾಂಧಿಯವರು 25–06–1975ರಲ್ಲಿ ತುರ್ತು ಪರಿಸ್ಥಿತಿಯನ್ನು ಘೋಷಿಸಿದರು. ಅದೇ ಪಕ್ಷದಲ್ಲಿದ್ದ ಬಾಬೂಜಿಯವರು ತುರ್ತುಪರಿಸ್ಥಿತಿಯನ್ನು ವಿರೋಧಿಸಿ ಕಾಂಗ್ರೆಸ್ ಪಕ್ಷವನ್ನು ಬಿಟ್ಟು ಹೊರ ಬರುತ್ತಾರೆ. ಡಾ. ಬಾಬು ಜಗಜೀವನರಾಮ್‌ರವರು ದಲಿತ ಶಕ್ತಿ ಪ್ರದರ್ಶನ ಮಾಡಬೇಕೆಂಬ ದೃಢಸಂಕಲ್ಪ ಮಾಡುತ್ತಾರೆ. ನಂತರ ಅವರು 04–02–1977ರಲ್ಲಿ 'ಕಾಂಗ್ರೆಸ್ ಆಫ್ ಡೆಮಾಕ್ರಸಿ' ಎಂಬ ಹೊಸ ಪಕ್ಷವನ್ನು ಕಟ್ಟುತ್ತಾ–ರೆ. ಈ ಪಕ್ಷಕ್ಕೆ ಶ್ರೀ ಬಹುಗುಣ ಶ್ರೀಮತಿ ನಂದಿನಿಸತ್ವತಿ ಮತ್ತು ಜಯಪ್ರಕಾಶ ನಾರಾಯಣರವರು ಪಕ್ಷಕ್ಕೆ ಸೇರುತ್ತಾರೆ. ಫೆಬ್ರುವರಿ 1977ರಲ್ಲಿ ಶ್ರೀ ಡಿ. ದೇವರಾಜ ಅರಸರ ಮಂತ್ರಿಮಂಡಲದಲ್ಲಿ ಮಂತ್ರಿಯಾಗಿದ್ದ ಎನ್. ರಾಚಯ್ಯನವರು ಮಂತ್ರಿಮಂಡಲದಿಂದ ಹೊರಬಂದು ಬಾಬೂಜಿಯವರಿಗೆ ಬೆಂಬಲವನ್ನು ಸೂಚಿಸಿದರು. 21–03–1977ರಲ್ಲಿ ಇಂದಿರಾಗಾಂಧಿ ನೇತೃತ್ವ ಆಡಳಿತರೂಢ ಪಕ್ಷವಾದ ಕಾಂಗ್ರೆಸ್ ಪಕ್ಷವು ಹೀನಾಯವಾಗಿ ಸೋಲುತ್ತದೆ. ಜನತಾ ಮೈತ್ರಿಕೂಟಕ್ಕೆ ಐತಿಹಾಸಿಕ ಗೆಲವು. ನಂತರ ಮಾರ್ಚ 22, 1977ರಂದು ಇಂದಿರಾಗಾಂಧಿಯುವರು ರಾಜಿನಾಮೆ ಕೊಡುತ್ತಾರೆ.

ಮಾರ್ಚ 24, 1977ರಂದು ಶ್ರೀ ಮೊರಾರ್ಜಿ ದೇಸಾಯಿಯವರು ಕಾಂಗ್ರೆಸೇತರ ಪಕ್ಷದ ಸರ್ಕಾರದಲ್ಲಿ ಪ್ರಥಮ ಪ್ರಧಾನಮಂತ್ರಿಯಾಗಿ ಆಯ್ಕೆಯಾಗುತ್ತಾರೆ. ಆದರೆ ನಿಜವಾಗಿಯೂ ಡಾ. ಬಾಬು ಜಗಜೀವನರಾಮ್‌ರವರು ಪ್ರಧಾನಮಂತ್ರಿಯಾಗಬೇಕಾಗಿತ್ತು. ಆದರೆ ದಲಿತ ಎಂಬ ಕಾರಣಕ್ಕಾಗಿ ಪ್ರಧಾನಮಂತ್ರಿ ಹುದ್ದೆಯಿಂದ ವಂಚಿತರಾಗಿದ್ದು ಈ ದೇಶದ ದುರ್ದೈವ. ಆದರೆ ಅಕ್ಟೊಬರ್ 09, 1979 ರಿಂದ ಡಿಸೆಂಬರ 1979ರ ವರೆಗೆ ದೇಶದ ಉಪಪ್ರಧಾನಿಯಾಗಿ ಅಧಿಕಾರ ನಿರ್ವಹಿಸಿದರು.

ಇಂತಹ ಜಾತೀಯತೆ ವ್ಯವಸ್ಥೆಯಲ್ಲಿ 1969 ರಿಂದ 1971ರ ತನಕ ರಾಷ್ಟ್ರೀಯ ಕಾಂಗ್ರೆಸ್ಸಿನ ಸಮಿತಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದವರಲ್ಲಿ ಬಾಬೂಜಿಯವರು ಮೊದಲನೆಯವರಾಗಿದ್ದಾರೆ. ಹಾಗೂ ಎರಡನೇಯವರೆಂದರೆ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ ಇವರು ಹಾಲಿ ಅಧ್ಯಕ್ಷರಾಗಿದ್ದಾರೆ.

ಇಂತಹ ಮುತ್ಸದ್ಧಿ ರಾಜಕಾರಣಿಯ ಆದರ್ಶ ಸಿದ್ಧಾಂತಗಳನ್ನು ಪ್ರಚಾರ ಮಾಡಲು ಭಾರತ ಸರಕಾರವು ಸಾಮಾಜಿಕ ನ್ಯಾಯ ಸಚಿವಾಲಯ ಮತ್ತು ದೆಹಲಿಯಲ್ಲಿ ಡಾ. ಬಾಬು ಜಗಜೀವನರಾಮ್ ರಾಷ್ಟ್ರೀಯ ಪ್ರತಿಷ್ಠಾನವನ್ನು ಸ್ಥಾಪಿಸಲಾಗಿದೆ. ಇದು ಬಾಬೂಜಿಯವರ ವ್ಯಕ್ತಿತ್ವ ಗೌರವಕ್ಕೆ ಸರಕಾರವು ಸಲ್ಲಿಸಿದ ಗೌರವ ಎಂದು ಹೇಳಿದರೆ ತಪ್ಪಾಗಲಾರದು. ಆದರೆ ಇಂದಿನ ಜಾತೀಯತೆ ರಾಜಕೀಯ ವ್ಯವಸ್ಥೆಯಲ್ಲಿ ಒಂದು ಸಮುದಾಯಕ್ಕೆ ಸೀಮಿತಗೊಳಿಸಿರುವುದು ಅತ್ಯಂತ ದುರಂತವೆಂದು ಹೇಳಬಹುದು.

**– ಡಾ. ಗಂಗಪ್ಪ ಎಸ್. ಹೊಸಮನಿ**
**ರಾಜ್ಯಶಾಸ್ತ್ರ ಉಪನ್ಯಾಸಕರು**
**ಸರ್ಕಾರಿ ಪ್ರಥಮ ದರ್ಜೆ ಕಾಲೇಜು**
**ಶಹಾಪುರ ಜಿ: ಯಾದಗಿರಿ**
**ಮೊ.ನಂ. 9972268365**
**ಈ ಮೇಲ್ ಐಡಿ: hosamanigangappa0@gmail.com**

## ನಿಯಂತ್ರಣ ತಪ್ಪಿ ಟಂ ಟಂ ಪಲ್ಟಿ, 4 ಜನರಿಗೆ ಗಾಯ, ಮಗು ಸಾವು



ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ: ಬುಧವಾರ ಬೆಳಿಗ್ಗೆ 11ಕ್ಕೆ ಯಾದಗಿರಿಯಿಂದ ಹತ್ತಿಕುಣಿ ಗ್ರಾಮಕ್ಕೆ ಪ್ರಯಾಣಿಕರೊಂದಿಗೆ ಸಂಚರಿಸುತ್ತಿದ್ದ ಟಂ ಟಂಗೆ ಬಂದಳ್ಳಿ ಗ್ರಾಮದ ಕೆರೆಯ ಹತ್ತಿರ ವಾಹನಕ್ಕೆ ನಾಯಿ ಅಡ್ಡ ಬಂದ ಪರಿಣಾಮ ಚಾಲಕ ತುರ್ತಾಗಿ ಬ್ರೇಕ್ ಹಾಕಿದ್ದಾನೆ, ಪರಿಣಾಮ ಪಲ್ಟಿಯಾಗಿ 4 ಜನರಿಗೆ ಗಾಯಗಳಾಗಿವೆ, 3 ವರ್ಷದ ಮಗು ಆದಿ ಸಾವನ್ನಪ್ಪಿದ್ದಾನೆ.

ಟಂಟಂನಲ್ಲಿ ಚಾಲಕ ದೇವಿಂದ್ರಪ್ಪ ಹತ್ತಿಕುಣಿ ತನ್ನ ಪತ್ನಿ ಕಾವೇರಿ ಪುತ್ರನ ಜೊತೆಗೆ ಸಾಬಣ್ಣ ನೀಲಹಳ್ಳಿ, ಅಂಜಮ್ಮ, ಪ್ರಕಾಶ, ಬಸವರಾಜ ಗಾಯಗೊಂಡಿ–ದ್ದಾರೆ, ಅವರಲ್ಲಿ ಚಿಕ್ಕ ಮಗು ಗಂಭೀರ ಗಾಯಗೊಂಡಿದ್ದು, ಚಾಲಕ ಆ ಮಗುವನ್ನು ತುರ್ತಾಗಿ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲು ಯತ್ನಿಸಿದ, ದಾರಿ ಮಧ್ಯೆ ಮಗು ಆದಿ ದೇವಿಂದ್ರಪ್ಪ ಹತ್ತಿಕುಣಿ ಸಾವನ್ನಪ್ಪಿದ್ದಾನೆ, ಉಳಿದವರನ್ನು ಜಿಲ್ಲಾ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆ ದಾಖಲಿಸಲಾಗಿದೆ, ಸ್ಥಳಕ್ಕೆ ಯಾದಗಿರಿ ಗ್ರಾಮೀಣ ಪೊಲೀಸ್ ಠಾಣೆ ಪಿಎಸ್‌ಐ ಹಣಮಂತ ಬಂಕಲಗಿ ಆಗಮಿಸಿ, ಘಟನೆ ವಿಕ್ಷೀಸಿ, ಪ್ರಕರಣ ದಾಖಲಿಸಿ ತನಿಖೆ ಕೈಗೊಂಡಿದ್ದಾರೆ,



ತಾಳಿಕೋಟಿ ಪಟ್ಟಣಕ್ಕೆ ಜಿಲ್ಲಾಧಿಕಾರಿ ಟಿ. ಭೂಬಾಲನ್ ಬುಧವಾರ ಭೇಟಿ ನೀಡಿ ಪ್ರಜಾಸೌಧ ಕಟ್ಟಡ ನಿವೇಶನವನ್ನು ಹಾಗೂ ನಿರ್ಮಾಣ ಹಂತದ ಗ್ರಂಥಾಲಯ ಕಟ್ಟಡ ಕಾಮಗಾರಿಯನ್ನು ವೀಕ್ಷಿಸಿದರು. ತಹಶೀಲ್ದಾರ್ ಕೀರ್ತಿ ಚಾಲಕ್, ಪುರಸಭೆ ಮುಖ್ಯಾಧಿಕಾರಿ ಮೋಹನ ಜಾಧವ, ಕಂದಾಯ ನಿರೀಕ್ಷಕ ಸಿಂದಗಿ,ಪುರಸಭೆ ಮಾಜಿ ಸದಸ್ಯ ಪ್ರಭುಗೌಡ ಮದರಕಲ್ಲ, ಗ್ರಂಥಪಾಲಕ ಕುಲಕರ್ಣಿ, ಸಮಾಜ ಸೇವಕ ಸಿದ್ಧಾರ್ಥ ಕಟ್ಟಿಮನಿ, ನಾಗೇಶ್ ದಂಡಿನ್ ಯಮನಪ್ಪ ಚಮಲಾಪೂರ ಇದ್ದರು. (ಮಲ್ಲಮ್ಮ ನುಡಿ ಚಿತ್ರ).

## ಸಮತಾ ಸೈನಿಕದಳ ಸಂಘ ಶತಮಾನೋತ್ಸವ ಪೂರ್ವ ಬಾವಿಸಭೆ



ಮಲ್ಲಮ್ಮ ನುಡಿ ವಾರ್ತೆ

ಶಹಾಪೂರ: ಶನಿವಾರ ಆರ್ ವಾಯಿ ದಿಗ್ಗಿ ಕಾಲೇಜ್ನ ಡಾ. ಬಿ ಆರ್ ಅಂಬೇಡ್ಕರ್ ಅವರ ಸ್ಥಾಪಿತವಾದ, ಸಮತಾ ಸೈನಿಕದಳ ಸಂಘ 2025 ಕ್ಕೆ 100 ವರ್ಷ ಪೂರೈಸಿದ್ದು ಇದರ ಅಂಗವಾಗಿ ಶತಮಾನೋತ್ಸವ ಕಾರ್ಯಕ್ರಮ ಸಭೆ ಕರೆಯಲಾಗಿದ್ದು. ಅಧ್ಯಕ್ಷತೆ ರಾಜ್ಯ ಕಾರ್ಯಾಧ್ಯಕ್ಷ ಮಹಾದೇವ್ ದಿಗ್ಗಿ ವಹಿಸಿದರು. ಅಂಬೇಡ್ಕರ್ ಅವರ ಹೋರಾಟದ ಬಗ್ಗೆ ಮರು ನೆನಪಿಸಿ ಇವತ್ತಿನ ಹೋರಾಟದ ಬಗ್ಗೆ ಬೇಸರ ವ್ಯಕ್ತಪಡಿಸಿದರು. ಮತ್ತು ಶತಮಾನೋತ್ಸವದ ಬಗ್ಗೆ ತಾಲೂಕಿನ ಸ್ಥಳಿಯ ಜನತೆಯನ್ನು ಭಾಗವಹಿಸುವಂತೆ ಸಮಾಜದ ಮುಖಂಡರಿಗೆ ಹಾಗೂ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಮಾಡಬೇಕೆಂದು ತಿಳಿಸಿದರು. ಈ ಸಭೆಯಲ್ಲಿ ಜಿಲ್ಲಾ ಅಧ್ಯಕ್ಷ ಅಂಬ್ರೇಶ್ ದಿಗ್ಗಿ .ಸುರುಪರ ತಾಲೂಕ ಅಧ್ಯಕ್ಷ ಪರಶುರಾಮ್ ಗಡ್ಡದ,ಶಹಾಪೂರ ತಾಲೂಕ ಅಧ್ಯಕ್ಷ ಡಾ.ಮರೆಪ್ಪ ಪರಮೇಶ್ವರ, ಮಹೇಂದ್ರಕುಮಾರ ದಿಗ್ಗಿ ಅವರು ಈ ಕಾರ್ಯಕ್ರಮ ತುಂಬ ವಿಜೃಂಭಣೆಯಿಂದ ಹಾಗೂ ವ್ಯವಸ್ಥಿತವಾಗಿ ಬೇರೆ ಬೇರೆ ಜಿಲ್ಲೆಗಳಿಂದ ವಿದ್ವಾಂಸರಿಗೆ ಆಗಮಿಸಲಿದ್ದಾರೆ ಅಂಬೇಡ್ಕರ್ ಅವರ ವಿಚಾರಗಳು ಜನರಿಗೆ ತಲುಪುವಂತೆ ಮಾಡಬೇಕು. ಇದು ಒಂದು ಮುಂದಿನ ಜನಾಂಗಕ್ಕೆ ಹೊಸ ದಾರಿ ದೀಪವಾಗಬೇಕು ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು ,ಮಾಸ್ತಿ ಸರ್ ಇತರರು ಉಪಸ್ಥಿತರು ಇದ್ದರು ಮಾಸ್ತಿ ಆರ್ ನಿರೂಪಿಸಿದರು ಮರೆಪ್ಪ ಎಮ್ ವಂದಿಸಿದರು.

## ಕುರುವಿನ ಶೆಟ್ಟಿ ಸಮಾಜದ ವತಿಯಿಂದ ಜೇಡರ ದಾಸಿಮಯ್ಯ ಜಯಂತಿ ಆಚರಣೆ

ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ: ಕುಕನೂರ ಪಟ್ಟಣದಲ್ಲಿ ಕುರುಹಿನ ಶೆಟ್ಟಿ ಸಮಾಜದ ಶ್ರೀ ಗುರು ನೀಲಕಂಠೇಶ್ವರ ಟ್ರಸ್ಟ್ ಕಮಿಟಿ ವತಿಯಿಂದ ಜೇಡರ ದಾಸಿಮಯ್ಯ ಜಯಂತಿ ಆಚರಿಸಲಾಯಿತು. ಕುರುಹೀನ ಶೆಟ್ಟಿ ಸಮಾಜದ ತಾಲೂಕ ಅಧ್ಯಕ್ಷರಾದ ನೀಲಕಂಠಪ್ಪ ಬಣ್ಣದಬಾವಿ, ಹಾಗೂ ಪಟ್ಟಣ ಪಂಚಾಯತಿ ಸದಸ್ಯರು ಬಾಲರಾಜ್ ಗಾಳಿ,ಸಮಾಜದ ಉಪಾಧ್ಯಕ್ಷರಾದ ವಿಷ್ಣುತಿಪ್ಪಾಪುರ,ಶಿವು ಭಾವವಿಕಟ್ಟಿ, ವಿಜಯ್ ಕುಮಾರ ಉಂಕಿ,

ರಮೇಶ್‌ಸಾಲಮನಿ,ಮಂಜುನಾಥ್ ಕೂಡ್ಲಿಗಿ,ಮಾರುತಿ ದೇವಣ್ಣವರ, ಮಾರುತಿ ತಟ್ಟಿ, ರಮೇಶ್ ಹೊಸ್ಮನಿ,ಪ್ರವೀಣ್ ಕುಮಾರ್ ಬಣ್ಣದ ಬಾವಿ,ಗೋಪಾಲ್ ಬೆಣಿಕಲ್,ಲಕ್ಷ್ಮಣ ತಮ್ಮರುಗುಂಡಿ, ಹಾಗೂ ಕುರುಹಿನ ಶೆಟ್ಟಿ ಸಮಾಜದ ಕುಲಬಾಂಧವರು ಪಾಲ್ಗೊಂಡಿದ್ದರು.

## ಗುರುಮಠಕಲ್ ತಾಪಂ ನವಿಕೃತ ಕಟ್ಟಡಕ್ಕೆ ಶಾಸಕ ಕಂದಕೂರ ಪೂಜೆ



ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ : ಗುರುಮಠಲ್ ತಾಲೂಕಿನಲ್ಲಿ ತಾಪಂ ಕಚೇರಿಗೆ ಸರಿಯಾದ ಕೊಠಡಿ ಇಲ್ಲದೆ, ಇಕ್ಕಟ್ಟಿನಪರಿಸ್ಥಿತಿಯಲ್ಲಿ ಅಧಿಕಾರಿಗಳು ಕರ್ತವ್ಯ ನಿರ್ವಹಿಸಬೇಕಾಗಿತ್ತು, ಅದನ್ನು ಗಮನಿಸಿ, ಸೂಕ್ತ ಕಟ್ಟಡಕ್ಕಾಗಿ ಈ ಕಟ್ಟಡವನ್ನು ಆಯ್ಕೆ ಮಾಡಲಾಗಿದ್ದು, ಮುಂದಿನ ದಿನಗಳಲ್ಲಿ ಸ್ವಂತ ಕಟ್ಟಡ ಹೊಂದಲು ಕ್ರಮಕೈಗೊಳ್ಳಲಾಗುವುದು ಎಂದು ಗುರುಮಠಕಲ್ ಶಾಸಕ ಶರ–ಣಗೌಡ ಕಂದಕೂರ ಹೇಳಿದರು.

ಗುರುಮಠಕಲ್ ಪಟ್ಟಣದಲ್ಲಿ ತಾಪಂ ನವಿಕೃತ ಕಟ್ಟಡಕ್ಕೆ ಪೂಜೆ ಕಾರ್ಯಕ್ರಮ ನೆರವೇರಿಸಿ ಮಾತನಾಡಿದರು.

ಗುರುಮಠಕಲ್ ತಾಲೂಕಿನಲ್ಲಿ ಸರಿಯಾಗಿ ಇಲಾಖೆಗಳು ಇಲ್ಲದೆ ದೂರದ ಯಾದಗಿರಿಗೆ ಜನರು ಅಲೆದಾಡಬೇಕಾಗಿತ್ತು, ಈಗ ಗುರುಮಠಕಲ್ ತಾಲೂಕು ಆಗಿರುವುದರಿಂದ ಹಂತಹಂತವಾಗಿ ಇಲಾಖೆಗಳು ನಿರ್ಮಾಣಗೊಳ್ಳುತ್ತಿದ್ದು, ಅಧಿಕಾರಿಗಳಿಗೆ ಹಾಗೂ ಜನರಿಗೆ ಪ್ರಯೋಜನೆ ಆಗಲಿದೆ. ಮುಂದಿನ ದಿನಗಳಲ್ಲಿ ತಾಲೂಕು ಸಂಕೀರ್ಣ ಕಟ್ಟಡ ನಿರ್ಮಾಣವಾದಾಗ ಎಲ್ಲಾ ಇಲಾಖೆಗಳು ಒಂದೇ ಸೂರಿನಡಿ ಬರಲಿದ್ದು, ಆಗ ಜನರಿಗೆ ಪ್ರಯೋಜನವಾಗಲಿದೆ ಎಂದರು.

ಈ ಹಿಂದಿನ ತಾಪಂ ಕಟ್ಟಡದಲ್ಲಿ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಕೆಲಸಮಾಡುವುದು ಕಷ್ಟಕರವಾಗಿತ್ತು, ಇದನ್ನು ಪರಿಗಣಿಸಿ, ಈ ಕಟ್ಟಡ ಆಯ್ಕೆ ಮಾಡಿಕೊಂಡು ಇಲ್ಲಿ ತಾಪಂ ಕಚೇರಿ ಪ್ರಾರಂಭಿಸಲಾಗಿದೆ. ಇನ್ಮುಂದೆ ಅಧಿಕಾರಿಗಳು ಸುಗಮವಾಗಿ ಕರ್ತವ್ಯ ನಿರ್ವಹಿಸಿ ಜನಪರ ಕೆಲಸ ಮಾಡಬೇಕು ಎಂದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಸಿಇಒ ಲವೀಶ್ ಓರಾಡಿಯಾ, ಯೋಜನಾ ನಿರ್ದೇಶಕರಾದ ಸಿ.ಬಿ.ದೇವರಮನಿ, ಸಹಾಯಕ ಯೋಜನಾಧಿಕಾರಿ ಸಂತೋಷ ಕುಮಾರ, ಗುರುಮಠಕಲ್ ಇಒ ಅಮರೇಶ ಪಾಟೀಲ, ಯಾದಗಿರಿ ಇಒ ಮಹಾದೇವಪ್ಪ, ಶಹಾಪೂರ ಇಒ ಬಸವರಾಜ ಶರಬೈ, ಪ್ರಮುಖರಾದ ಜಿ.ತಮ್ಮಣ್ಣ, ಪ್ರಕಾಶ ನಿರೇಟಿ, ನವಾಜರಡ್ಡಿ ಪಾಟೀಲ, ಶರಣು ಆವಂಟಿ, ಮಲ್ಲಿಕಾರ್ಜುನ ಅರುಣಿ, ಬಾಲಪ್ಪ ದಾಸರಿ, ಆಶಣ್ಣ ಬುದ್ದಾ ಸೇರಿದಂತೆ ಇತರರಿದ್ದರು.

ಪಿಡಿಒಗಳು ಕೇಂದ್ರಸ್ಥಾನದಲ್ಲಿದ್ದು ಕರ್ತವ್ಯ ನಿರ್ವಹಿಸಿ

ಯಾದಗಿರಿ : ಗುರುಮಠಕಲ್ ತಾಲೂಕಿನಲ್ಲಿ ಜನರಿಗೆ ಶುದ್ಧ ಕುಡಿವ ನೀರಿನ ತೊಂದರೆಯಾಗದಂತೆ ಕ್ರಮಕೈಗೊಳ್ಳಬೇಕು, ಎಲ್ಲಾ ಪಿಡಿಒಗಳು ಕೇಂದ್ರಸ್ಥಾನದಲ್ಲಿದ್ದು ಕರ್ತವ್ಯ ನಿರ್ವಹಿಸಬೇಕು ಎಂದು ಶಾಸಕ ಶರಣಗೌಡ ಕಂದಕೂರ ಗ್ರಾಪಂ ಪಿಡಿಒಗಳಿಗೆ ತಾಕೀತು ಮಾಡಿದರು.

ಗುರುಮಠಕಲ್ ಪಟ್ಟಣದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯಕಾರ್ಯ ನಿರ್ವಹಣಾಧಿಕಾರಿಗಳು, ತಾಪಂ ಕಾರ್ಯನಿರ್ವಹಣಾಧಿಕಾರಿಗಳು, ಪಿಡಿಒಗಳ ಸಭೆಯಲ್ಲಿ ಮಾತನಾಡಿದರು.

ಮುಂದಿನ ದಿನಗಳಲ್ಲಿ ಬೇಸಿಗೆ ಇನ್ನೂ ಹೆಚ್ಚಾಗುವ ಸಾಧ್ಯತೆ ಇರುವುದರಿಂದ ಜನರಿಗೆ ಕುಡಿಯುವ ನೀರಿನ ತೊಂದರೆಯಾಗಲಿದೆ, ಈ ಹಿಂದೆ ಬೇಸಿಗೆಯಲ್ಲಿ ಹಲವು ಹಳ್ಳಿಗಳ ಜನರು ನೀರಿನ ತೊಂದರೆಯಿಂದ ಸಾಕಷ್ಟು ಸಂಕಷ್ಟ ಅನುಭವಿಸಿದ್ದಾರೆ, ಇದನ್ನು ಗಮನದಲ್ಲಿಟ್ಟುಕೊಂಡು ಜಲಮೂಲಗಳ ಪತ್ತೆಯ ಜೊತೆಗೆ ಸಾದ್ಯವಾದಷ್ಟು ಜಾಗೃತರಾಗಿ ಕೆಲಸ ಮಾಡಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಸಿಇಒ ಲವೀಶ್ ಓರಾಡಿಯಾ,ಯೋಜನಾನಿರ್ದೇಶಕರಾದ ಸಿ.ಡಿ.ದೇವರಮನಿ, ಸಹಾಯಕ ಯೋಜನಾಧಿಕಾರಿ ಸಂತೋಷ ಕುಮಾರ, ಗುರುಮಠಕಲ್ ಇಒ ಅಮರೇಶ ಪಾಟೀಲ ಇದ್ದರು.

## ಆಧ್ಯಾತ್ಮಿಕ ಮಾನವೀಯ ಮೌಲ್ಯ ಗುಣಗಳನ್ನು ಅಳವಡಿಸಿಕೊಳ್ಳಲು ಕರೆ: ಕೆ.ಬಿ.ಸಿದ್ಧಲಿಂಗಪ್ಪ




ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಏ.02-ಆದ್ಯವಚನಕಾರ, ನೇಕಾರ ಸಂತರಾದ ದೇವರ ದಾಸಿಮಯ್ಯ ಅವರ ಆಧ್ಯಾತ್ಮಿಕ ಮಾನವೀಯ ಗುಣ ಮತ್ತು ಮೌಲ್ಯಗಳನ್ನು ನಾವೆಲ್ಲರೂ ಅಳವಡಿಸಿಕೊಳ್ಳಬೇಕು ಎಂದು ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಕೆ.ಬಿ. ಸಿದ್ಧಲಿಂಗಪ್ಪ ಅವರು ಹೇಳಿದರು.

ಜಿಲ್ಲಾಡಳಿತ,ಜಿಲ್ಲಾಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮಹಾನಗರ ಪಾಲಿಕೆ ಇವರ ಸಂಯುಕ್ತಾಶ್ರಯದಲ್ಲಿ ನಗರದ ಡಾ.ರಾಜ್ ಕುಮಾರ್ ರಸ್ತೆಯ ಹೊಂಗಿರಣ ಸಾಂಸ್ಕೃತಿಕ ಸಮುಚ್ಚಯದ ವೇದಿಕೆ ಸಭಾಂಗಣದಲ್ಲಿ ಬುಧವಾರ ಏರ್ಪಡಿಸಿದ್ದ ಆದ್ಯ ವಚನಕಾರ ನೇಕಾರ ಸಂತ ದೇವರ ದಾಸಮಯ್ಯನವರ ಜಯಂತ್ಯೋತ್ಸವ ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸಕರಾಗಿ ಭಾಗವಹಿಸಿ ಅವರು ಮಾತನಾಡಿದರು.

ಕರ್ನಾಟಕ ಚರಿತ್ರೆಯಲ್ಲಿ ಹಲವಾರು ಸಾಹಿತ್ಯ ಶರಣರು ಆಧ್ಯಾತ್ಮಿಕತೆಯ ಚಿಂತನೆಯನ್ನು ವ್ಯಾಪಕಗೊಳಿಸಿದ್ದು, ಕಲ್ಯಾಣದಲ್ಲಿ ಬಸವಣ್ಣನವರ ಕಾಲಘಟ್ಟದಲ್ಲಿ ಸಮಾಜದ ಏಳಿಗೆ, ಸ್ತ್ರೀ ಸಮಾನತೆ, ಕಾಯಕದಾಸೋಹ, ಮಾನವೀಯ ಗುಣಗಳನ್ನು ಮತ್ತು ಮೌಲ್ಯಗಳನ್ನು ರೂಪಿಸಿದ ಕೀರ್ತಿ ಕಾಲವಾಗಿತ್ತು ಎಂದು ತಿಳಿಸಿದರು.

ಅಂದಿನ ಕಾಲದ ಸಮಾಜದಲ್ಲಿ ಜಾತಿ-ವರ್ಗ ಸಂಘರ್ಷಗಳಿಂದ ದೂರವಿರುವಂತೆ ಮಾನವಕುಲಕ್ಕೆ ಅರಿವು ಮೂಡಿಸುತ್ತಿದ್ದರು. ದೇವರ ದಾಸಿಮಯ್ಯ ಅವರು ಆದ್ಯ ವಚನಕಾರರಾಗಿದ್ದು, ಸಮಾಜದಲ್ಲಿ ಮನೆ ಮಾಡಿದ್ದ ಮೂಢ ನಂಬಿಕೆಗಳನ್ನು ನೇರ ನಿಷ್ಠುರ ನುಡಿಗಳಿಂದ ಟೀಕಿಸಿದ್ದರು ಎಂದರು. ದೇವರ ದಾಸಿಮಯ್ಯ ಅವರು ಬದುಕನ್ನು ಕಟ್ಟಿಕೊಳ್ಳಲು ಕೆಲಸ ಯಾವುದಾದರೇನು ಎಂದು ನೇಯುವ ಕಾಯಕ ಮಾಡುತ್ತಿದ್ದರು. ದಾಸಿಮಯ್ಯರು ಶ್ರೇಷ್ಠ ವಚನಕಾರರಾಗಿದ್ದರು. ಇವರ ಅಂಕಿತ ನಾಮ 'ರಾಮನಾಥ' ಎಂಬುದಾಗಿತ್ತು ಎಂದು ಅವರು ತಿಳಿಸಿದರು. ದೇವರ ದಾಸಿಮಯ್ಯ ಅವರು ಯಾದಗಿರಿ ಜಿಲ್ಲೆಯ ಸುರುಪುರ ತಾಲ್ಲೂಕಿನಲ್ಲಿ ಜನಿಸಿದವರಾಗಿದ್ದು. ತಂದೆ ಮುದನೂರು ರಾಮಯ್ಯ, ತಾಯಿ ಶಂಕರಿ ಮತ್ತು ಸಂಗಾತಿ ದುಗ್ಗಳೆ ಹಾಗೂ ಮಗ ರಾಮಲಿಂಗ. ಇವರನ್ನು ದೇವರ ದಾಸಿಮಯ್ಯ, ಜೇಡರ ದಾಸಿಮಯ್ಯ ಎಂದು ಎರಡು ರೀತಿಯಲ್ಲಿ ಆದ್ಯಪ್ರವರ್ತಕನೆಂದು ಗುರುತಿಸಲಾಗುತ್ತದೆ ಎಂದು ಸಿದ್ದಲಿಂಗಪ್ಪ ಅವರು ವಿವರಿಸಿದರು.

ವೃತ್ತಿಯಲ್ಲಿ ನೇಕಾರನಾದ ದಾಸಿಮಯ್ಯನವರು ಶಿವನಿಗೆ ಬಟ್ಟೆಯನ್ನು ಕೊಟ್ಟು ಅಪೂರ್ವಭಕ್ತಿ ಮೆರೆದವರು. ಕಾಯಕವನ್ನೇ ಕೈಲಾಸವಾಗಿಸಿಕೊಂಡ ಸಾಧಕರಾಗಿದ್ದರು ಎಂದು ಹೇಳಿದರು. ಜಿಲ್ಲಾ ನೇಕಾರರ ಸಮುದಾಯಗಳ ಒಕ್ಕೂಟದ ಅಧ್ಯಕ್ಷ ಸಿ.ದೇವಾನಂದ ಅವರು ಮಾತನಾಡಿ, ಸಮಾಜದ ಬಡವರಿಗೆ ಅಗತ್ಯ ಮೂಲ ಸೌಕರ್ಯ ಕಲ್ಪಿಸಬೇಕು. ಸಮುದಾಯದ ಯುವಕರು-ಯುವತಿಯರು, ಸದೃಡವಾಗಿ ಬೆಳೆದು ರಾಜ್ಯ ಮಟ್ಟದಲ್ಲಿ ಗುರುತಿಸಿಕೊಳ್ಳಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಗಣ್ಯರು ಆದ್ಯ ವಚನಕಾರ ದೇವರ ದಾಸಮಯ್ಯ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು. ಈ ಸಂದರ್ಭದಲ್ಲಿ ಕನ್ನಡ ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ ಸೇರಿದಂತೆ ಸಮಾಜದ ಮುಖಂಡರು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

## ಬಳ್ಳಾರಿ ಮಹಾನಗರ ಪಾಲಿಕೆ: ನೀರಿನ ಕರ ಮತ್ತು ಒಳಚರಂಡಿ ಶುಲ್ಕದ ದರ ಪರಿಷ್ಕರಣೆ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಏ.02-ಬಳ್ಳಾರಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಪ್ರತಿ 03 ವರ್ಷಕ್ಕೊಮ್ಮೆ ನೀರಿನ ಕರ ಹಾಗೂ ಒಳಚರಂಡಿ ಶುಲ್ಕದ ದರಗಳನ್ನು ಪರಿಷ್ಕರಿಸಲು ಅವಕಾಶವಿದ್ದು, ಮಹಾಪೌರರ ಅಧ್ಯಕ್ಷತೆಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಏಪ್ರಿಲ್ 01 2025 ರಿಂದ ಜಾರಿಗೆ ಬರುವಂತೆ ಪರಿಷ್ಕೃತ ದರಗಳನ್ನು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಗಿದೆ ಎಂದು ಪಾಲಿಕೆಯ ಆಯುಕ್ತರು ತಿಳಿಸಿದ್ದಾರೆ.

**ನೀರಿನ ದರ:**

ಗೃಹ ಬಳಕೆ: ಪ್ರಸ್ತುತ ದರ ರೂ.175, ಪರಿಷ್ಕರಿಸಿದ ದರ ರೂ.200(ಪ್ರತಿ ತಿಂಗಳಿಗೆ).

ಗೃಹೇತರ ಬಳಕೆ: ಪ್ರಸ್ತುತ ದರ ರೂ.400, ಪರಿಷ್ಕರಿಸಿದ ದರ ರೂ.25 (ಪ್ರತಿ ಕಿಲೊ ಲೀಟರ್‌ಗೆ) (ಮಾಲೀಕರು ಪಾಲಿಕೆಯಿಂದ ಮೀಟರ್‌ನ್ನು ಖರೀದಿಸಿ ಅಳವಡಿಸಿಕೊಳ್ಳತಕ್ಕದ್ದು)

ವಾಣಿಜ್ಯ: ಪ್ರಸ್ತುತ ದರ ರೂ.700, ಪರಿಷ್ಕರಿಸಿದ ದರ ರೂ.30 (ಪ್ರತಿ ಕಿಲೊ ಲೀಟರ್‌ಗೆ) (ಮಾಲೀಕರು ಪಾಲಿಕೆಯಿಂದ ಮೀಟರ್‌ನ್ನು ಖರೀದಿಸಿ ಅಳವಡಿಸಿಕೊಳ್ಳತಕ್ಕದ್ದು) ಪಾಲಿಕೆಯ ವ್ಯಾಪ್ತಿಗೆ ಒಳಪಡದ ಪ್ರದೇಶಗಳಿಗೆ ಬಲ್ಕ್ ಮೀಟರ್ ಅಳವಡಿಸಿ ಪ್ರತಿ ಕಿಲೋ ಲೀಟರ್ ಗೆ ರೂ.30/-ರಂತೆ ಪಡೆಯುವುದು.

ಕೈಗಾರಿಕೆ: ಪ್ರಸ್ತುತ ದರ ರೂ.700, ಪರಿಷ್ಕರಿಸಿದ ದರ ರೂ.40 ಪ್ರತಿ ಕಿಲೊ ಲೀಟರ್‌ಗೆ (ಮಾಲೀಕರು ಪಾಲಿಕೆಯಿಂದ ಮೀಟರ್‌ನ್ನು ಖರೀದಿಸಿ ಅಳವಡಿಸಿಕೊಳ್ಳತಕ್ಕದ್ದು) ಪಾಲಿಕೆಯ ವ್ಯಾಪ್ತಿಗೆ ಒಳಪಡದ ಪ್ರದೇಶಗಳಿಗೆ ಬಲ್ಕ್ ಮೀಟರ್ ಅಳವಡಿಸಿ ಪ್ರತಿ ಕಿಲೋ ಲೀಟರ್ ಗೆ ರೂ.40/-ರಂತೆ ಪಡೆಯುವುದು.

*ಒಂದು ಭಾರಿ ನೀರು ಸಂಪರ್ಕಗಳಿಗೆ ವಿಧಿಸುವ ದರ:*

ಗೃಹ ಬಳಕೆ: ಪ್ರಸ್ತುತ ದರ-5000/-, ಪರಿಷ್ಕರಿಸಿದ ದರ-6000/-

ಗೃಹೇತರ ಬಳಕೆ: ಪ್ರಸ್ತುತ ದರ-10,000/-, ಪರಿಷ್ಕರಿಸಿದ ದರ-15,000/-

ವಾಣಿಜ್ಯ/ಕೈಗಾರಿಕೆ: ಪ್ರಸ್ತುತ ದರ-10,000/-, ಪರಿಷ್ಕರಿಸಿದ ದರ-25,000/-

ಒಳಚರಂಡಿ ಶುಲ್ಕದ ದರ:

ಗೃಹ ಬಳಕೆಯ ಪ್ರತಿ ಬೇಸಿನ್‌ಗೆ: ಪ್ರಸ್ತುತ ದರ-35ರೂ., ಪರಿಷ್ಕರಿಸಿದ ದರ-50 ರೂ. (ಪ್ರತಿ ಬೇಸಿನ್/ತಿಂಗಳು)

ಲಾಡ್ಜಿಂಗ್, ಬೋರ್ಡಿಂಗ್/ಅಪಾರ್ಟ್‌ಮೆಂಟ್ ಹಾಗೂ ಇನ್ನಿತರೆ ಬಹುಮಹಡಿ ಕಟ್ಟಡಗಳ ಪ್ರತಿ ಬೇಸಿನ್‌ಗೆ: ಪ್ರಸ್ತುತ ದರ-35 ರೂ., ಪರಿಷ್ಕರಿಸಿದ ದರ-100 ರೂ. (ಪ್ರತಿ ಬೇಸಿನ್/ತಿಂಗಳು)

ಹೋಟೆಲ್/ರೆಸ್ಟೋರೆಂಟ್: ಪ್ರಸ್ತುತ ದರ-35 ರೂ., ಪರಿಷ್ಕರಿಸಿದ ದರ-2,500 ರೂ. (ಪ್ರತಿ ಬೇಸಿನ್/ತಿಂಗಳು)

ಒಂದು ಬಾರಿ ಒಳಚರಂಡಿ ಸಂಪರ್ಕಗಳಿಗೆ ವಿಧಿಸುವ ದರ:

ಗೃಹ ಬಳಕೆಗೆ: ಪ್ರಸ್ತುತ ದರ-500/-, ಪರಿಷ್ಕರಿಸಿದ ದರ-3000/-.

ಲಾಡ್ಜಿಂಗ್ ಮತ್ತು ಬೋರ್ಡಿಂಗ್: ಪ್ರಸ್ತುತ ದರ-1,000/-, ಪರಿಷ್ಕರಿಸಿದ ದರ-15,000/-.

ಹೋಟೆಲ್/ರೆಸ್ಟೋರೆಂಟ್: ಪ್ರಸ್ತುತ ದರ-1,000/-, ಪರಿಷ್ಕರಿಸಿದ ದರ-20,000/-.

ಸಾರ್ವಜನಿಕರು ನಿಗದಿತ ಅವಧಿಯಲ್ಲಿ ನೀರಿನ ಕರ ಹಾಗೂ ಒಳಚರಂಡಿ ಶುಲ್ಕವನ್ನು ಪಾವತಿಸಿ ಪಾಲಿಕೆಯ ಅಭಿವೃದ್ಧಿಗೆ ಸಹಕರಿಸಬೇಕು ಎಂದು ಪಾಲಿಕೆಯ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ರಾಜ್ಯ ಗುಪ್ತವಾರ್ತೆ ನಿರ್ದೇಶಕ ಹೇಮಂತ್ ಎಂ ನಿಂಬಾಳ್ಕರ್‌ಗೆ ಮುಖ್ಯಮಂತ್ರಿಗಳ ಸ್ವರ್ಣಪದಕ ಪ್ರದಾನ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಏ.02-ರಾಜ್ಯದಲ್ಲಿ ನಕ್ಸಲ್ ಚಟುವಟಿಕೆಗಳನ್ನು 'ಶೂನ್ಯ'ಗೊಳಿಸಲು ವಿಶೇಷ ಮುತುವರ್ಜಿಯಿಂದ ಪೊಲೀಸ್ ಕಾರ್ಯಾಚರಣೆಗೆ ಮುಂದಾಳತ್ವ ವಹಿಸಿ, ಮಾರ್ಗದರ್ಶನ ನೀಡುವ ಮೂಲಕ ಎಲ್ಲ ನಕ್ಸಲರನ್ನು ಶರಣಾಗುವಂತೆ ಮಾಡಿದ ರಾಜ್ಯ ಗುಪ್ತವಾರ್ತೆ ನಿರ್ದೇಶಕ ಹೇಮಂತ್ ಎಂ ನಿಂಬಾಳ್ಕರ್ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸ್ವರ್ಣಪದಕ ಪ್ರದಾನ ಮಾಡಿದರು.



ಬೆಂಗಳೂರಿನ ಫೀಲ್ಡ್ ಮಾರ್ಷಲ್ ಮಾಣಿಕ್ ಷಾ ಪರೇಡ್ ಮೈದಾನದಲ್ಲಿ ಇಂದು ಬೆಳಿಗ್ಗೆ ಪೊಲೀಸ್ ಧ್ವಜ ದಿನಾಚರಣೆ ಸಮಾರಂಭದಲ್ಲಿ ಪದಕ ಪ್ರದಾನ ಮಾಡಲಾಯಿತು.

1998ರ ಬ್ಯಾಚಿನ ಐಪಿಎಸ್ ಅಧಿಕಾರಿಯಾಗಿರುವ ಹೇಮಂತ್ ಎಂ.ನಿಂಬಾಳ್ಕರ್ ಅವರು ಪ್ರಸ್ತುತ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತರಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ.

## ಕರಾಮುವಿ: ಶುಲ್ಕ ಪಾವತಿಸಲು ಅವಧಿ ವಿಸ್ತರಣೆ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ.ಏ.02-ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯಕ್ಕೆ 2024-25 ನೇ ಜನವರಿ ಆವೃತ್ತಿಯ ದ್ವಿತೀಯ ಮತ್ತು ತೃತೀಯ ವರ್ಷಕ್ಕೆ ಪ್ರವೇಶಾತಿ ನವೀಕರಣ ಮಾಡಿಕೊಳ್ಳಲು ಬೋಧನಾ ಶುಲ್ಕ ಪಾವತಿಸಲು ಬಿ.ಎ, ಬಿ.ಕಾಂ, ಬಿ.ಎಸ್ಸಿ, ಬಿ.ಸಿ.ಎ, ಬಿ.ಎಸ್. ಡಬ್ಲ್ಯೂ ಮತ್ತು ಅಂತಿಮ ಎಂ.ಎ, ಎಂ.ಕಾಂ, ಎಂ.ಎಸ್ಸಿ, ಎಂ.ಬಿ.ಎ, ಎಂ.ಸಿ.ಎ, ಎಂ.ಎಸ್. ಡಬ್ಲ್ಯೂ, ಪದವಿಗಳ ಬೋಧನಾ ಶುಲ್ಕ ಪಾವತಿಸಲು ರೂ.400/- ದಂಡ ಶುಲ್ಕದೊಂದಿಗೆ ಏ.15 ರವರೆಗೆ ವಿಸ್ತರಿಸಲಾಗಿದೆ ಎಂದು ಕರಾಮುವಿ ಪ್ರಾದೇಶಿಕ ಕೇಂದ್ರದ ನಿರ್ದೇಶಕರಾದ ಡಾ.ಎಚ್. ಮಲ್ಲಿಕಾರ್ಜುನ ಅವರು ತಿಳಿಸಿದ್ದಾರೆ.

ಮಾಹಿತಿಗೆ ಕರಾಮುವಿ ವೆಬ್‌ಸೈಟ್ ತಿತಿತಿ.ಞsoಣ.ಚಿಛಿ.iಟಿ ನ್ನು ವೀಕ್ಷಿಸುವುದು.

ಹೆಚ್ಚಿನ ಮಾಹಿತಿಗೆ ಪ್ರಾದೇಶಿಕ ನಿರ್ದೇಶಕರು, ಕರಾಮುವಿ ಪ್ರಾದೇಶಿಕ ಕೇಂದ್ರ, ಜಿಲ್ಲಾ ಕ್ರೀಡಾಂಗಣದ ಹತ್ತಿರ, ಪ್ರಾದೇಶಿಕ ವಿಜ್ಞಾನ ಕೇಂದ್ರದ ಹಿಂಭಾಗ, ನಲ್ಲಚೆರವು ಪ್ರದೇಶ, ಬಳ್ಳಾರಿ ಅಥವಾ ಮೊ.7892597159 ಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಯುವಕರಿಗೆ ಕ್ರೀಡಾ ಮನೋಭಾವ ಬೆಳೆಸುವ ವೀರು ಸ್ಪೋರ್ಟ್ಸ್ ಅಕಾಡೆಮಿಯ ಕಾರ್ಯ ಪ್ರಶಂಶನೀಯ : ಮಾಜಿ ಶಾಸಕ ಪರಣ್ಣ ಮನವಳ್ಳಿ



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ: ಜಿಲ್ಲೆಯ ಗಂಗಾವತಿ ತಾಲೂಕಿನ ದಾಸನಾಳ ಗ್ರಾಮದಲ್ಲಿ ವೀರು ಸ್ಪೋರ್ಟ್ಸ್ ಅಕಾಡೆಮಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಾ ವಿಶ್ವಾದ್ಯಂತ ಕ್ರಿಕೆಟ್ ಯುವ ಜನರಿಗೆ ಸ್ಪೂರ್ತಿದಾಯಕವಾಗಿದೆ. ಇಂತಹ ಸಂದರ್ಭದಲ್ಲಿ ದಾಸನಾಳ ಗ್ರಾಮ ದಂತಹ ಗ್ರಾಮೀಣ ಪ್ರದೇಶದಲ್ಲಿ ವೀರು ಸ್ಪೋರ್ಟ್ಸ್ ಅಕಾಡೆಮಿ ಹಾಗೂ ಸಮ್ಮರ್ ಕ್ಯಾಂಪ್ ಸ್ಥಾಪಿಸುವುದರ ಮೂಲಕ. ಶೈಕ್ಷಣಿಕ ಹಾಗೂ ಕ್ರೀಡಾ ಚಟುವಟಿಕೆಗಳಿಗೆ ಮುಂದಾಗಿರುವ ಅಕಾಡೆಮಿಯ ಅಧ್ಯಕ್ಷ ದೇವಾನಂದ್ ಹಾಗೂ ತಂಡದವರ ಕಾರ್ಯ ಅತ್ಯಂತ ಪ್ರಶಂಶಿಯವಾಗಿದೆ ಎಂದು ಮಾಜಿ ಶಾಸಕ ಪರಣ್ಣ ಮುನವಳ್ಳಿ ಹೇಳಿದರು. ಅವರು ದಾಸನಾಳ ಗ್ರಾಮದಲ್ಲಿ ವೀರು ಸ್ಪೋರ್ಟ್ಸ್ ಅಕಾಡೆಮಿ ಹಾಗೂ ಸಮ್ಮರ್ ಕ್ಯಾಂಪ್ ಜ್ಯೋತಿ ಬೆಳಗಿಸುವುದರ ಮೂಲಕ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಮಕ್ಕಳಿಗೆ ಶಿಕ್ಷಣದ ಜೊತೆಗೆ ಕ್ರೀಡಾ ಮನೋಭಾವನೆ ಬೆಳೆಸುವುದು ಗಮನಿಸಿದರೆ ಅವರಲ್ಲಿನ ಆಸಕ್ತಿ ಎಷ್ಟಿದೆ ಎಂಬುದು ಗೊತ್ತಾಗುತ್ತದೆ. ಚಿಕ್ಕ ಮಕ್ಕಳಿಂದ ಹಿಡಿದು ಹಿರಿಯರವರೆಗೆ ಕ್ರಿಕೆಟ್ ಜ್ವರ ಕಾಣಬಹುದಾಗಿದೆ. ಅಂತಹ ಮಹತ್ವವಾದ ಕ್ರಿಯೆಗೆ ಲೆದರ್ ಬಾಲ್ ಕ್ರಿಕೆಟ್ ಕೋಚಿಂಗ್ ಸೆಂಟರ್ ವರದಾನವಾಗಲಿದೆ ಎಂದು ತಿಳಿಸಿದರು.

ಅಕಾಡೆಮಿಯ ಅಧ್ಯಕ್ಷ ದೇವಾನಂದ್ ಮಾತನಾಡಿ ಗ್ರಾಮಾಂತರ ಪ್ರದೇಶದಲ್ಲಿನ ಯುವಕರಿಗೆ ಕ್ರೀಡಾ ಮನೋಭಾವನೆ ಹೆಚ್ಚು ಹೊಂದಿದ್ದು, ಅಂತಹ ಯುವಕರಿಗೆ ಸೂಕ್ತವಾದ ತರಬೇತಿ ನೀಡುವ ಉದ್ದೇಶ ಅಕಾಡೆಮಿ ಹೊಂದಿದೆ. ಜೊತೆಗೆ ಇನ್ನುಳಿದ ಕ್ರೀಡೆಗಳು ಹಾಗೂ ಸಮ್ಮರ್ ಕ್ಯಾಂಪ್ ಮೂಲಕ ಶೈಕ್ಷಣಿಕ ಚಟುವಟಿಕೆಗಳಿಗೆ ವಸತಿ ಸಹಿತ ತರಬೇತಿಗೊಳಿಸಲಾಗುತ್ತದೆ ಎಂದು ತಿಳಿಸಿ ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ಹೇಳಿದರು. ಈ ಸಂದರ್ಭದಲ್ಲಿ ದಿವ್ಯಸಾನಿದ್ಯ ಬಸವಣಯ್ಯಸ್ವಾಮಿ ಹಿರೇಮಠ, ವೀರಭದ್ರಪ್ಪ, ವೀರೇಶ್ ಹಿರೇಮಠ, ವೀರಶೈವ ಲಿಂಗಾಯತ ಯುವ ವೇದಿಕೆ ಜಿಲ್ಲಾಧ್ಯಕ್ಷ ಶರಣಯ್ಯಸ್ವಾಮಿ ಉಡುಮಕಲ್, ಬಿಜೆಪಿ ಯುವ ಮುಖಂಡ ಸಂಗಮೇಶ ಸುಗ್ರೀವ, ಮನೋಹರಗೌಡ ಹೇರೂರು, ಚನ್ನವೀರಗೌಡ, ಬಸವನಗೌಡ ಬಸಾಪಟ್ಟಣ, ವೀರನಗೌಡ, ಬಸವರಾಜಪ್ಪ, ಮಲ್ಲಿಕಾರ್ಜುನ, ಹನುಮೇಶ, ಯಲ್ಲಪ್ಪ, ಭೀಮೇಶ ನಾಯಕ, ಮಾರುತಿ, ರುದ್ರೇಶ, ಗಣೇಶ ರಾಚನಗೌಡ್ರು, ಶರಣೆಗೌಡ ಮಾಲಿಪಾಟೀಲ್,

ಸೇರಿದಂತೆ ಗ್ರಾಮದ ಮುಖಂಡರು, ಯುವಕರು ಪಾಲ್ಗೊಂಡಿದ್ದರು.

## ಶಾಂತಿನಿಕೇತನ ಶಾಲೆಯಲ್ಲಿ ಬೇಸಿಗೆ ಶಿಬಿರ ಪ್ರಾರಂಭೋತ್ಸವ



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಜಿಲ್ಲೆಯ ಕುಕನೂರ ತಾಲೂಕಿನ ಮಂಗಳೂರು ಗ್ರಾಮದ ಶ್ರೀ ಮಂಗಳೇಶ್ವರ ಶಿಕ್ಷಣ ಸಂಸ್ಥೆ ಶಾಂತಿನಿಕೇತನ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಇಂದು ಬೇಸಿಗೆ ಶಿಬಿರ ಪ್ರಾರಂಭೋತ್ಸವ ಕಾರ್ಯಕ್ರಮದಲ್ಲಿ ಸರಸ್ವತಿ ಮಾತೆಯ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಬಾಬುಸಾಬ್ ಗುಡಿಹಿಂದಲ್ ಕೆಪಿಎಸ್‌ಸಿ ಶಾಲೆಯ ಶಿಕ್ಷಕರು ಮಾತನಾಡಿ ಮಕ್ಕಳ ಪ್ರತಿಭೆಯನ್ನು ಪೋಷಿಸುವುದಕ್ಕೆ ಬೇಸಿಗೆ ಶಿಬಿರ ಸಹಕಾರಿ ಎಂದು ಹೇಳಿದರು. ವಿದ್ಯಾರ್ಥಿಗಳು ಬೇಸಿಗೆ ರಜೆಯ ಸಮಯದಲ್ಲಿ ಸಮಯವನ್ನು ವ್ಯರ್ಥ ಮಾಡದೆ ಇಂತಹ ಬೇಸಿಗೆ ಶಿಬಿರದಲ್ಲಿ ವಿದ್ಯಾರ್ಥಿಗಳು ಉತ್ತಮ ಬೋಧನೆ ಪಡೆದುಕೊಳ್ಳಬೇಕು ಎಂದು ಹೇಳಿದರು. ಶಾಂತಿನಿಕೇತನ ಶಾಲೆಯಲ್ಲಿ ಮುಂದಿನ ದಿನಮಾನಗಳಲ್ಲಿ ಪ್ರೌಢಶಾಲೆಯನ್ನು ಪ್ರಾರಂಭಿಸಬೇಕು ಎಂದು ಸಂಸ್ಥೆಯ ಅಧ್ಯಕ್ಷರಿಗೆ ಮನವಿ ಮಾಡಿದರು.

ಶರಣಪ್ಪ ಗೊಂಡಬಾಳ ಹಿರಿಯ ಶಿಕ್ಷಕರು ಪ್ರಾಸ್ತಾವಿಕ ಮಾತನಾಡಿ ಜೀವನದಲ್ಲಿ ಕನಸು, ಶ್ರದ್ಧೆ ಇದ್ದರೆ ನಾವು ಏನನ್ನಾದರೂ ಸಾಧಿಸಬಹುದು ಎಂದು ಹೇಳಿದರು. ವಿದ್ಯಾರ್ಥಿಗಳು ಹಿರಿಯರನ್ನು ಗೌರವಿಸಿ ಉತ್ತಮ ಗುಣಗಳನ್ನು ಬೆಳೆಸಿಕೊಳ್ಳಬೇಕು ಬೇಸಿಗೆ ಶಿಬಿರಗಳು ಮಕ್ಕಳಲ್ಲಿ ನೃತ್ಯ, ಕರಾಟೆ, ಕೈಬರಹ, ಮೂಲ ಗಣಿತ, ಚಿತ್ರಕಲೆ, ಕರಕುಶಲತೆ, ಪರಿಸರ ಕಾಳಜಿ, ಒಳಾಂಗಣ ಹಾಗೂ ಹೊರಾಂಗಣ ಆಟಗಳು, ಯೋಗ ಮತ್ತು ಧ್ಯಾನ, ಜನಪರ ಕಾಳಜಿಗಳನ್ನೆಲ್ಲ ಬೆಳೆಸುತ್ತಿವೆ ಎಂದವರು ಹೇಳಿದರು.

ಸಂಸ್ಥೆಯ ಅಧ್ಯಕ್ಷ ಪತ್ರಕರ್ತ ರವೀಂದ್ರನಾಥ ಕೊಟ್ರಪ್ಪ ತೆ-ೂೕಟದ ಮಾತನಾಡಿ ನಮ್ಮ ಸಂಸ್ಥೆಯಲ್ಲಿ ಸುಮಾರು ಎಂಟು ವರ್ಷಗಳಿಂದ ಅನುಭವಿ ನುರಿತ ಶಿಕ್ಷಕ ವೃಂದದವರಿಂದ ವಿಶೇಷ ಬೇಸಿಗೆ ಶಿಬಿರ ನಡೆಸಿಕೊಂಡು ಬರುತ್ತಿದ್ದೇವೆ ಎಂದವರು ಹೇಳಿದರು. ವಿದ್ಯಾರ್ಥಿಗಳು ಬೇಸಿಗೆ ರಜಾ ಅವಧಿಯಲ್ಲಿ ಕೇವಲ ಆಟ ಆಡುವುದು ಸಮಯ ವ್ಯರ್ಥ ಮಾಡುವುದು ಬಿಟ್ಟು ಇಂತಹ ಬೇಸಿಗೆ ಶಿಬಿರದಲ್ಲಿ ಉತ್ತಮ ಶಿಕ್ಷಣವನ್ನು ಪಡೆದುಕೊಳ್ಳಬೇಕು ಎಂದು ಹೇಳಿದರು. ಪ್ರತಿಯೊಬ್ಬ ವಿದ್ಯಾರ್ಥಿಗಳ ಬಗ್ಗೆ ವಿಶೇಷ ಕಾಳಜಿಯನ್ನು ನಮ್ಮ ಶಿಕ್ಷಕ ವೃಂದದವರು ವಹಿಸಲಿದ್ದಾರೆ ಎಂದು ಹೇಳಿದರು. ಮಂಗಳೂರು ಗ್ರಾಮದಲ್ಲಿ ಪ್ರಥಮ ಖಾಸಗಿ ಶಿಕ್ಷಣ ಸಂಸ್ಥೆ ನಮ್ಮ ಶಾಲೆ ಈ ವರ್ಷ 25ನೇ ವರ್ಷದ ವಿಶೇಷ ಕಾರ್ಯಕ್ರಮ ಮಾಡುವುದಾಗಿ ಈ ಸಂದರ್ಭದಲ್ಲಿ ಹೇಳಿದರು.

ಈ ಸಂದರ್ಭದಲ್ಲಿ ಸಂಸ್ಥೆಯ ಕಾರ್ಯದರ್ಶಿ ಮೇಘನಾ ರವೀಂದ್ರನಾಥ ತೋಟದ, ಮುಖ್ಯ ಗುರುಗಳಾದ ದೇವಣ್ಣ ದೇಸಾಯಿ ಶಿಕ್ಷಕ ವೀರೇಶ ಕುಂಬಾರ, ವೀರೇಶ ಗಟ್ಟೆಪ್ಪ ಉಮಚಗಿ, ಜಗದೀಶಯ್ಯ ಹಿರೇಮಠ ರೇವಣಕಿ, ಮಂಜುಳಾ ಮಲ್ಲಿಕಾರ್ಜುನ ಹೊಸಮನಿ, ನಂದಿತಾ ಬಸವರಾಜ ದೇವರ, ಮೆಹಬೂಬ್ ಪಾಷಾ ಖಾಜಿ, ಶಿಕ್ಷಕರಾದ ಮಂಜಪ್ಪ ಆರ್ ಕುರದಗಟ್ಟಿ, ಶಿವಲೀಲಾ ಕಂದಗಲ್ಲ, ಬಸಮ್ಮ ಅಶೋಕ ಪಟ್ಟಣಶೆಟ್ಟಿ, ಯಶೋಧ ಬಂಡಿ, ನಾಗನಗೌಡ್ರ ಪೋಲೀಸಪಾಟೀಲ ಪಾಲಕರ ಪ್ರತಿನಿಧಿ, ಮುದ್ದು ಮಕ್ಕಳು ಹಾಜರಿದ್ದರು.

## ಯುಗಾದಿ ಎಲ್ಲರಲ್ಲಿಯೂ ಹರ್ಷ ತರಲಿ - ಆರ್ ಪಿ ರಾಜೂರ




ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಯುಗಾದಿಯ ಪ್ರಾರಂಭದ ದಿನವನ್ನು ಬ್ರಹ್ಮಾಂಡದ ಸೃಷ್ಟಿ ಪ್ರಕ್ರಿಯೆ ಪ್ರಾರಂಭವಾದ ಪ್ರಾಥಮಿಕ ದಿನವೆಂದು ಪರಿಗಣಿಸಲಾಗಿದೆ ಎಂದು ಕುಕನೂರಿನ ನಿವೃತ್ತ ಉಪನ್ಯಾಸಕ ಆರ್ ಪಿ ರಾಜೂರು ಹೇಳಿದರು.

ಅವರು ಕುಕನೂರ ಪಟ್ಟಣದ ಅನ್ನದಾನೀಶ್ವರ ಶಾಖಾಮಠದಲ್ಲಿ ಶ್ರೀ ಅ ಪ ಸೌ ಸಹಕಾರಿ ಸಂಘ ಮತ್ತು ಬಸವ ಜನ ಕಲ್ಯಾಣ ಸಾಂಸ್ಕೃತಿಕ ಸಂಸ್ಥೆ ವತಿಯಿಂದ ನಡೆದ ಯುಗಾದಿ ಸಂಭ್ರಮ, 199 ನೇ ಶಿವಾನುಭವ, ಜಗದ್ಗುರು ರೇಣುಕಚಾರ್ಯ ಹಾಗೂ ಅಲ್ಲಮಪ್ರಭು ಜಯಂತಿ ಮತ್ತು ರೈತರ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡುತ್ತಾ ಹಿಂದೂ ಧರ್ಮಗ್ರಂಥಗಳ ಪುರಾಣಗಳ ಪ್ರಕಾರ, ಯುಗಾದಿ ದಿನದಂದು ಬ್ರಹ್ಮದೇವರು ಬ್ರಹ್ಮಾಂಡವನ್ನು ಸೃಷ್ಟಿಸಲು ಪ್ರಾರಂಭಿಸಿದನು ಎಂದು ಹೇಳಲಾಗುತ್ತದೆ. ಅದಾದ ಬಳಿಕ ಬ್ರಹ್ಮನು ಸಮಯ ತಿಳಿಯಲು ವರ್ಷಗಳು, ವಾರಗಳು, ದಿನಗಳು ಮತ್ತು ತಿಂಗಳುಗಳನ್ನು ಸೃಷ್ಟಿಸಿದನು ಆದ್ದರಿಂದ ಭಾರತೀಯರು ಈ ಹಬ್ಬವನ್ನ ಹೊಸ ವರ್ಷವಾಗಿ ಆಚರಣೆ ಮಾಡುತ್ತಾರೆ ಎಂದರು.

ನಂತರ ಮಾತನಾಡಿದ ರೈತ ಮುಖಂಡ ಮಲ್ಲಪ್ಪ ಚಳಮರದ ಅಲ್ಲಮಪ್ರಭು 12ನೆಯ ಶತಮಾನದ ವಚನಕಾರರಲ್ಲಿ ಪ್ರಸಿದ್ಧನಾದವರು. ಶೂನ್ಯಪೀಠವನ್ನು ಅಲಂಕರಿಸಿದ ಮೊದಲಿಗ, ಅತ್ಯಂತ ನೇರ ನಿಷ್ಠುರವಾದಿ. ಅನೇಕ ಶಿವಶರಣ, ಶಿವಶರಣೆಯರಿಗೆ ಭಕ್ತಿ-ವೈರಾಗ್ಯವನ್ನು ಬೋಧಿಸಿ ತನ್ನ ವಚನಗಳ ಮೂಲಕ ಅಂತರಂಗ, ಬಹಿರಂಗಗಳನ್ನು ಶುದ್ಧಗೊಳಿಸಿದವರು, ಶರಣರು ಹಣದ ಶ್ರೀಮಂತಿಕೆಗಿಂತ ಸಂಸ್ಕಾರ ಶ್ರೀಮಂತಿಕೆ ದೊಡ್ಡದು ಎಂದು ಸಾರಿದವರು ಎಂದರು .

ಅಧ್ಯಕ್ಷತೆ ವಹಿಸಿ ಮಾತನಾಡಿದ ವೀರಯ್ಯ ತೋಂಟದಾರ್ಯಮಠ ಜಗದ್ಗುರು ರೇಣುಕಾಚಾರ್ಯರ ತತ್ವಗಳು ಇಂದು ಸಮಾಜದ ಸಮಾನತೆ ಮತ್ತು ಆಧ್ಯಾತ್ಮಿಕ ಪ್ರಗತಿಗೆ ಆಧುನಿಕ ದಾರಿದೀಪದಂತಿವೆ. ವೀರಶೈವರು ಲಿಂಗವಂತರಾಗಿ ಬದುಕಬೇಕು, ಧರ್ಮದ ಆಚರಣೆ ಮಾಡಿಕೊಂಡು ಹೋಗಬೇಕು, ಶರಣರ ಸಂತರ ಜಯಂತಿಗಳ ಆಚರಣೆ ಒಂದು ಜಾತಿ ಅಮುದಾಯಕ್ಕೆ ಸೀಮೀತವಾಗಬಾರದು ಎಂದರು

ಈ ಸಂದರ್ಭದಲ್ಲಿ ಅನಿಲಕುಮಾರ, ಚಿನ್ನಪ್ಪ , ಗೋವಿಂದ ಭಜಂತ್ರಿ, ಪಾಷ್ ಸಾಬ್, ವಿಜಯಕುಮಾರ ಮುದೋಳ ಸಂಗೀತ ಸಂಭ್ರಮವನ್ನ ಅದ್ದೂರಿಯಾಗಿ ನಡೆಸಿದರು ನಂತರ ರೈತರಿಗೆ ಸನ್ಮಾನ ಮಾಡಿ ಬೇವು ಬೆಲ್ಲ ವಿತರಣೆ ಮಾಡಲಾಯಿತು.

ಪೂಜ್ಯ ಮಹಾದೇವ ಸ್ವಾಮೀಜಿ, ಸಂಗಮೇಶ ಕಲ್ಮಠ, ದೇವಪ್ಪ ಸೋಬಾನದ, ಅಂದಪ್ಪ ಇಟಗಿ, ವಜೀರ ಇಟಗಿ, ನಾಗರಾಜ ಚರಂತಿಮಠ, ಪ್ರಶಾಂತ ಎಸ್, ಕಾಳಿ ಲಕ್ಮಣ, ಶಿವುಕುಮಾರ ಭಂಗಿ ಮತ್ತು ಇತರರು ಇದ್ದರು.

## ತುಂಗಭದ್ರ ಕಾಲುವೆ: ಏ.10ರವರೆಗೆ 163 ಸೆಕ್ಷನ್ ಜಾರಿ

ಮಲ್ಲಮ್ಮ ನುಡಿ ವಾರ್ತೆ

ರಾಯಚೂರು ಏಪ್ರೀಲ್.02-ತುಂಗಭದ್ರ ಎಡದಂಡೆ ಕಾಲುವೆ ಮೈಲು ನಂ.47 ರಿಂದ ಸಂಖ್ಯೆ;108ರಲ್ಲಿ 3000 ಕ್ಯೂಸೆಕ್ಸ್ ನಷ್ಟು ನೀರು ಹರಿಸುತ್ತಿರುವ ಹಿನ್ನೆಲೆಯಲ್ಲಿ ನೀರಿನ ನಿರ್ವಹಣೆ ಸಮರ್ಪಕವಾಗಿ ನಿರ್ವಹಿಸಲು ಕಾಲುವೆ ವ್ಯಾಪ್ತಿಯಲ್ಲಿ 100 ಮೀಟರ್ ಅಂತರದ ಪ್ರದೇಶದಲ್ಲಿ ಕಾನೂನು, ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಏ.10ರ ಮಧ್ಯರಾತ್ರಿಯ ವರಿಗೂ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ 2023ರ ಕಲಂ 163ರನ್ವಯ ನಿಷೇಧಾಜ್ಞೆಯನ್ನು ಜಾರಿಗೊಳಿಸಿ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳಾದ ನಿತೀಶ್ ಕೆ., ಅವರು ಆದೇಶ ಹೊರಡಿಸಿದ್ದಾರೆ.

ರಾಯಚೂರು ಹಾಗೂ ಕೊಪ್ಪಳ ಜಿಲ್ಲೆಗಳಿಗೆ ಕುಡಿಯುವ ನೀರು ಹಾಗೂ ಬೆಳೆದು ನಿಂತ ಬೆಳೆಗಳ ಸಂರಕ್ಷಣಾಗಾಗಿ ತುಂಗಭದ್ರಾ ಜಲಾಶಯದಿಂದ ಎಡದಂಡೆ ಮುಖ್ಯ ಕಾಲುವೆಗಳಿಗೆ ನೀರು ಹರಿಸಲಾಗುತ್ತಿದ್ದು, ಈ ಪ್ರದೇಶವನ್ನು ನಿಷೇಧಿಸಲಾಗಿದೆ ಎಂದು ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


## ಆರೈಕೆ ಮತ್ತು ಚೇತರಿಕೆ ಕೇಂದ್ರಗಳ ಸ್ಥಾಪನೆಗೆ ಅರ್ಜಿ ಆಹ್ವಾನ

ರಾಯಚೂರು ಏಪ್ರೀಲ್.02-: ಇಲ್ಲಿನ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಶೋಧನಾ ಸಂಸ್ಥೆ (ರಿಮ್ಸ್) ಯಲ್ಲಿ ಹೊಸ ತುರ್ತು ಆರೈಕೆ ಮತ್ತು ಚೇತರಿಕೆ ಕೇಂದ್ರಗಳು (Emergency Care and Recovery Centres) ಅರಂಭಿಸಲು ಅರ್ಹ ಹಾಗೂ ಆಸಕ್ತಿಯುಳ್ಳ ಎನ್‌ಜಿಒ ಸಂಸ್ಥೆಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಈ ಘಟಕವನ್ನು ನಿರ್ವಹಿಸಲು ಆಸಕ್ತಿಯಿರುವ ಸಂಸ್ಥೆಗಳು ಅರ್ಜಿಯನ್ನು ವೆಬ್‌ಸೈಟ್ ವಿಳಾಸ: https://kppp.karntaka.gov.in ನಲ್ಲಿ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ ಅಥವಾ ಜಿಲ್ಲಾ ಕುಷ್ಠರೋಗ ನಿವಾರಣ ಕಾರ್ಯಾಲಯ ರಾಯಚೂರು ವಿಭಾಗಕ್ಕೆ ಭೇಟಿ ನೀಡಬಹುದಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಯುಗಾದಿ ಸೃಷ್ಟಿಯ ಆರಂಭದ ಸಂಕೇತ-ಕರಿಶಂಕರಿ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಎ.2-ಯುಗಾದಿ ಸೃಷ್ಠಿಯ ಆರಂಭದ ಸಂಕೇತವಾಗಿದ್ದು, ಧಾರ್ಮಿಕ ದೃಷ್ಟಿಯಿಂದ ಯುಗಾದಿಗೆ ವಿಶೇಷ ಮಹತ್ವವಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಜಿಲ್ಲಾಧ್ಯಕ್ಷ ಶ್ರೀಶೈಲ ಕರಿಶಂಕರಿ ಹೇಳಿದ್ದಾರೆ.

ಯುಗಾದಿ ಪ್ರಯುಕ್ತ ಸಮೀಪದ ಶಿರೂರ ಪಟ್ಟಣದಲ್ಲಿ ಪ್ರಗತಿಪರ ರೈತ ಬಸವರಾಜ ಬಿಲ್ಲಾರ ತೋಟದಲ್ಲಿ ಈಚೆಗೆ ಹಮ್ಮಿಕೊಳ್ಳಲಾಗಿದ್ದ ಯುಗಾದಿ ಉತ್ಸವ, ಸಾಹಿತಿಗಳಿಗೆ ಸನ್ಮಾನ ಮತ್ತು ವೃಕ್ಷ ಪೂಜೆ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಮಾತನಾಡಿದ ಅವರು, ಭಾರತೀಯ ಸಂಸ್ಕೃತಿಯಲ್ಲಿ ಹೆಚ್ಚು ಮಹತ್ವ ಪಡೆದಿರುವ ಯುಗಾದಿ ಹಬ್ಬದ ವಿಶೇಷತೆಯ ಬಗ್ಗೆ ಯುವ ಜನಾಂಗ ತಿಳಿಯಬೇಕಿದೆ ಎಂದರು.

ಸಾಹಿತಿಗಳು ಪ್ರಕೃತಿ, ಪರಿಸರವನ್ನು ಪ್ರೀತಿಸಿ ಗಟ್ಟಿತನದ ಸಾಹಿತ್ಯ ರಚನೆಗೆ ಮುಂದಾಗಬೇಕು. ಯುವಕರು ಸಾಹಿತ್ಯದ ಅಭಿರುಚಿ ಬೆಳೆಸಿಕೊಳ್ಳಬೇಕು ಎಂದು ಕರಿಶಂಕರಿ ಹೇಳಿದರು.

ಸಾಹಿತಿ ಮಲ್ಲಿಕಾರ್ಜುನ ಶೆಲ್ಲಿಕೇರಿ ಮಾತನಾಡಿ, ಲೇಖಕ ಅವಲೋಕನ ಮಾಡುವ ಕಲ್ಪನೆಯೊಂದಿಗೆ ಸೃಜನಶೀಲತೆ ಬೆಳೆಸಿಕೊಂಡು ಸಾಹಿತ್ಯ ರಚಿಸುವ ಕಲೆಯನ್ನು ರೂಢಿಸಿಕೊಳ್ಳಬೇಕು ಎಂದರು. ಅತಿಥಿಯಾಗಿದ್ದ ನಿವೃತ್ತ ಕಸ್ಟಮ್ ಅಧಿಕಾರಿ ಆರ್. ಎಸ್.ಪಾಟೀಲ ಮಾತನಾಡಿ, ಬಿಲ್ಲಾರ ಕುಟುಂಬ ಯುಗಾದಿ ಪ್ರಯುಕ್ತ ಇಂತಹ ಕಾರ್ಯಕ್ರಮ ಹಮ್ಮಿಕೊಂಡು ಯುಗಾದಿ ಹಬ್ಬದ ವೈಶಿಷ್ಟ್ಯತೆಯನ್ನು ತಿಳಿಸುವ ಕೆಲಸ ಮಾಡಿದೆ ಎಂದು ಹೇಳಿದರು.

ನಂತರ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಎಲ್ಲರೂ ಬೇವು, ಬೆಲ್ಲ ಪರಸ್ಪರ ವಿನಿಮಯ ಮಾಡಿಕೊಂಡರು. ಕರ್ನಾಟಕ ಸಾಹಿತ್ಯ ಅಕಾಡೆಮಿ ಪುಸ್ತಕ ಪ್ರಶಸ್ತಿ ವಿಜೇತ ಮಲ್ಲಿಕಾರ್ಜುನ ಶೆಲ್ಲಿಕೇರಿ, ಕಥೆಗಾರ ಲಕ್ಷ್ಮಣ ಬಾದಾಮಿ ಅವರನ್ನು ಸನ್ಮಾನಿಸಲಾಯಿತು.

ಸಿ.ಎಸ್.ಆಡಿನ, ಕಸಾಪ ಜಿಲ್ಲಾ ಅಧ್ಯಕ್ಷ ಶಿವಾನಂದ ಶೆಲ್ಲಿಕೇರಿ, ಬಸವರಾಜ ಬಿಲ್ಲಾರ ಮಳಿಯಪ್ಪ ಗಾಣಿಗೇರ, ಕಲ್ಲಪ್ಪ ಭಗವತಿ ವೇದಿಕೆಯಲ್ಲಿದ್ದರು.

# ಪೋಲಿಸ್ ಧ್ವಜ ದಿನಾಚರಣೆ
## ಶಿಸ್ತು, ಶ್ರದ್ಧೆ, ಕರ್ತವ್ಯನಿಷ್ಠೆ ಬೆಳೆಸಿಕೊಳ್ಳಿ-ಗುಡ್ಡಳ್ಳಿ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಎ.2-ಕರ್ತವ್ಯದಲ್ಲಿ ನಿಷ್ಠೆ, ಶಿಸ್ತು, ಮತ್ತು ಶ್ರದ್ಧೆಯನ್ನು ಅಳವಡಿಸಿಕೊಂಡರೆ ಎಲ್ಲ ಕಾರ್ಯಗಳೂ ಸುಗಮಗೊಳ್ಳುತ್ತವೆ ಎಂದು ನಿವೃತ್ತ ಎಎಸ್ಐ ಡಿ.ಸಿ.ಗುಡ್ಡಳ್ಳಿ ಹೇಳಿದರು.

ನವನಗರದ ಜಿಲ್ಲಾ ಪೊಲೀಸ್ ಕವಾಯತ್ ಮೈದಾನದಲ್ಲಿ ಬುಧವಾರ ಆಯೋಜಿಸಲಾಗಿದ್ದ ಪೊಲೀಸ್ ಧ್ವಜ ದಿನಾಚರಣೆ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಮಾತನಾಡಿದ ಅವರು, ಪೊಲೀಸ್ ಇಲಾಖೆ ಒಂದು ವಿಶ್ವವಿದ್ಯಾಲಯವಿದ್ದಂತೆ, ಈ ಸಂಸ್ಥೆಯಲ್ಲಿಯೂ ಅನೇಕ ವಿಭಾಗಗಳು ಕಾರ್ಯನಿರ್ವಹಿಸುತ್ತಿದ್ದು ಯಾವುದೇ ತೊಂದರೆ ಉಂಟಾಗದಂತೆ ನೋಡಿಕೊಳ್ಳುವುದು, ರಕ್ಷಣೆ ಒದಗಿಸುವುದು ಹಾಗೂ ಘಟನೆಯ ಸತ್ಯಾಸತ್ಯತೆಯನ್ನು ಪತ್ತೆ ಮಾಡುವುದು ಪೊಲೀಸರ ಮುಖ್ಯ ಕರ್ತವ್ಯಗಳಾಗಿವೆ ಎಂದರು.

ಜಿಲ್ಲೆಯಲ್ಲಿ ಪೋಲಿಸ್ ಸಿಬ್ಬಂದಿಗಳ ಕೊರತೆಯಿದ್ದರೂ ಅಧಿಕಾರಿಗಳು ನಿರಂತರವಾಗಿ ಶ್ರಮಿಸಿ ಶಿಷ್ಟಾಚಾರವನ್ನು ಕಾಪಾಡಬೇಕು. ಜೊತೆಗೆ ಬಾಗಲಕೋಟೆ ಜಿಲ್ಲೆಗೆ ಹೊರಗಿನಿಂದ ಬಂದ ಅಧಿಕಾರಿಗಳಿಗೆ ಸೂಕ್ತ ವಾಸ್ತವ ವ್ಯವಸ್ಥೆ ಮಾಡಬೇಕು. ನಿವೃತ್ತ ಪೊಲೀಸರಿಗಾಗಿ ಸಭಾಭವನ ನಿರ್ಮಾಣ, ಅವರ ವೈದ್ಯಕೀಯ ವೆಚ್ಚವನ್ನು 2 ಲಕ್ಷ ರೂ.ಗಳಿಗೆ ಹೆಚ್ಚಿಸುವುದು, ಅವರ ಕುಟುಂಬಗಳಿಗೆ ಶೈಕ್ಷಣಿಕ ಸಹಾಯ ಒದಗಿಸುವುದು ಅಗತ್ಯವಾಗಿದೆ ಎಂದು ಗುಡ್ಡಳ್ಳಿ ಅಭಿಪ್ರಾಯಪಟ್ಟರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಮರನಾಥ ರೆಡ್ಡಿ ವರದಿ ವಾಚಿಸಿ ಮಾತನಾಡಿ, ಪೋಲೀಸ್ ಇಲಾಖೆಯ ವೈದ್ಯಕೀಯ ಸಹಾಯ, ಶಿಕ್ಷಣ, ಕರ್ತವ್ಯದಲ್ಲಿ ಮರಣ ಹೊಂದಿದ ಕುಟುಂಬಗಳಿಗೆ ಆರ್ಥಿಕ ನೆರವು, ಪೊಲೀಸ್ ಸಮುದಾಯ ಭವನ ನಿರ್ಮಾಣ ಹಾಗೂ ಕ್ಯಾನ್ಸರ್ ಕುರಿತು ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಖಾಲಿ ಇರುವ ಪೊಲೀಸ್ ಇಲಾಖೆಯ ಪ್ರದೇಶದಲ್ಲಿ 20 ಸಾವಿರಕ್ಕೂ ಹೆಚ್ಚು ಗಿಡಗಳನ್ನು ನೆಡಲಾಗಿದೆ ಎಂದು ತಿಳಿಸಿದರು. ಇದೇ ವೇಳೆ 17 ನಿವೃತ್ತ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗಳನ್ನು ಸನ್ಮಾನಿಸಲಾಯಿತು. ಪರೇಡ್ ಕಮಾಂಡರ್ ಸದಾಶಿವ ವನಜಂಕರ ನೇತೃತ್ವದಲ್ಲಿ ಆರು ತಂಡಗಳು ಪಥಸಂಚಲನದಲ್ಲಿ ಪಾಲ್ಗೊಂಡಿದ್ದು, ಇದರಲ್ಲಿ ಒಂದು ಮಹಿಳಾ ತಂಡವೂ ಸೇರಿತ್ತು.

ಕಾರ್ಯಕ್ರಮದಲ್ಲಿ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಪ್ರಸನ್ನ ಬಸವಂತರಾಯ ದೇಸಾಯಿ ಸೇರಿ ನಿವೃತ್ತ ಪೊಲೀಸ್ ಅಧಿಕಾರಿಗಳು ಹಾಗೂ ಪೊಲೀಸ್ ಸಿಬ್ಬಂದಿ

# ಎಂಕಾಂ ಕೀರ್ತಿ ಕಿತ್ತಲಿ ಪ್ರಥಮ ರ್‍ಯಾಂಕ್



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಎ.2-ಬೆಳಗಾವಿ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ 2023-24 ಶೈಕ್ಷಣಿಕ ವರ್ಷಕ್ಕೆ ಎಂಕಾಂ ವಿಭಾಗದಲ್ಲಿ ಬಾಗಲಕೋಟೆಯ ಬಸವೇಶ್ವರ ವಾಣಿಜ್ಯ ಮಹಾವಿದ್ಯಾಲಯದ ವಿದ್ಯಾರ್ಥಿ ಕೀರ್ತಿ ಕಿತ್ತಲಿ ಪ್ರಥಮ ರ್‍ಯಾಂಕ್ ಪಡೆದಿದ್ದಾಳೆ.

ಪ್ರಥಮ ರಾಂಕ್ ಪಡೆದು ಸಂಘಕ್ಕೆ ಕೀರ್ತಿ ತಂದಿರುವ ಕೀರ್ತಿ ಕಿತ್ತಲಿ ಅವರನ್ನು ಬಿ.ವಿ.ವಿ.ಸಂಘದ ಕಾರ್ಯಾಧ್ಯಕ್ಷ ಡಾ.ವೀರಣ್ಣ ಚರಂತಿಮಠ, ಗೌರವ ಕಾರ್ಯದರ್ಶಿ ಮಹೇಶ ಅಥಣಿ, ಕಾಲೇಜು ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಗುರುಬಸವ ಸೂಳಿಭಾವಿ, ಮಹಾವಿದ್ಯಾಲಯದ ಪ್ರಾಚಾರ್ಯ ಡಾ.ಜಗನ್ನಾಥ ಚವ್ಹಾಣ ಹಾಗೂ ಮಹಾವಿದ್ಯಾಲಯದ ಬೋಧಕ ಬೋಧಕೇತರ ಸಿಬ್ಬಂದಿ ಅಭಿನಂದಿಸಿದ್ದಾರೆ.

# ಉಚಿತ ಕಂಪ್ಯೂಟರ ತರಬೇತಿ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಎ.2-ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ನಮ್ಮ ಕೆನರಾ ಬ್ಯಾಂಕ್ ದೇಶಪಾಂಡೆ ಆರ್‌ಸೆಟಿ ತರಬೇತಿ ಸಂಸ್ಥೆಯಲ್ಲಿ 18 ರಿಂದ 45 ವಯಸ್ಸಿನ ಗ್ರಾಮೀಣ ಭಾಗದ ನಿರುದ್ಯೋಗಿ ಯುವಕ ಯುವತಿಯರಿಗಾಗಿ ಮೇ 2 ರಿಂದ 30 ದಿನಗಳ ಉಚಿತ ಕಂಪ್ಯೂಟರ ಅಕೌಂಟಿಂಗ್ (ಟ್ಯಾಲಿ) ತರಬೇತಿ ಹಾಗೂ ಯುವತಿಯರಿಗಾಗಿ ಮೇ 5 ರಿಂದ 30 ದಿನಗಳ ಉಚಿತ ಮಹಿಳಾ ಹೊಲಿಗೆ ತರಬೇತಿ ನೀಡಲು ಅರ್ಜಿ ಆಹ್ವಾನಿಸಲಾಗಿದೆ.

ತರಬೇತಿಗೆ ಹೆಸರು ನೋಂದಾಯಿಸಲು ಕೊನೆಯ ದಿನ ಎಪ್ರೀಲ್ 30 ಆಗಿದೆ. ಹೆಚ್ಚಿನ ಮಾಹಿತಿಗಾಗಿ ನಿರ್ದೇಶಕರು, ಕೆನರಾ ಬ್ಯಾಂಕ್ ದೇಶಪಾಂಡೆ ಆರ್‌ಸೆಟ್ ಸಂಸ್ಥೆ, ಹಳಿಯಾಳ, ಉತ್ತರ ಕನ್ನಡ ಜಿಲ್ಲೆ ಮೊಬೈಲ್ ನಂ.9980510717, 9483485489ಗೆ ಸಂಪರ್ಕಿಸುವಂತೆ ಆರ್‌ಸೆಟ್ ಸಂಸ್ಥೆಯ ನಿರ್ದೇಶಕ ಪ್ರಶಾಂಕ ಬಡ್ಡಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಿದ್ಯುತ್ ಕೇಂದ್ರದ ಉದ್ಘಾಟನೆ ಇಂದು

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಎ.2-ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಬಾಗಲಕೋಟೆ ಮತ್ತು ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ಇವರ ಸಹಯೋಗದಲ್ಲಿ ಎ.3 ಗುರುವಾರ ಮಧ್ಯಾಹ್ನ 3 ಗಂಟೆಗೆ ನೂತನವಾಗಿ ನಿರ್ಮಿಸಲಾದ ಉದಗಟ್ಟಿ-ಶಾರದಾಳ 110/11 ಕೆ ವಿ ವಿದ್ಯುತ್ ಉಪ ಕೇಂದ್ರದ ಉದ್ಘಾಟನೆ ನಡೆಯಲಿದೆ.

ಶಾಸಕ ಜೆ.ಟಿ.ಪಾಟೀಲ ಅಧ್ಯಕ್ಷತೆಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪುರ, ಇಂಧನ ಸಚಿವ ಕೆ.ಜೆ.ಜಾರ್ಜ್ ಪಾಲ್ಗೊಳಲಿದ್ದಾರೆ.

## ಐದನೇ ದಿನವೂ ಎಸ್ಸೆಸ್ಸೆಲ್ಸಿ ಪರೀಕ್ಷೆ ಸುಗಮ; 1,273 ವಿದ್ಯಾರ್ಥಿಗಳು ಗೈರು

ಮಲ್ಲಮ್ಮ ನುಡಿ ವಾರ್ತೆ

ರಾಯಚೂರು ಏಪ್ರೀಲ್.02 ರಾಯಚೂರು ಜಿಲ್ಲೆಯಲ್ಲಿ ಏಪ್ರೀಲ್ 2ರಂದು ಜಿಲ್ಲೆಯ 97 ಕೇಂದ್ರಗಳಲ್ಲಿ ವಿಜ್ಞಾನ ವಿಷಯದ ಪರೀಕ್ಷೆ ಸುಗಮವಾಗಿ ನಡೆಯಿತು.

ದೇವದುರ್ಗ, ಲಿಂಗಸುಗೂರ, ಮಾನ್ವಿ, ರಾಯಚೂರು ಹಾಗೂ ಸಿಂಧನೂರು ಸೇರಿ ಜಿಲ್ಲೆಯಲ್ಲಿ ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದ ಒಟ್ಟು 31,956 ವಿದ್ಯಾರ್ಥಿಗಳ ಪೈಕಿ 30,683 ವಿದ್ಯಾರ್ಥಿಗಳು ಹಾಜರಾಗಿದ್ದು, 1,273 ವಿದ್ಯಾರ್ಥಿಗಳು ಗೈರಾದರು. ಪರೀಕ್ಷಾ ಕೇಂದ್ರಗಳ ಸುತ್ತಮುತ್ತ 200 ಮೀಟರ್ ವ್ಯಾಪ್ತಿಯ ಪ್ರದೇಶವನ್ನು ನಿಷೇಧಿತವೆಂದು ಘೋಷಿಸಲಾಗಿತ್ತು.

ಜಿಲ್ಲೆಯ ದೇವದುರ್ಗ ತಾಲೂಕಿನಲ್ಲಿ ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದ 4,399 ವಿದ್ಯಾರ್ಥಿಗಳ ಪೈಕಿ 4,280 ವಿದ್ಯಾರ್ಥಿಗಳು ಹಾಜರಾಗಿದ್ದು, 119 ವಿದ್ಯಾರ್ಥಿಗಳು ಗೈರಾಗಿದ್ದಾರೆ. ಲಿಂಗಸೂಗೂರು ತಾಲೂಕಿನಲ್ಲಿ ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದ 6,609 ವಿದ್ಯಾರ್ಥಿಗಳ ಪೈಕಿ 6,386 ವಿದ್ಯಾರ್ಥಿಗಳು ಹಾಜರಾಗಿದ್ದು, 223 ವಿದ್ಯಾರ್ಥಿಗಳು ಗೈರಾಗಿದ್ದಾರೆ. ಮಾನ್ವಿ ತಾಲೂಕಿನಲ್ಲಿ ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದ 5,898 ವಿದ್ಯಾರ್ಥಿಗಳ ಪೈಕಿ 5,584 ವಿದ್ಯಾರ್ಥಿಗಳು ಹಾಜರಾಗಿದ್ದು, 314 ವಿದ್ಯಾರ್ಥಿಗಳು ಗೈರಾಗಿದ್ದಾರೆ.

# ದೇವರ ದಾಸಿಮಯ್ಯ ಜಯಂತಿ ಕಾರ್ಯಕ್ರಮ
## ಸಂಸ್ಕೃತಿಯ ಶ್ರೀಮಂತಿಕೆಗೆ ಶರಣರ ಕೊಡುಗೆ ಅಪಾರ:ಅಶೋಕ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಎ.2-ಕನ್ನಡ ನಾಡಿನ ಆಚಾರ ವಿಚಾರ, ಸಂಸ್ಕೃತಿಗೆ ಶರಣರ ಕೊಡುಗೆ ಅಪಾರವಾಗಿದೆ. ಕಾಯಕ ತತ್ವ, ದಾಸೋಹ ತತ್ವಗಳ ಜೊತೆಗೆ ಅನೇಕ ಸಾಮಾಜಿಕ ಚಿಂತನೆಗಳುಳ್ಳ ವಚನಗಳ ಮೂಲಕ ಶರಣ ಸಂಸ್ಕೃತಿ ಬೆಳೆದು ಬಂದದ್ದು, ಅಂತಹ ಶರಣ ಸಂಸ್ಕೃತಿಯ ಆದ್ಯ ವಚನಕಾರ ದೇವರ ದಾಸಿಮಯ್ಯನವರು ಎಂದು ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ ಹೇಳಿದರು. ಜಿಲ್ಲಾ ಪಂಚಾಯತ್ ಅಡಿಟೋರಿಯಂನಲ್ಲಿ ಬುಧವಾರ ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬಾಗಲಕೋಟೆ ಇವರ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಲಾಗಿದ್ದ ಆದ್ಯ ಶರಣ ದೇವರ ದಾಸಿಮಯ್ಯನವರ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಇಂದು ನಾಡಿನ ಪ್ರತಿ ಮನೆಮನೆಯಲ್ಲೂ ಪ್ರತಿನಿತ್ಯ ನಡೆಯುತ್ತಿರುವ ಪೂಜೆ, ಪುನಸ್ಕಾರಗಳು, ದಾನ ಧರ್ಮ, ದಾಸೋಹಗಳ ಹಿಂದೆ ನಮ್ಮ ಪೂರ್ವಜರು ಹಾಗೂ 12ನೇ ಶತಮಾನದ ಶರಣರ ವಚನಗಳ ಆದರ್ಶವಡಗಿದೆ ಎಂದರು.

ಶರಣರಲ್ಲಿಯೇ ಅಗ್ರಸ್ಥಾನ ಪಡೆದುಕೊಂಡಂತ ಹಾಗೂ ಪ್ರಥಮ ವಚನಕಾರರಾದ ದೇವರ ದಾಸಿಮಯ್ಯನವರು ಶರಣ ಶ್ರೇಷ್ಠರಾಗಿದ್ದು, ಭಕ್ತಿಯ ಮೂಲಕ ತತ್ವಶಾಸ್ತ್ರ ಹೇಳಿದಂತಹವರು. ಅಂತಹ ಶರಣರನ್ನು ನಾವು ಒಂದು ಜನಾಂಗಕ್ಕೆ ಹಾಗೂ ಜಾತಿಗೆ ಸೀಮಿತಗೊಳಿಸದೆ ವಿಶ್ವಮಾನವರನ್ನಾಗಿ ಗುರುತಿಸಬೇಕಾಗಿದೆ ಎಂದು ಅಶೋಕ ಹೇಳಿದರು.

ಉಪನ್ಯಾಸಕರಾಗಿ ಆಗಮಿಸಿದ್ದ ಕರ್ನಾಟಕ ಸಾಹಿತ್ಯ ಅಕಾಡೆಮಿ ಸದಸ್ಯರಾದ ಮಹದೇವ ಬಸರಕೋಡ, ಮದುವೆಯಾಗಿ ಮರುದಿನವೇ ಡೈವೋರ್ಸ್ ಕೇಳುವ ಈ ಕಾಲಕ್ಕೆ ದಾಸಿಮಯ್ಯನವರ ದಾಂಪತ್ಯ ತತ್ವ ಆದರ್ಶನೀಯ. ಆ ತತ್ವವನ್ನು ಜಗತ್ತಿಗೆ ತಿಳಿಸಿ ಜೀವನದಲ್ಲಿ ಅಳವಡಿಸಿಕೊಳ್ಳಬೇಕಾಗಿದೆ. ತಮ್ಮ ವಚನಗಳ ಮೂಲಕ ಹಸಿವು, ಕೆಳಸ್ತರದ ನೋವು ಮುಂತಾದವುಗಳ ಕುರಿತು ವಿವರಿಸಿದ ಉದಾತ್ತ ಚಿಂತನೆಗಳ ದಾಸಿಮಯ್ಯನವರನ್ನು ಒಬ್ಬ ದೇವಪುರುಷನಂತೆ ಕಾಣದೇ, ಒಬ್ಬ ಚಾರಿತ್ರಿಕ ಪುರುಷನಂತೆ ಕಾಣಬೇಕಾಗಿದೆ' ಎಂದರು.

ಇನ್ನೊರ್ವ ಉಪನ್ಯಾಸಕ ಶಿವಶಂಕರ ಮುತ್ತಗಿ, ಸಂಸ್ಕೃತವನ್ನು ದೇವ ಭಾಷೆಯನ್ನಾಗಿ ಕಾಣುತ್ತಿದ್ದ ಸಮಯದಲ್ಲಿ ಬುದ್ಧ, ಮಹಾವೀರ, ದಾಸಿಮಯ್ಯನಂತ ಮಹನೀಯರು ತಮ್ಮ ತಮ್ಮ ಮೂಲ ಭಾಷೆಗಳಲ್ಲಿಯೇ ತಮ್ಮ ಜನಾಂಗವನ್ನು ಕಟ್ಟಿ ಸುಧಾರಿಸಿದರು. ಬಸವಣ್ಣನವರ ವಿಚಾರಗಳಿಗೂ ಕೂಡ ಅಡಿಪಾಯ ಹಾಕಿಕೊಟ್ಟದ್ದು ದಾಸಿಮಯ್ಯನವರ ವಚನಗಳೇ ಎಂಬುದು ವಿಶೇಷ ಎಂದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕರ್ಣಕುಮಾರ ಜೈನಾಪುರ ಸ್ವಾಗತಿಸಿ, ವಂದಿಸಿದರು. ಶಂಕರಲಿಂಗ ದೇಸಾಯಿ ನಿರೂಪಿಸಿದರು. ಮಂಜುಳಾ ಸಂಬಾಳಮಠ ಸುಗಮ ಸಂಗೀತ ಹಾಡಿದರು. ರಾಜ್ಯ ನೇಕಾರರ ಸಂಘದ ಮಾಜಿ ಅಧ್ಯಕ್ಷ ಡಾ.ಎಮ್ ಎಸ್ ದಡ್ಡೇನವರ, ಬಿಡಿಸಿ ಸಿ ಬ್ಯಾಂಕ್ ಉಪಾಧ್ಯಕ್ಷ ಮುರುಗೇಶ ಕಡ್ಲಿಮಟ್ಟಿ, ಅಪೆಕ್ಸ್

# ಜಾನಪದ ತತ್ವಪದಗಳಿಂದ ಹಳ್ಳಿಯ ಮೆರುಗು ಹೆಚ್ಚಳ : ಸಾಹಿತಿ ರುಚಿ ಪರಸನಹಳ್ಳಿ ಅಭಿಮತ



ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ : ಶಾಂತಿನಿಕೇತನ ಗ್ರಾಮೀಣ ಅಭಿವೃದ್ಧಿ ಸಂಸ್ಥೆ ರಿ ಯಾದಗಿರಿ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಯಾದಗಿರಿ ಇವರ ಸಹಯೋಗದಲ್ಲಿ ಯಾದಗಿರಿ ಸಮೀಪದ ಪಗಲಾಪುರ ಗ್ರಾಮದಲ್ಲಿ ಆಯೋಜಿಸಿದ್ದ ಗಿರಿ ಜಿಲ್ಲೆಯ ಜಾನಪದ ತತ್ವಪದಗಳ ಸಂಗೀತೋತ್ಸವ ಕಾರ್ಯಕ್ರಮವನ್ನು ಸಾಹಿತಿ ರುಚಿ ಪರಸನಹಳ್ಳಿ ಉದ್ಘಾಟಿಸಿ ಮಾತನಾಡಿದರು.

ಗ್ರಾಮೀಣ ಪ್ರದೇಶದ ಜನರು ಪೂರ್ವ ಕಾಲದಿಂದಲೂ ಜಾನಪದ ತತ್ವಪದಗಳ ಅವರು ಮಾಡುವ ಕಾಯಕ ಅಂದರೆ ಅಂತಿಪದಗಳು. ರೈತರ ಪದಗಳು ನಿರಂತರವಾಗಿ ಹಾಡುತ್ತಾ ತಮ್ಮ ಬೆಸರವನ್ನು ಕಳೆಯುತ್ತಿದ್ದರು ಅಂತಹ ಗ್ರಾಮೀಣ ಹಾಡುಗಳು ಇತ್ತಿಚೆಗೆ ಕಡಿಮೆಯಾಗುತ್ತಿವೆ ಆದ್ದರಿಂದಲೇ ಈ ಶಾಂತಿನಿಕೇತನ ಗ್ರಾಮೀಣ ಅಭಿವೃದ್ಧಿ ಸಂಸ್ಥೆ ಯಾದಗಿರಿ ಕೈಗೊಳ್ಳುವ ಮೂಲಕ ಶ್ರಮಿಸುತ್ತಿರುವ ಕಾರ್ಯ ನಿಜಕ್ಕೂ ಶ್ಲಾಘನೀಯ ಎಂದು ಹರ್ಷ ವ್ಯಕ್ತಪಡಿಸಿದರು

ದಿವ್ಯ ಸಾನ್ನಿಧ್ಯ ವಹಿಸಿದ್ದ ವೀರಭಾರತಿ ಪ್ರತಿಷ್ಠಾನ ಅಧ್ಯಕ್ಷರಾದ ವೈಜನಾಥ ಹಿರೇಮಠ ಮಾತನಾಡಿ ಗ್ರಾಮೀಣ ಪ್ರದೇಶದ ಜನರು ಜಾನಪದ ತತ್ವಪದಗಳ ಸಾಂಸ್ಕೃತಿಕ ಸಂಗೀತೋತ್ಸವ ಕಾರ್ಯಕ್ರಮವನ್ನು ಶಾಂತಿನಿಕೇತನ ಗ್ರಾಮೀಣ ಅಭಿವೃದ್ಧಿ ಸಂಸ್ಥೆ ಯಾದಗಿರಿ ಇವರು ಗ್ರಾಮೀಣ ಪ್ರದೇಶದಲ್ಲಿ ಇಂತಹ ಜಾನಪದ ತತ್ವಪದಗಳು ಹಾಡುವ ಕಲಾವಿದರ ತಂಡಗಳು ಕರೆತಂದು ಹಾಡಿಸುವ ಕಾರ್ಯವನ್ನು ಗಮನಿಸಿದಾಗ ನಮ್ಮ ಪುರಾತನ ಹಾಡುಗಳಿಗೆ ಮೂರು ಜೀವ ಕೊಟ್ಟಂತಾಗಿದೆ ಎಂದು ಬಣ್ಣಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಮಂಗಲ ಭಜನ ಇವರು ಮಾತನಾಡಿ ನಮ್ಮ ಸಂಸ್ಥೆಯು ಇಂತಹ ಹತ್ತು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಜಾನಪದ ತತ್ವಪದಗಳ ಹಾಡು ನಿರಂತರವಾಗಿ ನಡೆಯುವಂತೆ ಮಾಡುತ್ತೇವೆ ಎಂದು ಹೇಳಿದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ದೇವಿಂದ್ರಪ್ಪ ಎಸ್ ಕರಡಕಲ್ ಶಿಕ್ಷಕರು ಸಾಹಿತಿಗಳು, ಡಾ.ವೆಂಕಟೇಶ್ವರ ಕೆ ಕಲಾಲ್ ಮತ್ತು ಅಮರಗುಂಡಪ್ಪ ಹೂಗಾರ ಸೇರಿದಂತೆ ಅನೇಕರು ಮಾತನಾಡಿದರು.

ಜಾನಪದ ತತ್ವಪದಗಳ ಸರ್ದಾರ್ ಎಂದು ಪ್ರಖ್ಯಾತಿಯನ್ನು ಗಳಿಸಿರುವ ಬಂಗಾರೆಪ್ಪ ಹೊಸಮನಿ ಬಸವಂತಪೂರ ಹಾಗೂ ಹಾಸ್ಯ ಕಲಾವಿದರಾದ ಅಮರಗುಂಡಪ್ಪ ಹೂಗಾರ ಒಂಟಿ ಸವಾರಿ ಸಿಂಧನೂರು ಮತ್ತು ಸಾಬಣ್ಣ ಪಗಲಾಪೂರ ಇವರಿಂದ ಜಾನಪದ ತತ್ವಪದಗಳ ಹಾಡು ಹೇಳಿದರು ಜೊತೆಗೆ ಶಾಂತಿನಿಕೇತನ ಕಲಾ ತಂಡಗಳು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ಹಳ್ಳಿಯ ಸೋಗಡು ಜಾನಪದ ಹಾಡು ಹೇಳಿದರು.

ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಿದ್ದಯ್ಯ ಮಠ ನಿವೃತ್ತ ಉಪನ್ಯಾಸಕರು ರಂಗಪೇಠ, ಕವಿತಾ ಜುಗೇರಿ, ಅಮರಗುಂಡಪ್ಪ ಹೂಗಾರ ಒಂಟಿ ಸವಾರಿ, ಬಂಗಾರೆಪ್ಪ ಹೊಸಮನಿ ಬಸವಂತಪೂರ, ನಿರ್ಮಲಾ ಗೋಪಾಳಪೂರ, ಚಂದ್ರಶೇಖರಯ್ಯ ಹಿರೇಮಠ ಪರಸನಹಳ್ಳಿ, ರಮಾದೇವಿ ಕಾವಲಿ ಸೇರಿದಂತೆ ಸಾಧಕರಿಗೆ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಿ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಸಾಯಪ್ಪ ಮುನಿ ಇಟ್ಕಲ್ ಮುಖ್ಯ ಗುರುಗಳು ಶೇಟ್ಟಕೇರಾ, ಪಗಲಾಪೂರ ಗ್ರಾಮದ ಗಣ್ಯರು ,ಹಿರಿಯರು ಅನೇಕರು ಉಪಸ್ಥಿತರಿದ್ದರು

ತಬಲಾ ಮತ್ತು ಸಂಗೀತ ಹಾರ್ಮೋನಿಯಂ ಸೇವೆಯನ್ನು ಶರಣು ಕೊಲ್ಲುಂದ್, ಮಹೇಶ್ ಶಿರವಾಳ ಮತ್ತು ವೀರಭದ್ರ ವಿಶ್ವಕರ್ಮ ಇವರಿಂದ ನಡೆಯಿತು

ಕಾರ್ಯಕ್ರಮವನ್ನು ನಿರ್ಮಲಾ ಗೋಪಾಳಪೂರ ಸ್ವಾಗತಿಸಿದರೇ, ಖ್ಯಾತ ನಿರೂಪಕಿ. ರೇಣುಕಾ ಎಂ ಕುಂಬಾರಹಳ್ಳಿ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

# ಯತ್ನಾಳ ಉಚ್ಚಾಟನೆ ಖಂಡಿಸಿ ಅಭಿಮಾನಿಗಳಿಂದ ಬೃಹತ್ ಪ್ರತಿಭಟನೆ
## ಯತ್ನಾಳ ಉಚ್ಚಾಟನೆ,ಹಿಂದೂ ಸಮಾಜದ ಉಚ್ಚಾಟನೆಯಾಗಿದೆ




ಮಲ್ಲಮ್ಮ ನುಡಿ ವಾರ್ತೆ

ತಾಳಿಕೋಟಿ: ಹಿಂದುಗಳ ರಕ್ಷಣೆ ಹಾಗೂ ಬೆಳವಣಿಗೆಗಾಗಿ ಸದಾ ಧ್ವನಿಯತ್ತುವ ಹಿಂದೂ ಹುಲಿ ಬಸನಗೌಡ ಪಾಟೀಲ ಯತ್ನಾಳರನ್ನು ಪಕ್ಷದಿಂದ ಉಚ್ಚಾಟಿಸಿ ಯಡಿಯೂರಪ್ಪ ಹಾಗೂ ವಿಜಯೇಂದ್ರ ಬಹುದೊಡ್ಡ ತಪ್ಪು ಹೆಜ್ಜೆಯನ್ನಿಟ್ಟಿದ್ದಾರೆ, ಯತ್ನಾಳರ ಉಚ್ಚಾಟನೆ ಅಖಂಡ ಹಿಂದೂ ಸಮಾಜದ ಉಚ್ಚಾಟನೆಗೆ ಸಮವಾಗಿದೆ ಇದನ್ನು ಪಕ್ಷದ ವರಿಷ್ಠರು ಮರುಪರಿಶೀಲಿಸಬೇಕು ಎಂದು ಸ್ವಾಮಿ ವಿವೇಕಾನಂದ ಸೇನೆಯ ಅಧ್ಯಕ್ಷ ರಾಘವ ಅಣ್ಣಿಗೇರಿ ಹೇಳಿದರು. ಬುಧವಾರ ಪಟ್ಟಣದಲ್ಲಿ ಹಿಂದೂ ಸಮಾಜದ ವತಿಯಿಂದ ಕರೆದ ಪ್ರತಿಭಟನೆಯ ನೇತೃತ್ವ ವಹಿಸಿ ಮಾತನಾಡಿದ ಅವರು ನಾವು ಪ್ರಧಾನಿ ನರೇಂದ್ರ ಮೋದಿ, ಗೃಹಮಂತ್ರಿ ಅಮಿತ್ ಶಾ, ಮುಖ್ಯಮಂತ್ರಿ ಯೋಗಿ ಆದಿತ್ಯನಾಥರ ಅಭಿಮಾನಿಗಳು ಎಂಬುದಕ್ಕೆ ನಮಗೆ ಗರ್ವವಿದ್ದರೆ, ಇದಕ್ಕಿಂತಲೂ ಹೆಚ್ಚು ನಮಗೆ ನಾವು ಯತ್ನಾಳರ ಅಭಿಮಾನಿಗಳೆಂಬುದಕ್ಕೆ ಗರ್ವವಿದೆ. ನಮ್ಮ ನಾಯಕ ಯತ್ನಾಳರು ಪಕ್ಷದ ವಿರುದ್ಧ ಎಂದೂ ಮಾತನಾಡಿಲ್ಲ ಆದರೆ ಪಕ್ಷವನ್ನು ಹಿಂದುತ್ವದಿಂದ ದೂರುಸರಿಸುತ್ತಿರುವವರ ವಿರುದ್ಧ ಮಾತನಾಡಿದ್ದಾರೆ, ಬಿಜೆಪಿಯಲ್ಲಿ ಕುಟುಂಬ ರಾಜಕಾರಣ ಇಲ್ಲ ಎಂದು ಹೇಳುವ ಪಕ್ಷದ ರಾಷ್ಟ್ರಾಧ್ಯಕ್ಷ ಜೆ.ಪಿ.ನಡ್ಡಾ ಅವರಿಗೆ ರಾಜ್ಯದಲ್ಲಿರುವ ಅಪ್ಪ ಮಕ್ಕಳ ಪಕ್ಷ ಕಾಣುವದಿಲ್ಲವೆ ಎಂದು ಹೇಳಿದ ಅವರು ಉಳಿದ ರಾಜ್ಯಗಳಲ್ಲಿ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳುವ ರಾಷ್ಟ್ರಾಧ್ಯಕ್ಷರು ಕರ್ನಾಟಕದಲ್ಲೇಕೆ ಮೌನ ವಹಿಸುತ್ತಾರೆ, ಇದು ರಾಜ್ಯದಲ್ಲಿರುವ ಸಾವಿರಾರು ಹಿಂದೂ ಕಾರ್ಯಕರ್ತರ ಪ್ರಶ್ನೆಯಾಗಿದೆ, ನಾವೆಲ್ಲರೂ ಬಿಜೆಪಿ ಜೊತೆ, ಹಿಂದೂತ್ವದ ಜೊತೆ ಇದ್ದೇವೆ ಆದರೆ ನಾವು ಕುಟುಂಬ ರಾಜಕಾರಣದ ವಿರುದ್ಧ ಇದ್ದೇವೆ. ಜಿಲ್ಲೆಯಲ್ಲಿರುವ ಕೆಲವು ಮಾಜಿ ಶಾಸಕರು ಯತ್ನಾಳರ ಕುರಿತು ಟೀಕಿಸುತ್ತಿದ್ದಾರೆ ಆದರೆ ಅವರಿಗೆ ಅವರ ಕುರಿತು ಮಾತನಾಡುವ ನೈತಿಕ ಹಕ್ಕು ಇಲ್ಲ ಎಂದ ಅವರು ಇವರನ್ನು ಜನರು ತಿರಸ್ಕರಿಸಿ ಮನೆಗೆ ಕಳಿಸಿದ್ದಾರೆ. ಯತ್ನಾಳರ ಉಚ್ಚಾಟನೆಯ ನಿರ್ಧಾರದ ಕುರಿತು ಪಕ್ಷದ ವರಿಷ್ಠರು ಮರು ಪರಿಶೀಲನೆ ಮಾಡಬೇಕು ಇಲ್ಲದೆ ಹೋದರೆ ರಾಜ್ಯದಲ್ಲಿ ಪಕ್ಷಕ್ಕೆ ದೊಡ್ಡ ಹಿನ್ನಡೆ ಆಗಲಿದೆ ಎಂದರು. ನಾಗರಾಳ ಹುಲಿ ಬಸನಗೌಡ ಪಾಟೀಲ, ಜಿಪಂ ಮಾಜಿ ಉಪಾಅಧ್ಯಕ್ಷ ಪ್ರಭುಗೌಡ ದೇಸಾಯಿ, ಅಶ್ವಿನಿ ಬಿರಾದಾರ, ಕಾಶಿನಾಥ ಮುರಾಳ ಮಾತನಾಡಿ ಯತ್ನಾಳರ ಉಚ್ಚಾಟನೆಯನ್ನು ಬಲವಾಗಿ ಖಂಡಿಸಿ ಅವರನ್ನು ಪಕ್ಷಕ್ಕೆ ಮರುಸೇರ್ಪಡೆ ಮಾಡಿಕೊಳ್ಳಬೇಕೆಂದು ಆಗ್ರಹಿಸಿದರು. ತಾಳಿಕೋಟಿ ತಾಲೂಕಿನ ವಿವಿಧ ಗ್ರಾಮಗಳಿಂದ ಆಗಮಿಸಿದ ಯತ್ನಾಳ ಅಭಿಮಾನಿಗಳು ಪಟ್ಟಣದ ರಾಜವಾಡೆಯಲ್ಲಿರುವ ಕಿತ್ತೂರು ಚೆನ್ನಮ್ಮಳ ಮೂರ್ತಿಗೆ ಪುಷ್ಪ ನಮನ ಸಲ್ಲಿಸಿ ಅಲ್ಲಿಂದ ಕತ್ರಿ ಬಜಾರ್, ಶಿವಾಜಿ ಸರ್ಕಲ್, ಮಹಾರಾಣಾ ಪ್ರತಾಪ್ ಸಿಂಹ ಸರ್ಕಲ್, ಬಸ್ ನಿಲ್ದಾಣ ಮಾರ್ಗವಾಗಿ ಶ್ರೀ ಬಸವೇಶ್ವರ ವೃತ್ತದವರೆಗೆ ಬಸನಗೌಡ ಪಾಟೀಲ ಯತ್ನಾಳ ಅವರ ಭಾವಚಿತ್ರ ಕೈಯಲ್ಲಿ ಹಿಡಿದು ಪ್ರತಿಭಟನಾ ಮೆರವಣಿಗೆ ನಡೆಸಿದರು.

ಪ್ರತಿಭಟನಾ ಮೆರವಣಿಗೆಯಲ್ಲಿ ಹಿಂದೂ ಸಮಾಜದ ಗಣ್ಯರಾದ ಡಾ.ವಿ.ಎಸ್. ಕಾರ್ಚಿ,ಸುರೇಶ ಹಜೇರಿ, ಮಡುಸಾಹುಕಾರ ಬಿರಾದಾರ,ಎಂ.ಎಂ.ಪಾಟೀಲ, ಮಹಾಂತೇಶ ಮುರಾಳ,ಪ್ರಕಾಶ ಪಾಟೀಲ ಸಾಸಾಬಾಳ,ಮಂಜು ಶೆಟ್ಟಿ, ಪ್ರಕಾಶ ಹಜೇರಿ,ಅಣ್ಣಪ್ಪ ಜಗತಾಪ, ಮುದುಕಪ್ಪ ಬಡಿಗೇರ, ನಿಂಗಣ್ಣ ಕುಂಟೋಜಿ, ಹಣಮಂತರಾಯ ಢವಳಗಿ,ಶರಣಗೌಡ ಗೊಟಖಂಡಕಿ, ರಾಮನಗೌಡ ಬಾಗೇವಾಡಿ, ರತನ ಸಿಂಗ್ ಕೊಕಟನೂರ, ಅಶೋಕ ಚಿನಗುಡಿ,ರುದ್ರಗೌಡ ಪಾಟೀಲ, ಶರಣಗೌಡ ಪಾಟೀಲ, ವೀರೇಶ ಬಾಗೇವಾಡಿ, ಪ್ರಭು, ಬಿಳೇಭಾವಿ, ಶರಣಗೌಡ ಪಾಟೀಲ,ಗುರಪ್ಪಗೌಡ ಪಾಟೀಲ ಮಿಣಜಿಗಿ,ರಾಮು ಜಗತಾಪ, ಶ್ರೀಶೈಲ್ ಬಿಳೆಭಾವಿ, ಮಯೂರ ಪಾಟೀಲ,ಅಪ್ಪುಗೌಡ ಪಾಟೀಲ,ತಾಳಿಕೋಟಿ ತಾಲೂಕಿನ ಮೈಲೇಶ್ವರ, ಮಸ್ಕನಾಳ, ಮಿಣಜಗಿ, ಬೊಮ್ಮನಹಳ್ಳಿ, ಫತ್ತೆಪೂರ, ತಮ್ಮದಡ್ಡಿ,ಹಿರೂರು,ಬಳಗಾನೂರ ಹಾಗೂ ಕೊಣ್ಣೂರ ಗ್ರಾಮಗಳ ಹಿಂದೂ ಕಾರ್ಯಕರ್ತರು ಇದ್ದರು.

# ಗುರುಹಿನ ಶೆಟ್ಟಿ ಸಮಾಜದಿಂದ ಜೇಡರ ದಾಸಿಮಯ್ಯ ಜಯಂತಿ ಆಚರಣೆ

ಮಲ್ಲಮ್ಮ ನುಡಿ ವಾರ್ತೆ

ಕುಕುನೂರು: ಪಟ್ಟಣದಲ್ಲಿ ಕುರುಹಿನ ಶೆಟ್ಟಿ ಸಮಾಜದ ಶ್ರೀ ಗುರು ನೀಲಕಂಠೇಶ್ವರ ಟ್ರಸ್ಟ್ ಕಮಿಟಿ ವತಿಯಿಂದ ಜೇಡರ ದಾಸಿಮಯ್ಯ ಜಯಂತಿ ಆಚರಿಸಲಾಯಿತು.

ಗುರುವಿನ ಶೆಟ್ಟಿ ಸಮಾಜದ ಕುರುಹೀನ ಶೆಟ್ಟಿ ಸಮಾಜದ ತಾಲೂಕ ಅಧ್ಯಕ್ಷರಾದ ನೀಲಕಂಠಪ್ಪ ಬಣ್ಣದಬಾವಿ, ಹಾಗೂ ಪಟ್ಟಣ ಪಂಚಾಯತಿ ಸದಸ್ಯರು ಬಾಲರಾಜ್ ಗಾಳಿ,ಸಮಾಜದ ಉಪಾಧ್ಯಕ್ಷರಾದ ವಿಷ್ಣು ತಿಪ್ಪಾಪುರ, ಶಿವು ಭಾವಿಕಟ್ಟಿ, ವಿಜಯ್ ಕುಮಾರ ಉಂಕಿ, ರಮೇಶ್ ಸಾಲಮನಿ,ಮಂಜುನಾಥ್ ಕೂಡ್ಲಿಗಿ,ಮಾರುತಿ ದೇವಣ್ಣವರ, ಮಾರುತಿ ತಟ್ಟಿ, ರಮೇಶ್ ಹೊಸ್ಮನಿ,ಪ್ರವೀಣ್ ಕುಮಾರ್ ಬಣ್ಣದ ಬಾವಿ,ಗೋಪಾಲ್ ಬೆಣಿಕಲ್,ಲಕ್ಷ್ಮಣ ತಮ್ಮರುಗುಂಡಿ, ಹಾಗೂ ಕುರುಹಿನ ಶೆಟ್ಟಿ ಸಮಾಜದ ಕುಲಬಾಂಧವರು ಪಾಲ್ಗೊಂಡಿದ್ದರು.

## ಪೊಲೀಸ್ ಇಲಾಖೆಯು ಪವಿತ್ರವಾದ ಇಲಾಖೆ:ಘನಶ್ಯಾಮ



ಮಲ್ಲಮ್ಮ ನುಡಿ ವಾರ್ತೆ

ಬೀದರ: ಏ.2: ಪೊಲೀಸ್ ಇಲಾಖೆಯು ಪವಿತ್ರವಾದ ಇಲಾಖೆಯಾಗಿದ್ದು, ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಅಧಿಕಾರಿ, ಸಿಬ್ಬಂದಿಗಳು ತಮ್ಮ ಸಮವಸ್ತ್ರಕ್ಕೆ ಗೌರವ ನೀಡಬೇಕು ಎಂದು ನಿವೃತ್ತ ಪಿಎಸ್ಐ ಘನಶ್ಯಾಮ ಹೇಳಿದರು.

ಅವರು ಬುಧವಾರ ನಗರದ ಪೊಲೀಸ್ ಪರೇಡ್ ಮೈದಾನದಲ್ಲಿ ನಡೆದ ಪೊಲೀಸ್ ಧ್ವಜ ದಿನಾಚರಣೆ ಕಾರ್ಯಕ್ರಮದಲ್ಲಿ ಪರೇಡ್ ವಂದನೆ ಸ್ವೀಕರಿಸಿ ಮಾತನಾಡಿದರು.

ಪೊಲೀಸ್ ಅಧಿಕಾರಿ, ಸಿಬ್ಬಂದಿಗಳು ತಮ್ಮ ಕರ್ತವ್ಯದ ಜೊತೆಗೆ ಆರೋಗ್ಯದ ಕಡೆಗೂ ಗಮನ ನೀಡಬೇಕು. ಕುಟುಂಬದ ಸದಸ್ಯರಿಗೂ ಸಮಯ ನೀಡಬೇಕು. ಇತ್ತೀಚಿಗೆ ಇಲಾಖೆ ಸಾಕಷ್ಟು ಬದಲಾವಣೆ ಕಂಡಿದೆ. ಈ ಹಿಂದೆ ಪಿಎಸ್ಐ ಬಳಿ ಮಾತ್ರ ವಾಕಿ ಟಾಕಿ ಇರುತ್ತಿತ್ತು ಅವರೇ ಎಲ್ಲದರ ಮಾಹಿತಿ ನೀಡುತ್ತಿದ್ದರು. ಸೈಕಲ್ ಮೇಲೆ ಬಿಟ್ ಡ್ಯೂಟಿ ಮಾಡಬೇಕಿತ್ತು ಆದರೆ ಈಗ ಆ ವ್ಯವಸ್ಥೆ ಬದಲಾಗಿದೆ ಎಂದು ತಮ್ಮ ಸೇವಾ ದಿನಗಳನ್ನು ಮೆಲಕು ಹಾಕಿದ್ದರು.

ಇದೇ ಸಂದರ್ಭದಲ್ಲಿ ಅವರು ನಿವೃತ್ತ ಅಧಿಕಾರಿ ಹಾಗೂ ಸಿಬ್ಬಂದಿಗಳಿಗೆ ಸಮೀಪದ ಆಸ್ಪತ್ರೆಗಳಲ್ಲಿ ಆರೋಗ್ಯ ಸೇವೆ ಸಿಗುವಂತೆ ಅನುಕೂಲ ಮಾಡಿಕೊಡಬೇಕು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅವರಿಗೆ ಮನವಿ ಮಾಡಿದರು.

ಜಿಲ್ಲಾಪೊಲೀಸ್ ವರಿಷ್ಠಾಧಿಕಾರಿಗಳಾದ ಪ್ರದೀಪ್ ಗುಂಟಿ ಮಾತನಾಡಿ, ಪೊಲೀಸ್ ಅಧಿಕಾರಿ ಸಿಬ್ಬಂದಿಗಳಿಗಾಗಿ ಗೆಸ್ಟ್ ಹೌಸ್, ಟೆನಿಸ್ ಕೋರ್ಟ್, ಕ್ರಿಕೆಟ್ ಗ್ರೌಂಡ್, ಹೆಲ್ತ್ ಕಾರ್ಡ್, ಪೊಲೀಸ್ ಲೈಬ್ರರಿ, ಡಿಜಿಟಲ್ ಲೈಬ್ರರಿ, ಶಾಲಾ –ಕಾಲೇಜುಗಳಲ್ಲಿ ಹೆಚ್ಚು ಅಂಕಗಳಿಸಿದ ಪೊಲೀಸ್ ಸಿಬ್ಬಂದಿಗಳ ಮಕ್ಕಳಿಗೆ ಬಹುಮಾನ ವಿತರಣೆ, ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಸೇರಿದಂತೆ ಹತ್ತು ಹಲವಾರು ಸೌಲಭ್ಯಗನ್ನು ನೀಡಲಾಗುತ್ತಿದೆ. ಹಾಗೆಯೇ ಮುಂದಿನ ದಿನಗಳಲ್ಲಿ ಇನ್ನು ಹೆಚ್ಚಿನ ಸೌಲಭ್ಯ ಒದಗಿಸಲು ಪ್ರಯತ್ನ ಮಾಡಲಾಗುವುದು ಎಂದರು.

ಈ ಸಂದರ್ಭದಲ್ಲಿ ಹೆಚ್ಚುವರಿ ಚಂದ್ರಕಾಂತ ಪೂಜಾರಿ, ಬೀದರ ಡಿವೈಎಸ್ಪಿ ಶಿವನಗೌಡ ಪಾಟೀಲ್, ಭಾಲ್ಕಿ ಡಿವೈಎಸ್ಪಿ ಶಿವಾನಂದ ಪವಾಡಶೆಟ್ಟಿ, ಬಸವಕಲ್ಯಾಣ ಸಿಪಿಐ ಅಲಿಸಾಬ, ಜಿಲ್ಲೆಯ ಎಲ್ಲಾ ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿಗಳು ಮತ್ತು ನಿವೃತ್ತ ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿಗಳು ಸೇರಿದಂತೆ ನಗರದ ಗಣ್ಯರು ಮತ್ತು ಸಾರ್ವಜನಿಕರು ಉಪಸ್ಥಿತರಿದ್ದರು.

## ಕರ್ನಾಟಕವನ್ನು ಮಾದಕ ವಸ್ತು ಮುಕ್ತ ರಾಜ್ಯವನ್ನಾಗಿಸಲು ಸಿಎಂ ಕರೆ

ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು, ಏ.02: ಸೈಬರ್ ಅಪರಾಧಗಳು ಹಾಗೂ ಮಾದಕ ವಸ್ತು ಸಾಗಣೆ ತಡೆಗಟ್ಟುವಲ್ಲಿ ಪೊಲೀಸ್ ಇಲಾಖೆ ಪ್ರಾಮಾಣಿಕ ಪ್ರಯತ್ನ ನಡೆಸಬೇಕು. ಕರ್ನಾಟಕವನ್ನು ಮಾದಕ ವಸ್ತು ಮುಕ್ತ ರಾಜ್ಯವನ್ನಾಗಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.



ಇಂದು ಕೋರಮಂಗಲದ ಕೆಎಸ್ಆರ್‌ಪಿ ಕವಾಯತು ಮೈದಾನದಲ್ಲಿ ಪೊಲೀಸ್ ಧ್ವಜ ದಿನಾಚರಣೆ ಹಾಗೂ ಪೊಲೀಸ್ ಇಲಾಖೆಯಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದ ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರಿಗೆ ಮುಖ್ಯಮಂತ್ರಿಗಳ ಚಿನ್ನದ ಪದಕ ಪ್ರದಾನ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ರಾಜ್ಯ ಅಭಿವೃದ್ಧಿಯತ್ತ ಸಾಗಬೇಕಾದರೆ ಪೊಲೀಸ್ ಇಲಾಖೆಯ ಪಾತ್ರ ಮಹತ್ತರವಾದದ್ದು. ಜನರ ಪ್ರಾಣ, ಆಸ್ತಿ ರಕ್ಷಿಸಿ, ನೆಮ್ಮದಿ ತರುವಲ್ಲಿ ಪೊಲೀಸರ ಶ್ರಮ ಹಿರಿದು. ಇವರು ಇನ್ನೂ ಹೆಚ್ಚು ಪ್ರಾಮಾಣಿಕವಾಗಿ ಕೆಲಸ ನಿರ್ವಹಿಸಿ ರಾಜ್ಯಕ್ಕೆ ಕೀರ್ತಿ ತರಬೇಕು. ಕಳೆದ 2 ವರ್ಷಗಳಿಂದ ರಾಜ್ಯದಲ್ಲಿ ಅಪರಾಧಗಳ ಪ್ರಮಾಣ ಕಡಿಮೆಯಾಗಿದೆ. ಕಾನೂನು ಸುವ್ಯವಸ್ಥೆಗೂ ಬಂಡವಾಳ ಹೂಡಿಕೆಗೆ ಉದ್ಯೋಗ ಸೃಷ್ಟಿಗೂ ನೇರ ಸಂಪರ್ಕವಿದ್ದು, ಪೊಲೀಸ್ ಇಲಾಖೆ ಬಲವರ್ಧನೆಯಿಂದ ನಿರೀಕ್ಷಿತ ಫಲ ಸಿಗುತ್ತದೆ ಎಂದರು.

ಪ್ರಸ್ತುತಬಜೆ???ನಲ್ಲಿ ತಿಳಿಸಿರುವಂತೆ ಇಲಾಖೆಯ ಅಧಿಕಾರಿ ಸಿಬ್ಬಂದಿಗಳ ಅನುಕೂಲಕ್ಕೆ ಎಲ್ಲ ಯೋಜನೆಗಳನ್ನು ಜಾರಿಗೊಳಿಸಲಾಗುವುದು. ಗೂಂಡಾಗಳನ್ನು ಹತೋಟಿಗೆ ತಂದು ಶಾಂತಿ ಪಾಲನೆ ಮಾಡಬೇಕು ಎಂದರು.

ಮುಖ್ಯಮಂತ್ರಿಗಳು 2022, 2023 ಹಾಗೂ 2024 ನೇ ಸಾಲಿನ ಪೊಲೀಸ್ ಅಧಿಕಾರಿ, ಸಿಬ್ಬಂದಿಗಳಿಗೆ ಮುಖ್ಯಮಂತ್ರಿಗಳ ಪದಕ ಪ್ರದಾನ ಮಾಡಿದರು.

ಗೃಹ ಸಚಿವ ಡಾ. ಜಿ.ಪರಮೇಶ್ವರ್ ಮಾತನಾಡಿ, 2022, 2023 ಹಾಗೂ 2024 ನೇ ಸಾಲಿನ ಸುಮಾರು 400 ಕ್ಕೂ ಹೆಚ್ಚು ಪೊಲೀಸರಿಗೆ ಮುಖ್ಯಮಂತ್ರಿಗಳ ಪದಕ ಪ್ರದಾನ ಮಾಡಲಾಗಿದೆ. ಇಲಾಖೆಯಲ್ಲಿ ನಿಸ್ವಾರ್ಥ ಸೇವೆ ಸಲ್ಲಿಸಿ, ತಮ್ಮ ಜೀವದ ಹಂಗನ್ನು ತೊರೆದು ಸೇವೆ ಸಲ್ಲಿಸಿದವರನ್ನು ಈ ಸಂದರ್ಭದಲ್ಲಿ ನಾವು ನೆನೆಯಬೇಕಿದೆ. ಪ್ರತಿ ವರ್ಷ ಏಪ್ರಿಲ್ 2 ರಂದು "ಪೊಲೀಸ್ ಧ್ವಜ ದಿನಾಚರಣೆ" ಹಮ್ಮಿಕೊಳ್ಳಲಾಗಿದೆ ಎಂದರು.

ಕಳೆದ 2 ವರ್ಷಗಳಲ್ಲಿ ರಾಜ್ಯದಲ್ಲಿ ಯಾವುದೇ ಅಹಿತಕರ ಘಟನೆ ಸಂಭವಿಸಿಲ್ಲ. ಕೋಮುವಾದ, ನಕ್ಸಲ್ ಪಿಡುಗನ್ನು ನಾವು ಹತೋಟಿಗೆ ತಂದಿದ್ದೇವೆ. ಇಲಾಖೆಯನ್ನು ಆಧುನೀಕರಣಗೊಳಿಸಿ ಅಧಿಕಾರಿ, ಸಿಬ್ಬಂದಿಗಳ ಕ್ಷೇಮಾಭಿವೃದ್ಧಿಗೆ ಯೋಜನೆಗಳನ್ನು ಮಾನ್ಯ ಮುಖ್ಯಮಂತ್ರಿಗಳು ರೂಪಿಸಿದ್ದಾರೆ. ಇಲಾಖೆಯಲ್ಲಿ ಸವಾಲುಗಳನ್ನು ಮೀರಿ ಕೆಲಸ ನಿರ್ವಹಿಸಬೇಕಿದೆ. ಸೈಬರ್ ಅಪರಾಧ, ಮಾದಕ ವಸ್ತು ಸಾಗಣೆಯನ್ನು ತಡೆಯಬೇಕಿದೆ. ರಾಜ್ಯದಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡುವಲ್ಲಿ ಪೊಲೀಸರ ಪಾತ್ರ ಹಿರಿದು ಟ್ರಾಫಿಕ್ ನಿರ್ವಹಣೆಯಲ್ಲಿ ಹೊಸ ತಂತ್ರಾಂಶ 'ಅಸ್ಟ್ರಾಮ್' ರಾಜ್ಯ ಮಟ್ಟದಲ್ಲಿ ಮನ್ನಣೆ ಗಳಿಸಿ 'ಗೋಲ್ಡನ್ ಪೀಕಾಕ್' ಪ್ರಶಸ್ತಿಯನ್ನು ನಮ್ಮ ತಂಡ ಮುಡಿಗೇರಿಸಿದೆ ಎಂದು ತಿಳಿಸಿದರು.

ಶಾಲಾ ಕಾಲೇಜುಗಳಲ್ಲಿ ಮಾದಕದ್ರವ್ಯ ದುಷ್ಪರಿಣಾಮ ಕುರಿತಾಗಿ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ನಕ್ಸಲರ ಶರಣಾಗತಿಯಿಂದ ಕರ್ನಾಟಕ ನಕ್ಸಲ್ ಮುಕ್ತ ರಾಜ್ಯವಾಗುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಸುಮಾರು 400 ಕ್ಕೂ ಹೆಚ್ಚು ಪೊಲೀಸರಿಗೆ 2022, 2023 ಹಾಗೂ 2024 ನೇ ಸಾಲಿನ ಮುಖ್ಯಮಂತ್ರಿಗಳ ಪದಕ ಪ್ರದಾನ ಮಾಡಲಾಯಿತು.

2023ನೇ ಸಾಲಿನಲ್ಲಿ ಐಪಿಎಸ್ ಅಧಿಕಾರಿಗಳಾದ ಕಾರ್ತಿಕ್ ರೆಡ್ಡಿ, ಡಾ.ಅಶ್ವಿನಿ. ಎಂ. ಯತೀಶ್. ಎನ್. ಅನಿತಾ ಬಿ ಹದಣ್ಣವರ್ ಹಾಗೂ 2024 ನೇ ಸಾಲಿನಲ್ಲಿ ಹಿರಿಯ ಐಪಿಎಸ್ ಅಧಿಕಾರಿಗಳಾದ ಹೇಮಂತ್ ಎಂ.ನಿಂಬಾಳ್ಕರ್, ಸುಧೀರ್ ಕುಮಾರ್ ರೆಡ್ಡಿ, ಅನೂಪ್ ಎ ಶೆಟ್ಟಿ ಹಾಗೂ ಸಿ.ಕೆ.ಬಾಬಾ ಮುಖ್ಯಮಂತ್ರಿ ಪದಕ ಪಡೆದವರಲ್ಲಿ ಪ್ರಮುಖರಾಗಿದ್ದಾರೆ.

ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿಗಳಾದ ನಸೀರ್ ಅಹಮದ್, ಮುಖ್ಯಮಂತ್ರಿಗಳ ಅಪರ ಮುಖ್ಯ ಕಾರ್ಯದರ್ಶಿಗಳಾದ ಎಲ್. ಕೆ.ಅತೀಕ್, ಗೃಹ ಇಲಾಖೆಯಲ್ಲಿ ಅಪರ ಮುಖ್ಯ ಕಾರ್ಯದರ್ಶಿ ಉಮಾಶಂಕರ್ ಹಾಗೂ ಪೊಲೀಸ್ ಮಹಾನಿರ್ದೇಶಕ ಹಾಗೂ ಮಹಾನಿರೀಕ್ಷಕರಾದ ಡಾ.ಅಲೋಕ್ ಮೋಹನ್ ಉಪಸ್ಥಿತರಿದ್ದರು.

## ಸಹಕಾರಿ ಕ್ಷೇತ್ರದಲ್ಲಿ ಒಗ್ಗಟ್ಟಿನ ಮಂತ್ರ ಅವಶ್ಯ : ಡಿ.ಕೆ.ಶಿವಕುಮಾರ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಏ.2–ಒಗ್ಗಟ್ಟಿನಲ್ಲಿ ಬಲವಿದೆ ಎಂಬ ನಾಣ್ಣುಡಿಯಂತೆ ಸಹಕಾರಕ್ಷೇತ್ರದಲ್ಲಿ ಪರಸ್ಪರ ಒಗ್ಗಟ್ಟಿನಿಂದ ಕಾರ್ಯನಿರ್ವಹಿಸಿದಾಗ ಮಾತ್ರ ಸಹಕಾರಿ ಸಂಘಗಳು ಹಾಗೂ ಇತರೆ ಹಣಕಾಸು ಸಂಸ್ಥೆಗಳು ಅಭಿವೃದ್ಧಿ ಹೊಂದಲು ಸಾಧ್ಯವೆಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಹೇಳಿದರು.




ಜಿಲ್ಲೆಯ ಜಮಖಂಡಿಯ ಎಪಿಎಂಸಿ ಯಾರ್ಡನಲ್ಲಿ ಬುಧವಾರ ಹಮ್ಮಿಕೊಂಡ ದಿ.ಜಮಖಂಡಿ ಅರ್ಬನ್ ಕೋ–ಆಪ್ ಬ್ಯಾಂಕ್ ಲಿಮಿಟೆಡ್‌ನ ನೂತನ ಕಟ್ಟಡದ ಉದ್ಘಾಟಿಸಿ ಮಾತನಾಡಿದ ಅವರು ಸಹಕಾರಿ ಸಂಘಗಳು ಹಾಗೂ ಸಹಕಾರಿ ಬ್ಯಾಂಕ್‌ಗಳು ಗ್ರಾಮೀಣ ಪ್ರದೇಶದ ಜನರ ಧ್ವನಿಯಾಗಿ ಕಾರ್ಯನಿರ್ವಹಿಸುತ್ತಿವೆ. ಬಾಗಲಕೋಟೆ–ವಿಜಯಪುರ ಅವಳಿ ಜಿಲ್ಲೆಗಳಲ್ಲಿ ಸಹಕಾರಿ ರಂಗ ಪ್ರಗತಿಯಲ್ಲಿದ್ದು, ಅದಕ್ಕಾಗಿ ಶ್ರಮಿಸುತ್ತಿರುವ ಎಸ್. ಆರ್.ಪಾಟೀಲ, ಶಿವಾನಂದ ಪಾಟೀಲ, ಮುರುಗೇಶ ನಿರಾಣಿ, ಅಜಯಕುಮಾರ ಸರನಾಯಕ, ಪ್ರಕಾಶ ತಪಶೆಟ್ಟಿ ಸಹಕಾರಿ ಕ್ಷೇತ್ರವನ್ನು ಮುಂಚೂಣಿಯಲ್ಲಿ ತಂದಿದ್ದಾರೆ ಎಂದರು.

ಸಹಕಾರಿ ತತ್ವದಂತೆ ಹಳ್ಳಿಗೊಂದು ಶಾಲೆ, ಆಸ್ಪತ್ರೆ ಹಾಗೂ ಗ್ರಾಮ ಪಂಚಾಯತಿ ಇರಬೇಕೆಂಬುದುವು ಮಹಾತ್ಮಾಗಾಂಧಿ ಜಿಯುವರ ಕನಸಾಗಿತ್ತು. ಆ ದಿಶೆಯಲ್ಲಿಯೇ ಅವರು ಹಳ್ಳಿಗಳಲ್ಲಿ ನಾಡಿನ ಪ್ರಾಣವಿದೆ ಎಂಬ ಮಾತು ಹೇಳಿದ್ದರು. ಆದ್ದರಿಂದ ಅವಳಿ ಜಿಲ್ಲೆಗಳಲ್ಲಿ ಸಹಕಾರಿ ಕ್ಷೇತ್ರ ಬೆಳೆದಿದ್ದರಿಂದ ಈ ಭಾಗದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಸಕ್ಕರೆ ಕಾರ್ಖಾನೆಗಳು ಹುಟ್ಟಿಕೊಂಡಿವೆ. ಇದರಿಂದ ರೈತರ, ಕಾರ್ಮಿಕರ ಹಾಗೂ ಸಾರ್ವಜನಿಕರ ಬದುಕಿನಲ್ಲಿ ಬದಲಾವಣೆಯಾಗಿದೆ ಎಂದು ಹೇಳಿದರು.

ಜನರ ಆಶೀರ್ವಾದದಿಂದ ಅಧಿಕಾರಕ್ಕೆ ಬಂದ ನಮ್ಮ ಸರಕಾರ ಎಲ್ಲ ಜನಾಂಗದ ಹಿತದೃಷ್ಟಿಯಿಂದ 5 ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿದ್ದು, ಇದರಿಂದ ರಾಜ್ಯದ ಪ್ರತಿಯೊಬ್ಬ ನಾಗರಿಕರಿಗೂ ಅನುಕೂಲವಾಗಿದೆ. ಅಲ್ಲದೇ ಬೆಂಗಳೂರು ನಗರ ಸೇರಿದಂತೆ ರಾಜ್ಯದ ಅನೇಕ ನಗರಗಳು ಉನ್ನತೀಕರಣಗೊಂಡಿವೆ. ನಮ್ಮ ನೀರು ನಮ್ಮ ಹಕ್ಕು ಎಂಬ ಆಂದೋಲನದಲ್ಲಿ ಈ ಭಾಗದ ಜೀವನಾಡಿಯಾದ ಕೃಷ್ಣಾ ಮೇಲ್ದಂಡೆ ಯೋಜನೆಯ ಆಲಮಟ್ಟಿ ಜಲಾಶಯ ಇಂದು ರೈತರ ಪಾಲಿನ ವರದಾನವಾಗಿದೆ. ಇದಕ್ಕೆ ನಾಂದಿ ಹಾಡಿದ ಹಿಂದಿನ ಪ್ರಧಾನಿ ಲಾಲಬಹದ್ದೂರ ಶಾಸ್ತ್ರೀ ಅವರು ಈ ಆಣೆಕಟ್ಟು ನಿರ್ಮಾಣಕ್ಕೆ ಅಡಿಪಾಯ ಹಾಕಿರುವದನ್ನು ಸ್ಮರಿಸಬಹುದಾಗಿದೆ ಎಂದರು.

ಆಲಮಟ್ಟಿ ಆಣೆಕಟ್ಟಿಗೆ ಸಂಬಂಧಿಸಿದಂತೆ ಇಲ್ಲಿಯವರೆಗೆ ಗೆಜೆಟ್ ಪಾಸ್ ಆಗಿಲ್ಲ. ಅದಕ್ಕಾಗಿ ಅವಳಿ ಜಿಲ್ಲೆ ಶಾಸಕರು, ವಿರೋಧ ಪಕ್ಷದ ನಾಯಕರು ಒತ್ತಾಯ ಮಾಡಿದ್ದು, ಈ ವಿಷಯ ಮುಖ್ಯಮಂತ್ರಿಗಳು ಹಾಗೂ ನಾವು ಗಂಭಿರವಾಗಿ ಪರಿಗಣಿಸಿದ್ದೇವೆ. ಶತಾಯಗತಾಯ ಆಲಮಟ್ಟಿ ಜಲಾಶಯ ಎತ್ತರವನ್ನು 524 ಮೀಟರಗೆ ಎತ್ತರಿಸುವದರ ಜೊತೆಗೆ ಸಂತ್ರಸ್ತರಿಗೆ ಹಾಗೂ ಈ ಭಾಗದ ಎಲ್ಲ ರೈತರ ಕನಸು ನನಸಾಗಿಸುವ ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ತಿಳಿಸಿದ ಅವರು ಗೆಜೆಟ್ ನೋಟಿಪಿಕೇಷನ್ ಸಿದ್ದತೆ ಮಾಡಿಕೊಳ್ಳಲಾಗಿದ್ದು, ಅದಕ್ಕಾಗಿ 22 ಸಾವಿರ ಕೋಟಿ ರೂ. ನಿಗದಿ ಮಾಡಲಾಗಿದೆ. 5 ವರ್ಷಕ್ಕೆ 2 ಲಕ್ಷ ಕೋಟಿ ರೂ. ಬೇಡಿಕೆ ಇದೆ. ಆದರೆ ಆ ಕಾರ್ಯವಾಗಿಲ್ಲ. ಕಾರಣ 5 ಗ್ಯಾರಂಟಿ ಯೋಜನೆಗೆ ಹಣ ಹೊಂದಿಸಬೇಕಾಗಿರುವದರಿಂದ ಮುಂದಿನ ದಿನಗಳಲ್ಲಿ ಕಾರ್ಯರೂಪ ತರಲು ಸರಕಾರ ಬದ್ಧವಾಗಿದೆ ಎಂದರು.

ಅಥಣಿ ಶಾಸಕ ಲಕ್ಷ್ಮಣ ಸವದಿ ಮಾತನಾಡಿ, ಅಂದು ಸಹಕಾರಿ ಸಚಿವರಾಗಿದ್ದ ಡಿ.ಕೆ.ಶಿವಕುಮಾರ ಅವರು ಅಪೆಕ್ಸ ಬ್ಯಾಂಕ್ ಮೂಲಕ ಸಾಕ್ಷಷ್ಟು ಸಹಾಯ ಮಾಡಿದ್ದರಿಂದ ನಮ್ಮ ಭಾಗಗಳಲ್ಲಿರುವ ಸಕ್ಕರೆ ಕಾರ್ಖಾನೆಗಳಿಗೆ ಬೆಳೆಯಲು ಸಾಧ್ಯವಾಯಿತು ಎಂದರು.

ಸಕ್ಕರೆ ಸಚಿವ ಶಿವಾನಂದ ಪಾಟೀಲ ಮಾತನಾಡಿ ಸಹಕಾರ ಚಳುವಳಿ ಪ್ರಾರಂಭವಾಗಿದ್ದು, ಕರ್ನಾಟಕದಲ್ಲಿ ಆದರೆ ಬೆಳೆದಿದ್ದು ಮಾತ್ರ ಮಹಾರಾಷ್ಟ್ರದಲ್ಲಿ ಭವಿಷ್ಯದಲ್ಲಿ ಮುಖ್ಯಮಂತ್ರಿಯಾದರೆ ಸಹಕಾರಿ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆ ಕೊಡುವಿರೆಂದು ನಂಬಿದ್ದೇವೆ ಎಂದರು.

ಅಬಕಾರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪೂರ ಮಾತನಾಡಿ ಸಹಕಾರಿ ಕ್ಷೇತ್ರದಲ್ಲಿ ಪ್ರವೇಶಿಸಿದವರು ಇಂದು ರಾಜಕೀಯ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿದ್ದಾರೆ. ಇದರಿಂದ ಸಹಕಾರಿ ಕ್ಷೇತ್ರದಲ್ಲಿ ಎಷ್ಟೊಂದು ಶಕ್ತಿ ಎಂದು ತಿಳಿದುಕೊಳ್ಳಬಹುದಾಗಿದೆ ಎಂದರು.

ಪ್ರಾರಂಭದಲ್ಲಿ ಜಮಖಂಡಿ ಅರ್ಬನ್ ಕೋ–ಆಪ್ ಬ್ಯಾಂಕ್‌ನ ಅಧ್ಯಕ್ಷ ರಾಹುಲ್ ಕಲೂತಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಕೊಲ್ಲಾಪೂರ ಕನ್ನೇರಿ ಮಠದ ಅದೃಶ್ಯಕಾಡಸಿದ್ದೇಶ್ವರ ಸ್ವಾಮಿಗಳು, ಜಮಖಂಡಿ ಮುತ್ತಿನಕಂತಿ ಹಿರೇಮಠದ ಶಿವಲಿಂಗ ಶಿವಾಚಾರ್ಯರು, ಕಲ್ಯಾಣ ಮಠದ ಗೌರಿಶಂಕರ ಸ್ವಾಮಿಗಳು ಸಾನಿಧ್ಯವಹಿಸಿದ್ದರು. ಬೀಳಗಿ ಶಾಸಕ ಹಾಗೂ ಹಟ್ಟಿ ಚಿನ್ನದ ಗಣಿ ನಿಯಮಿತದ ಅಧ್ಯಕ್ಷ ಜೆ.ಟಿ.ಪಾಟೀಲ, ವಿಧಾನ ಪರಿಷತ್ ಸದಸ್ಯ ಪಿ.ಎಚ್.ಪೂಜಾರ, ಜಮಖಂಡಿ ಶಾಸಕ ಜಗದೀಶ ಗುಡಗುಂಟಿ, ಮಾಜಿ ಸಚಿವರಾದ ಎಸ್.ಆರ್.ಪಾಟೀಲ, ಮುರುಗೇಶ ನಿರಾಣಿ, ಮಾಜಿ ಶಾಸಕರಾದ ಆನಂದ ನ್ಯಾಮಗೌಡ, ಶ್ರೀಕಾಂತ ಕುಲಕರ್ಣಿ, ಜಿಲ್ಲಾಧಿಕಾರಿ ಜಾನಕಿ ಕೆ.ಎಂ, ಜಿ.ಪಂ ಸಿಇಓ ಶಶಿಧರ ಕುರೇರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಮರನಾಥ ರೆಡ್ಡಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಗುಳೇದಗುಡ್ಡ ಭಾಗದಲ್ಲಿ ಮತ್ತೆ ಚಿರತೆ ಹಾವಳಿ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಏ.2–ಜಿಲ್ಲೆಯ ಗುಳೇದಗುಡ್ಡ ಭಾಗದಲ್ಲಿ ಮತ್ತೆ ಚಿರತೆಯ ಹಾವಳಿ ಕಂಡು ಬಂದಿದ್ದು, ಮಂಗಳವಾರ ನಾಯಿಯೊಂದನ್ನು ಹರಿದು ತಿಂದಿರುವ ವಿಷಯವನ್ನು ಅರಣ್ಯ ಇಲಾಖೆ ದೃಢಪಡಿಸಿದೆ.

ಗುಳೇದಗುಡ್ಡ ತಾಲೂಕಿನ ಲಾಯದಗುಂದಿ ವಲಯದಲ್ಲಿ ಚಿರತೆ ದಾಳಿ ಮಾಡಿ ನಾಯಿಯನ್ನು ಹರಿದು ತಿಂದಿದ್ದು, ಜನ ಮತ್ತೆ ಭಯಭೀತರಾಗಿದ್ದಾರೆ.

ನಾಯಿಯನ್ನು ಹರಿದು ತಿಂದಿರುವುದು ಚಿರತೆಯೇ ಎಂದು ಹೇಳಿರುವ ಬಾದಾಮಿ ವಲಯ ಅರಣ್ಯಾಧಿಕಾರಿಗಳು, ಚಿರತೆಯ ಹೆಜ್ಜೆ ಗುರುತು ಮೂಡಿರುವುದು ದೃಢವಾಗಿದೆ ಎಂದಿದ್ದಾರೆ. ಕಳೆದ ಕೆಲ ದಿನಗಳ ಹಿಂದೆ ಗುಳೇದಗುಡ್ಡ ಭಾಗದ ಗುಡ್ಡದಲ್ಲಿ ಚಿರತೆ ದಾಳಿಗೆ ಜಾನುವಾರುಗಳು ಬಲಿಯಾಗಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದಾಗಿದೆ.

ಚಿರತೆಯ ಹಾವಳಿಗೆ ಮತ್ತೆ ಜನ ಆತಂಕಗೊಂಡಿದ್ದು, ಕೂಡಲೇ ಚಿರತೆಯನ್ನು ಹಿಡಿಯಬೇಕು ಎಂದು ಅರಣ್ಯ ಇಲಾಖೆಯನ್ನು ಒತ್ತಾಯಿಸಿದ್ದಾರೆ.

## ಮುಡಾ ಪ್ರಕರಣದಲ್ಲಿ ಸಿಎಂಗೆ ಮತ್ತೆ ಸಂಕಷ್ಟ: ಲೋಕಾಯುಕ್ತ ಪೊಲೀಸರ ಬಿ ರಿಪೋರ್ಟ್ ಪ್ರಶ್ನಿಸಿ ಇಡಿ ಅರ್ಜಿ

ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು:ಏ.2: ಮುಡಾ ನಿವೇಶನ ಹಂಚಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಇತರರಿಗೆ ಮತ್ತೆ ಸಂಕಷ್ಟ ಎದುರಾಗಿದ್ದು, ಪ್ರಕರಣ ಸಂಬಂಧ ಲೋಕಾಯುಕ್ತ ಪೊಲೀಸರು ಸಲ್ಲಿಸಿದ ಬಿ ರಿಪೋರ್ಟ್ ಅನ್ನು ಜಾರಿ ನಿರ್ದೇಶನಾಲಯ(ಇಡಿ) ಪ್ರಶ್ನಿಸಿದೆ.



ಲೋಕಾಯುಕ್ತ ಪೊಲೀಸರ ಬಿ ರಿಪೋರ್ಟ್ ಪ್ರಶ್ನಿಸಿ ಸಂಸದರು ಮತ್ತು ಶಾಸಕರ ವಿಶೇಷ ನ್ಯಾಯಾಲಯದಲ್ಲಿ ಇಡಿ ಮಂಗಳವಾರ ತಕರಾರು ಅರ್ಜಿಯನ್ನು ಸಲ್ಲಿಸಿದೆ.

ಕೇಂದ್ರ ತನಿಖಾ ಸಂಸ್ಥೆಯು ತನ್ನ ಅರ್ಜಿಯಲ್ಲಿ ಪಿಎಂಎಲ್ಎ–2002ರ ಉದ್ದೇಶ ಮತ್ತು ಕಾರಣಗಳನ್ನು ಉಲ್ಲೇಖಿಸಿದೆ, "ಹಣ ವರ್ಗಾವಣೆಯು ದೇಶಗಳ ಹಣಕಾಸು ವ್ಯವಸ್ಥೆಗಳಿಗೆ ಮಾತ್ರವಲ್ಲದೆ ಅವುಗಳ ಸಮಗ್ರತೆ ಮತ್ತು ಸಾರ್ವಭೌಮತ್ವಕ್ಕೂ ಗಂಭೀರ ಬೆದರಿಕೆಯನ್ನು ಒಡ್ಡುತ್ತದೆ ಎಂಬುದನ್ನು ಅರಿತುಕೊಳ್ಳಬೇಕು ಎಂದಿದೆ.

ಮುಖ್ಯಮಂತ್ರಿಗಳು ಮತ್ತು ಅವರ ಕುಟುಂಬದ ವಿರುದ್ಧ ಸಾಕಷ್ಟು ಸಾಕ್ಷಿಗಳಿವೆ. ನಮ್ಮ ತನಿಖೆಯಲ್ಲಿ ಅವರ ತಪ್ಪುಗಳು ಸಾಬೀತಾಗಿವೆ. ಹೀಗಿದ್ದರೂ ಅವರು ಯಾವ ತಪ್ಪು ಮಾಡಿಲ್ಲ ಎನ್ನಲಾಗಿದೆ. ಯಾವ ತಪ್ಪು ಮಾಡಿಲ್ಲ ಎಂದು ಹೇಳಿರುವುದು ಸರಿಯಲ್ಲ. ಹೀಗಾಗಿ ಲೋಕಾಯುಕ್ತ ವರದಿಯನ್ನು ತಿರಸ್ಕರಿಸಬೇಕು ಎಂದು ಇಡಿ ಮನವಿ ಮಾಡಿದೆ.

ಇಡಿಯ ಈ ತಕರಾರು ಅರ್ಜಿಯನ್ನು ವಿಚಾರಣೆಗೆ ತೆಗೆದುಕೊಳ್ಳಬೇಕೆ ಅಥವಾ ಬೇಡವೇ ಎಂಬುದನ್ನು ನ್ಯಾಯಾಲಯ ನಿರ್ಧರಿಸುತ್ತದೆ.

ಮುಡಾ ನಿವೇಶನ ಹಂಚಿಕೆ ಪ್ರಕರಣದ ತನಿಖೆ ನಡೆಸಿದ ಲೋಕಾಯುಕ್ತ ಪೊಲೀಸರು, ಸಾಕ್ಷ್ಯಾಧಾರಗಳ ಕೊರತೆಯಿಂದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಅವರ ಪತ್ನಿ ಪಾರ್ವತಿ ವಿರುದ್ಧದ ಆರೋಪಗಳನ್ನು ಸಾಬೀತುಪಡಿಸಲು ಸಾಧ್ಯವಿಲ್ಲ ಎಂದು ಹೇಳಿ ಬಿ ರಿಪೋರ್ಟ್ ಸಲ್ಲಿಸಿದ್ದರು.

## ಆರ್‌ಬಿಐ ನೂತನ ಡೆಪ್ಯೂಟಿ ಗವರ್ನರ್ ಆಗಿ ಪೂನಮ್ ಗುಪ್ತಾ ನೇಮಕ

ನವದೆಹಲಿ:ಏ.2: ಎನ್‌ಸಿಎಇಆರ್‌ನ ಮಹಾನಿರ್ದೇಶಕಿ, ಆರ್ಥಿಕ ತಜ್ಞೆ ಹಾಗೂ ಪ್ರಧಾನ ಮಂತ್ರಿಯ ಆರ್ಥಿಕ ಸಲಹಾ ಮಂಡಳಿಯ ಮಾಜಿ ಸದಸ್ಯೆ ಪೂನಮ್ ಗುಪ್ತಾ ಮೂರು ವರ್ಷಗಳ ಅವಧಿಗೆ ಆರ್‌ಬಿಐನ ಡೆಪ್ಯೂಟಿ ಗವರ್ನರ್ ಆಗಿ ನೇಮಕಗೊಂಡಿದ್ದಾರೆ.



ನ್ಯಾಷನಲ್ ಕೌನ್ಸಿಲ್ ಆಫ್ ಅಪ್ಲೈಡ್ ಎಕನಾಮಿಕ್ ರಿಸರ್ಚ್‌ಗೆ ಸೇರುವ ಮೊದಲು, ಗುಪ್ತಾ ಅವರು ಅಂತರರಾಷ್ಟ್ರೀಯ ಹಣಕಾಸು ನಿಗಮದಲ್ಲಿ ಜಾಗತಿಕ ಮ್ಯಾಕ್ರೋ ಮತ್ತು ಮಾರುಕಟ್ಟೆ ಸಂಶೋಧನೆಯ ಪ್ರಮುಖ ಅರ್ಥಶಾಸ್ತ್ರಜ್ಞರಾಗಿ ಸೇವೆ ಸಲ್ಲಿಸಿದರು. ಈ ಹಿಂದೆ ಭಾರತೀಯ ಅಂತರರಾಷ್ಟ್ರೀಯ ಆರ್ಥಿಕ ಸಂಬಂಧಗಳ ಸಂಶೋಧನಾ ಮಂಡಳಿಯಲ್ಲಿ ಮತ್ತು ದೆಹಲಿ ಸ್ಕೂಲ್ ಆಫ್ ಎಕನಾಮಿಕ್ಸ್‌ನಲ್ಲಿ ಪ್ರಾಧ್ಯಾಪಕರಾಗಿದ್ದರು. ಅಲ್ಲದೇ ಅಂತರರಾಷ್ಟ್ರೀಯ ಹಣಕಾಸು ನಿಧಿಯಲ್ಲಿ ಸಂಶೋಧಕರೂ ಆಗಿದ್ದರು.

ಪೂನಮ್ 16ನೇ ಹಣಕಾಸು ಆಯೋಗದ ಸಲಹಾ ಮಂಡಳಿಯ ಸದಸ್ಯರೂ ಹೌದು. ಇತ್ತೀಚಿಗೆ ಆರ್‌ಬಿಐನ ಡೆಪ್ಯೂಟಿ ಗವರ್ನರ್ ಹುದ್ದೆಯಿಂದ ನಿವೃತ್ತಿ ಹೊಂದಿದ ಎಂ.ಬಿ.ಪಾತ್ರಾ ಅವರ ಹುದ್ದೆಯನ್ನು ಪೂನಮ್ ಗುಪ್ತಾ ಅಲಕಂರಿಸಲಿದ್ದಾರೆ.

## ಚಿನ್ನಾಭರಣ ಕಳವು: ಮೂವರ ಬಂಧನ

### 7.70 ಲಕ್ಷ ರೂ.ಮೌಲ್ಯದ ಚಿನ್ನಾಭರಣ ವಾರಸುದಾರರಿಗೆ ಹಸ್ತಾಂತರ: ಎಸ್‌ಪಿ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಏ.2: ಸೇಡಂ ಮತ್ತು ಸುಲೇಪೇಟ್ ಬಸ್ ನಿಲ್ದಾಣಗಳಲ್ಲಿ ಮಹಿಳೆಯರ ಚಿನ್ನಾಭರಣ ಕಳ್ಳತನ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರು ಮಹಿಳೆಯರನ್ನು ಸೇಡಂ ಮತ್ತು ಸುಲೇಪೇಟ್ ಪೊಲೀಸರು ಬಂಧಿಸಿ 7.70 ಲಕ್ಷ ರೂಪಾಯಿ ಮೌಲ್ಯದ ಚಿನ್ನಾಭರಣ ಜಪ್ತಿ ಮಾಡಿದ್ದಾರೆ ಎಂದು ಎಸ್‌ಪಿ ಅಡ್ಡೂರು ಶ್ರೀನಿವಾಸಲು ತಿಳಿಸಿದರು.







ನಗರದ ಪೊಲೀಸ ಭವನದಲ್ಲಿಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸೇಡಂ ಬಸ್ ನಿಲ್ದಾಣದಲ್ಲಿ ನಡೆದ ಚಿನ್ನಾಭರಣ ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ ಕಲಬುರಗಿ ಬಾಪು ನಗರದ ಏಕತಾ ತಂದೆ ಕೈಲಾಸ ಉಪಾಧ್ಯಾಯ(24) ಎಂಬುವವರನ್ನು ಬಂಧಿಸಿ 3 ತೊಲೆಯ ಬಂಗಾರದ ಮಂಗಳಸೂತ್ರ, 5 ಗ್ರಾಂ.ಬಂಗಾರದ 1 ಉಂಗುರ, 5 ಗ್ರಾಂ.ಬಂಗಾರದ ಕೈಗಡಗ ಮತ್ತು 3 ತೊಲೆಯ ಬಂಗಾರದ ತಾಳಿ ಚೈನ ಸೇರಿ 6.50 ಲಕ್ಷ ರೂಪಾಯಿ ಮೌಲ್ಯದ ಚಿನ್ನಾಭರಣ ಜಪ್ತಿ ಮಾಡಲಾಗಿದೆ. ಸುಲೇಪೇಟ್ ಬಸ್ ನಿಲ್ದಾಣದಲ್ಲಿ ನಡೆದ ಚಿನ್ನಾಭರಣ ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ ಕಲಬುರಗಿಯ ಬಾಪು ನಗರದ ಕಿರಣ್ ಗಂಡ ಚಾರ್ಲಿ ಉಪಾಧ್ಯ (30) ಮತ್ತು ಸಿಮ್ರಾನ್ ಗಂಡ ಅರ್ಜುನ ಉಪಾಧ್ಯ (26) ಎಂಬುವವರನ್ನು ಬಂಧಿಸಿ 1.20 ಲಕ್ಷ ರೂ.ಮೌಲ್ಯದ ಚಿನ್ನಾಭರಣ ಜಪ್ತಿ ಮಾಡಲಾಗಿದೆ. ಜಪ್ತಿ ಮಾಡಿದ ಚಿನ್ನಾಭರಣವನ್ನು ವಾರಸುದಾರರಿಗೆ ಹಸ್ತಾಂತರಿಸಿ ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ತಿಳಿಸಿದರು. ಸೇಡಂ ಬಸ್ ನಿಲ್ದಾಣದಲ್ಲಿ ನಡೆದ ಮಹಿಳೆಯರ ಚಿನ್ನಾಭರಣ ಕಳ್ಳತನ ಪ್ರಕರಣ ಪತ್ತೆಗೆ ಹೆಚ್ಚುವರಿ ಎಸ್‌ಪಿ, ಚಿಂಚೋಳಿ ಉಪ ವಿಭಾಗದ ಡಿಎಸ್‌ಪಿ, ಸೇಡಂ ಸಿಪಿಐ ಅವರ ಮಾರ್ಗದರ್ಶನದಲ್ಲಿ ಪಿಎಸ್ಐ ಮಂಜುನಾಥ ರೆಡ್ಡಿ, ಪ್ರಭಾರ ಪಿಎಸ್ಐ ಮಡಿವಾಳಪ್ಪ, ಎಎಸ್ಐ ಯಲಗುರೇಶ, ಸಿಬ್ಬಂದಿಗಳಾದ ಹೊನ್ನಪ್ಪ, ನಾಗರಾಜ, ಬಾಲಕೃಷ್ಣ ರೆಡ್ಡಿ, ನಿರ್ಮಲಾ ಅವರನ್ನು ಒಳಗೊಂಡ ತಂಡ, ಚಿಂಚೋಳಿ ತಾಲ್ಲೂಕಿನ ಸುಲೇಪೇಟ್ ಬಸ್ ನಿಲ್ದಾಣದಲ್ಲಿ ನಡೆದ ಚಿನ್ನಾಭರಣ ಕಳ್ಳತನ ಪ್ರಕರಣ ಪತ್ತೆಗೆ ಹೆಚ್ಚುವರಿ ಎಸ್‌ಪಿ, ಚಿಂಚೋಳಿ ಡಿಎಸ್‌ಪಿ ಮತ್ತು ಸುಲೇಪೇಟ್ ಸಿಪಿಐ ಅವರ ಮಾರ್ಗದರ್ಶನದಲ್ಲಿ ಸುಲೇಪೇಟ್ ಪಿಎಸ್ಐ ಅಮರ ಕುಲಕರ್ಣಿ ಅವರ ನೇತೃತ್ವದಲ್ಲಿ ಸಿಬ್ಬಂದಿಗಳಾದ ಚಂದ್ರಕಾಂತ, ಮೋಹನರೆಡ್ಡಿ, ಸದ್ದಾಮ, ಮರಲಿಂಗಪ್ಪ, ಅನೀಲ, ಭಾಗಮ್ಮ ಅವರನ್ನು ಒಳಗೊಂಡ ತಂಡ ರಚಿಸಲಾಗಿತ್ತು. ಈ ತಂಡಗಳು ತನಿಖೆ ನಡೆಸಿ ಘಟನೆ ನಡೆದ 24 ಗಂಟೆಗಳಲ್ಲಿ ಆರೋಪಿಗಳನ್ನು ಬಂಧಿಸಿ ಚಿನ್ನಾಭರಣ ಜಪ್ತಿ ಮಾಡುವಲ್ಲಿ ಯಶಸ್ವಿಯಾಗಿವೆ ಎಂದು ತಿಳಿಸಿದರು.

24 ಗಂಟೆಗಳಲ್ಲಿ ಆರೋಪಿಗಳನ್ನು ಬಂಧಿಸಿ ಚಿನ್ನಾಭರಣ ಜಪ್ತಿ ಮಾಡುವಲ್ಲಿ ಯಶಸ್ವಿಯಾಗಿರುವ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ಕಾರ್ಯವನ್ನು ಅವರು ಶ್ಲಾಘಿಸಿದರು.

ಹೆಚ್ಚುವರಿ ಎಸ್‌ಪಿ ಮಹೇಶ ಮೇಘಣ್ಣನವರ್ ಸೇರಿದಂತೆ ಇತರ ಹಿರಿಯ ಪೊಲೀಸ್ ಅಧಿಕಾರಿಗಳು ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

## ಬೆಲೆ ಏರಿಕೆಗೆ ಕೇಂದ್ರ ಸರ್ಕಾರವೇ ಕಾರಣ: ಪರಮೇಶ್ವರ್

ಬೆಂಗಳೂರು:ಏ.2: ಬೆಲೆ ಏರಿಕೆಗೆ ಕೇಂದ್ರ ಸರ್ಕಾರವೇ ಕಾರಣ ಎಂದು ಗೃಹ ಸಚಿವ ಪರಮೇಶ್ವರ್ ದೂರಿದ್ದಾರೆ. ಪೊಲೀಸ್ ಧ್ವಜ ದಿನಾಚರಣೆ ಪ್ರಯುಕ್ತ ಇಂದು ಕೋರಮಂಗಲದ ಕೆಎಸ್ಆರ್‌ಪಿ ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪೊಲೀಸ್ ಅಧಿಕಾರಿಗಳಿಗೆ ಮುಖ್ಯಮಂತ್ರಿ ಪದಕ ಪದಕ ನೀಡಿ ಗೌರವಿಸಲಾಯಿತು. ಈ ವೇಳೆ ಮಾಧ್ಯಮಗಳ ಜೊತೆ ಮಾತನಾಡಿದ ಪರಮೇಶ್ವರ್, ಕೇಂದ್ರ ಸರ್ಕಾರದ ನೀತಿಗಳಿಂದಾಗಿ ಬೆಲೆ ಏರಿಕೆಯಾಗಿದೆ. ಗ್ಯಾರಂಟಿಗೂ ಬೆಲೆ ಏರಿಕೆಗೆ ಸಂಬಂಧ ಇಲ್ಲ ಎಂದು ತಿಳಿಸಿದರು. ರಾಜ್ಯ ಮತ್ತು ಕೇಂದ್ರದ ಸಂಬಂಧ ಸರಿಯಿಲ್ಲ. ನಾವು 20 ಸಾವಿರ ಕೋಟಿ ರೂ. ಗೂ ಹೆಚ್ಚು ತೆರಿಗೆ ಕೊಡುತ್ತೇವೆ. ಅವರು ನಮಗೆ ಬರಬೇಕಾದ ಪಾಲು ವಾಪಸ್ ಕೊಡುತ್ತಿಲ್ಲ. ಹೀಗಾಗಿ ಕೆಲ ಅನಿವಾರ್ಯ ಕಾರಣಗಳಿಂದಾಗಿ ಬೆಲೆ ಏರಿಕೆ ಆಗುತ್ತಿದೆ ಎಂದು ಸರ್ಕಾರದ ಬೆಲೆ ಏರಿಕೆಯನ್ನು ಸಮರ್ಥಿಸಿಕೊಂಡರು. ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಿಎಂ ಸಿದ್ದರಾಮಯ್ಯ, ಗೃಹ ಸಚಿವ, ಡಿಜಿಪಿ ಅಲೋಕ್ ಮೋಹನ್ ಸೇರಿದಂತೆ ರಾಜ್ಯದ ಎಲ್ಲಾ ಹಿರಿಯ ಅಧಿಕಾರಿಗಳು ಭಾಗವಹಿಸಿದರು. ಸುಮಾರು 400 ಹೆಚ್ಚು ಅಧಿಕಾರಿಗಳಿಗೆ ಸಿಎಂ ಪದಕ ವಿತರಣೆ ಮಾಡಿ ಗೌರವಿಸಿದರು.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.
Editor: Ramesh Reddy, Office Ph. No: +91 9449732000.